Presence of Ministers in the House (Contd)

SRI AZEEZ SAIT.—Sir, ours is a joint responsibility. Sometimes we have to attend both the Houses, and therefore some Ministers will be in this House and some in the other House. Today the Question Hour was over in this House early and even the Calling Attention matter was also over in five minutes. Even the laying of Papers was also over. Generally, after Question Hour, the Call-Attention matter and other matters used to take one to one-and-half hours. This is the practice. Sir, I am not commenting on your Ruling. But this Ruling definitely makes a little fast tightening over the movement of Ministers.

Therefore I would request you Sir kindly to consider the ruling already given in respect of the presence of Ministers in the House.

MR. SPEAKER.—The ruling has already been given. It is for the Ministers and the hon. members to note it.

SRI AZEEZ SAIT.—I respeet the ruling of the Chair, but provision is always there for the revision That even a death sentence may be revised. Even a person who is ordered to be hanged is given an opportunity to say something. After all you are the master of this House.

SRI A. LAKSHMI SAGAR.—If the Ministers feel that they are under the orders of hanging, they are themselves responsible but certainly not the Speaker.

Budget Estimates for 1978-79—General Discussion

† ಶ್ರೀ ಪಿ. ಎನ್. ರೆಡ್ಡಿ (ಮಾಲೂರು).—ಸನ್ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ನನ್ನ ಅನೇಕ ಮಾನ್ಯ ಮಿತ್ರರು ಈ ಆಯವ್ಯಯ ಪತ್ರವನ್ನು ಕುರಿತು ತಮ್ಮ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ; ಮತ್ತು ಅದರ ಜೊತೆಯಲ್ಲೇ ತಮ್ಮ ಅನುಮೋದನೆಯನ್ನೂ ಕೂಡ ಕೊಟ್ಟಿದ್ದಾರೆ. ಈ ಆಯವ್ಯಯ ಪಟ್ಟಿಯನ್ನು ನೋಡುತ್ತಿದ್ದರೆ ಸಾಮಾಜಿಕ ಪರಿವರ್ತನೆಗಾಗಿ ಅನೇಕ ಉತ್ತಮವಾದ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ಹಾಕಿಕೊಂಡಿದೆ. ನೀರಾವರಿ, ವಿದ್ಯಾಭ್ಯಾಸ, ಕೈಗಾರಿಕೆ, ಆಹಾರಧಾನ್ಯ ಸಂಗ್ರಹಣೆ, ಇತ್ಯಾದಿ ಅನೇಕ ರೀತಿಯಲ್ಲಿ ಸಮಾಜಕ್ಕೆ ಆರ್ಥಿಕವಾಗಿ ಅನುಕೂಲವಾಗುವ ರೀತಿಯಲ್ಲಿ ನಮ್ಮ ಆರ್ಥಿಕ ಸಚಿವರು ಈ ಆಯವ್ಯಯ ಪ್ರತ್ರವನ್ನು ನಮ್ಮ ಮುಂದಿಟ್ಟಿದ್ದಾರೆ. ನಾನು ಇದನ್ನು ಮೆಚ್ಚುವುದರ ಜೊತೆಗೆ ನನ್ನ ತಾಲ್ಲೂಕಿನ ವಿಚಾರವಾಗಿ ಕೆಲವು ಸಲಹೆಗಳನ್ನು ಮಾನ್ಯ ಮಂತ್ರಿವರ್ಯರಲ್ಲಿ ಹೇಳಿಕೊಳ್ಳಬೇಕೆಂದು ಬಹಳ ಕುತೂಹಲಿಯಾಗಿದ್ದೇನೆ.

ಮಾನ್ಯ ಅಧ್ಯಕ್ಷರೆ, ಮೊದಲನೆಯದಾಗಿ ಹೇಳುವುದಾದರೆ, ನಮ್ಮ ಮಾಲೂರು ತಾಲ್ಲೂಕು ಏನಿದೆ ಅಲ್ಲಿ ನೀರಿಗೆ ಅಭಾವ ಇದೆ, ಅಲ್ಲಿನ ಜನ ಬಹಳ ಬಡತನದಿಂದ ತೊಳಲುತ್ತಿದ್ದಾರೆ, ಇಷ್ಟಾದರೂ ಆ ಪ್ರದೇಶವನ್ನು "ಸ್ಕೇರ್ಸಿಟಿ ಏರಿಯಾ" ಎಂದು ಸರ್ಕಾರದವರು ಡಿಕ್ಲೇರ್ ಮಾಡಿಲ್ಲ. ಹಿಂದಿನ ಮಂತ್ರಿ ಮಂಡಲವಾಗಲಿ. ಅಥವಾ ಹಿಂದೆ ಅಲ್ಲಿಂದ ಆರಿಸಿ ಬಂದಿದ್ದ ಸದಸ್ಯರಾಗಲಿ ಏತಕ್ಕೆ ಸುಮ್ಮನಿದ್ದರೋ ನನಗಂತೂ ಅರ್ಥವಾಗುತ್ತಿಲ್ಲ. ಈ ಸಂದರ್ಭದಲ್ಲಿ ನಮ್ಮ ಕೈಗಾರಿಕಾ ಮಂತ್ರಿಯವರು ಈ ಸದನದಲ್ಲಿಲ್ಲವಾದರೂ ಮಾನ್ಯ ಹಣಕಾಸಿನ ಮಂತ್ರಿಯವರೇ ಈ ವಿಷಯವನ್ನು ಅವರಿಗೆ ತಿಳಿಸುತ್ತಾರೆಂದು ನಾನು ಅಂದುಕೊಂಡಿದ್ದೇನೆ. ೧೯೭೫ನೇ ಇಸವಿಯಲ್ಲೇ ನಮ್ಮ ತಾಲ್ಲೂಕನ್ನು ಇಂಡಸ್ಟ್ರಿಯಲ್ ಏರಿಯಾ ಮಾಡುವ ಸಲುವಾಗಿ ಸುಮಾರು ೨೫೦ ಎಕರೆ ಜಮೀನನ್ನು ಸರ್ಕಾರ ಸ್ವಾಧೀನ ಪಡಿಸಿಕೊಳ್ಳಲು ಅಲ್ಲಿನ

ಸಂಬಂಧಪಟ್ಟ ಜಮೀನ್ದಾರರನ್ನು ಕರೆಸಿಕೊಂಡು ಅವರ ಜೊತೆಯಲ್ಲಿ ಪ್ರಸ್ತಾಪ ಮಾಡಿದ್ದರು. ಇದಾಗಿ ಮೂರು ವರ್ಷಗಳಾದರೂ ಕೂಡ ಸರ್ಕಾರದವರು ಈ ಉದ್ದೇಶವನ್ನು ಕಾರ್ಯ ರೂಪಕ್ಕೆ ತರಲು ಸಾಧ್ಯವಾಗಿಲ್ಲ. ಆದ್ದರಿಂದ ಈಗಲಾದರೂ ಸರ್ಕಾರದವರು ಇದರ ಬಗ್ಗೆ ತಮ್ಮ ಗಮನ ಹರಿಸಿ ಆದಷ್ಟು ಜಾಗ್ರತೆಯಾಗಿ ಇದನ್ನು ಕಾರ್ಯ ರೂಪಕ್ಕೆ ತರಬೇಕೆಂದು ನಾನು ವಿನಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ನಮ್ಮಲ್ಲಿ ಬಹಳ ಜನ ವಿದ್ಯಾವಂತರಿದ್ದು ಅವರೆಲ್ಲಾ ನಿರುದ್ಯೋಗಿಗಳಾಗಿ ಅಲೆಯುತ್ತಿದ್ದಾರೆ. ಇವತ್ತು ತಾವು ನಮ್ಮ ''ತಾಲ್ಲೂಕನ್ನು ಇಂಡಸ್ಟ್ರಿಯಲ್ ಏರಿಯಾ'' ಎಂದು ಮಾಡಿ ಅಲ್ಲಿನ ವಿದ್ಯಾವಂತರಿಗೆ ಉದ್ಯೋಗವನ್ನು ಕಲ್ಪಿಸಿಕೊಟ್ಟರೆ ಬಹಳ ಅನುಕೂಲ ಮಾಡಿಕೊಟ್ಟಂತಾಗುತ್ತದೆಂದು ಹೇಳಬಯಸುತ್ತೇನೆ.

ಸ್ವಾಮಿ, ಇನ್ನು ವಿದ್ಯಾಭ್ಯಾಸದ ಬಗ್ಗೆ ಒಂದು ಮಾತು ಹೇಳಬೇಕೆಂದರೆ, ಇವತ್ತು ಸರ್ಕಾರದವರು ಅನೇಕ ರೀತಿಯಲ್ಲಿ ಶಾಲಾ ಕಾಲೇಜುಗಳಿಗೆ ಸಹಾಯ ಮಾಡುತ್ತಿದ್ದಾರೆ. ಆದರೆ, ಇಲಾಖೆಯ ಆಡಳಿತಾಧಿಕಾರಿಗಳ ಅಶ್ರದ್ಧೆಯಿಂದಲೋ, ಅಥವಾ ಅವರ ಬೇಜವಾಬ್ದಾರಿಯಿಂದಲೋ ಇವತ್ತು ವಿದ್ಯೆ ಕಲಿಯುವ ಮಕ್ಕಳಿಗೆ ಬಹಳ ತೊಂದರೆಯಾಗುತ್ತಿದೆ. ಉದಾಹರಣೆಗೆ ಹೇಳುವುದಾದರೆ, ನಮ್ಮ ಹಳ್ಳಿಯಲ್ಲಿ ಈ ಸಾರಿ ಸುಮಾರು ೫೪ ಜನ ವಿದ್ಯಾರ್ಥಿಗಳ ಪೈಕಿ ಎಸ್.ಎಸ್.ಎಲ್.ಸಿ. ಯಲ್ಲಿ ಕೇವಲ ೩ ಜನ ಮಾತ್ರ ಪಾಸ್ ಆಗಿದ್ದಾರೆ. ಈ ರೀತಿ ಉಪಾಧ್ಯಾಯರುಗಳು ಶಾಲೆಗಳಲ್ಲಿ ಪಾಠ ಮಾಡುತ್ತಿದ್ದರೆ, ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಿ ತಮ್ಮ ಮಕ್ಕಳ ಬಗ್ಗೆ ಏನೇನೋ ಆಸೆ ಆಕಾಂಕ್ಷೆಗಳನ್ನು ಇಟ್ಟುಕೊಂಡಿರುವ ತಂದೆ ತಾಯಿಗಳ ಆಸೆಗಳೆಲ್ಲವೂ ನಿಷ್ಪ್ರಯೋಜನವಾಗುತ್ತವೆ. ಆದುದರಿಂದ ನಾನು ಮಾನ್ಯ ಮಂತ್ರಿವರ್ಯರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಯಾವ ಉಪಾಧ್ಯಾಯರೇ ಆಗಲಿ, ಒಂದು ಸ್ಥಳದಲ್ಲಿ ೩ ವರ್ಷ ಸೇವೆ ಸಲ್ಲಿಸಿದ ಕೂಡಲೇ ಅಲ್ಲಿಂದ ಬೇರೆ ಕಡೆಗೆ ವರ್ಗ ಮಾಡಬೇಕು. ಹಾಗೆ ಮಾಡದೇ ಹೋದರೆ ಅವರು ರಾಜಕೀಯ ವ್ಯಕ್ತಿಗಳ ಜೊತೆಯಲ್ಲಿ ಸೇರಿ ತಾವೂ ರಾಜಕೀಯ ಮಾಡುವುದಕ್ಕೆ ಪ್ರಾರಂಭಿಸುತ್ತಾರೆ. ಆದ್ದರಿಂದ ಇದನ್ನು ಒಂದು ಕಾನೂನು ಮಾಡಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಮಾನ್ಯ ಅಧ್ಯಕ್ಷರೆ, ನನ್ನ ಇನ್ನೊಂದು ಬೇಡಿಕೆ ಏನೆಂದರೆ, ಸಾಮಾನ್ಯವಾಗಿ ಹಳ್ಳಿಗಳಲ್ಲಿ ಹುಡುಗರಿಗೆ ಸರಿಯಾದ ವಿದ್ಯಾ ಸೌಕರ್ಯ ಸಿಕ್ಕುವುದಿಲ್ಲವಾದ್ದರಿಂದ ಅವರು ರ್‍ಯಾಂಕ್, ಅಥವಾ ಫಸ್ಟ್ ಕ್ಲಾಸ್ ಬರುವುದಕ್ಕೆ ಅವಕಾಶವಿರುವುದಿಲ್ಲ. ಆದ್ದರಿಂದ ಅವರಿಗೆ ಯಾವ ವಿಷಯದಲ್ಲಿ ಪರ್ಸೆಂಟೇಜ್ ಎಷ್ಟೇ ಕಡಿಮೆ ಇದ್ದರೂ ಕೂಡ ಅವರಿಗೆ ಶಾಲಾ ಕಾಲೇಜುಗಳಲ್ಲಾಗಲಿ, ಅಥವಾ ಉದ್ಯೋಗದಲ್ಲಾಗಲಿ ಆದ್ಯತೆ ನೀಡಬೇಕೆಂದು ನನ್ನ ವಿನಯಪೂರ್ವಕ ಪ್ರಾರ್ಥನೆ.

ಮಾನ್ಯ ಸಭಾಧ್ಯಕ್ಷರೆ, ಇನ್ನು ರಸ್ತೆ ಸಾರಿಗೆ ಬಗ್ಗೆ ಒಂದೆರಡು ಮಾತು ಹೇಳಬೇಕೆಂದರೆ, ನಮ್ಮ ತಾಲ್ಲೂಕಿನಲ್ಲಿ ಪ್ರಯಾಣಿಕರ ಅಗತ್ಯಕ್ಕೆನುಗುಣವಾಗಿ ಬಸ್‌ಗಳಿಲ್ಲದೆ ಬಹಳ ತೊಂದರೆಯಾಗಿದೆ. ಅದರಲ್ಲೂ ಮದುವೆ ಕಾಲದಲ್ಲಿ ಮತ್ತು ಜಾತ್ರೆ ಸಮಯದಲ್ಲಂತೂ ಇನ್ನೂ ಹೆಚ್ಚು ಅನಾನುಕೂಲವಾಗುತ್ತದೆ. ಈ ಸಾರಿಗೆ ಸಂಸ್ಥೆಯ ಅಧಿಕಾರಿಗಳು ಬರೀ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಮಾತ್ರ ಹೆಚ್ಚು ಹೆಚ್ಚು ಬಸ್‌ಗಳನ್ನು ಹಾಕುತ್ತಾರೆಯೇ ಹೊರತು ಹಳ್ಳಿಗಳ ಕಡೆ ಹಾಕುವುದಿಲ್ಲ. ಇದು ನಮ್ಮ ತಾಲ್ಲೂಕಿನ ಹಳ್ಳಿಗಳಲ್ಲಿ ಮಾತ್ರವಲ್ಲ ಎಲ್ಲ ಕಡೆಗಳಲ್ಲೂ ಇದೇ ರೀತಿ ಮಾಡುತ್ತಿದ್ದಾರೆ. ಆದ್ದರಿಂದ ಮಾನ್ಯ ಸಾರಿಗೆ ಖಾತೆ ಸಚಿವರು ಇದರ ಬಗ್ಗೆ ಸೂಕ್ತ ಗಮನ ಹರಿಸಿ ನಮ್ಮ ತಾಲೂಕಿಗೆ ಹೆಚ್ಚು ಬಸ್ ಸೌಕರ್ಯವನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಸ್ವಾಮಿ, ನನ್ನ ಇನ್ನೊಂದು ವಿನಂತಿ ಏನೆಂದರೆ, ಇವತ್ತು ಎಂಪ್ಲಾಯ್‌ಮೆಂಟ್ ಆಫೀಸ್‌ಗಳಲ್ಲಿ ಸುಮಾರು ೮-೯ ವರ್ಷಗಳ ಹಿಂದೆ ತಮ್ಮ ಹೆಸರುಗಳನ್ನು ರಿಜಿಸ್ಟರ್ ಮಾಡಿಸಿದ್ದರೂ ಅವರಿಗೆ ಇದುವರೆಗೂ ಒಂದೂ ಸಹ ಇಂಟರ್‌ವ್ಯೂ ಬಂದಿರುವುದಿಲ್ಲ. ಆದರೆ, ಕೆಲವರಿಗೆ ೩-೪ ವರ್ಷದೊಳಗೇ ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಿಂದ ಉದ್ಯೋಗ ಸಿಕ್ಕಿದೆ. ಇದು ಏನು ಎಂದು ನನಗೆ ಅರ್ಥವಾಗುತ್ತಿಲ್ಲ. ಆದ್ದರಿಂದ ನಾನು ಈ ಸಭೆಯ ಮೂಲಕ ಎಂಪ್ಲಾಯ್‌ಮೆಂಟ್ ಅಧಿಕಾರಿಗಳನ್ನು ಕೇಳುಕೊಳ್ಳುವುದೇನೆಂದರೆ ಯಾರು ಯಾರು ೮-೯ ವರ್ಷಗಳ ಹಿಂದೆ ರಿಜಿಸ್ಟರ್ ಮಾಡಿಸಿರುತ್ತಾರೆ ಅಂಥವರಿಗೆ ಪ್ರಯಾರಿಟಿ ಬೇಸಿಸ್ ಮೇಲೆ ಉದ್ಯೋಗವನ್ನು ಕಲ್ಪಿಸಿಕೊಡಬೇಕು ಎಂದು. ನಾವು ಹರಿಜನ ಗಿರಿಜನರಿಗೆ ಸಹಾಯ ಮಾಡುತ್ತಿದ್ದೇವೆ ಬಾಯಲ್ಲಿ ಹೇಳುತ್ತಿದ್ದೇವೆ. ಆದರೆ ಅದರ ಪೂರ್ಣ ಪ್ರಯೋಜನ ಅವರಿಗೆ ಸಿಕ್ಕುತ್ತಿಲ್ಲ. ಇವತ್ತು ಎಷ್ಟೋ ಜನ ವಿದ್ಯಾರ್ಥಿಗಳು ಎಸ್. ಎಸ್. ಎಲ್. ಸಿ. ಪಾಸ್ ಮಾಡಿಕೊಂಡ

ಮೇಲೆ ಪಟ್ಟಣಕ್ಕೆ ಬಂದು ತಮ್ಮ ಹೆಸರನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ರಿಜಿಸ್ಟರ್ ಮಾಡಿಸುವುದಕ್ಕೂ ಕೂಡ ಜೇಬಿನಲ್ಲಿ ಕಾಸು ಇರುವುದಿಲ್ಲ. ಅಂಥವರಿಗೆ ಹಳ್ಳಿಗಳಲ್ಲೇ ಏನಾದರೂ ಉದ್ಯೋಗವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುವಂತೆ ಸರ್ಕಾರದವರು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನವರಿಗೆ ಆದೇಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

2–30 ಪಿ.ಎಂ.

ಇನ್ನು ಉಳುವವನಿಗೆ ಜಮೀನು ಎಂದು ೪೦ ವರ್ಷಗಳ ಹಿಂದೆ ನಮಗಾಗಿ ದುಡಿದು ಮಡಿದಂಥ ರಾಜಕೀಯ ವ್ಯಕ್ತಿಗಳು ಮತ್ತು ಈಗಿನ ರಾಜಕೀಯ ವ್ಯಕ್ತಿಗಳು ಘೋಷಿಸಿ ಅದನ್ನು ಜಾರಿಗೆ ತರಲು ಬಹಳವಾಗಿ ಶ್ರಮಿಸಿ ಉಳುವವನಿಗೇಗೆ ಜಮೀನು ಕೊಟ್ಟಿದ್ದಾರೆ. ಇಂತಹ ಕಾರ್ಯಕ್ರಮವನ್ನು ತೆಗೆದು ಕೊಂಡಿರುವ ನಮ್ಮ ಮಾನ್ಯ ಮುಖ್ಯ ಮಂತ್ರಿಗಳಿಗೂ ಮತ್ತು ಅವರ ನಾಯಕತ್ವಕ್ಕೂ ಬಹಳ ಸಂತೋಷ ಪಡಬೇಕಾಗಿರುತ್ತದೆ. ರಾಷ್ಟ್ರದಲ್ಲಿ ಪ್ರಥಮವಾಗಿ ಜಾರಿಗೆ ತಂದ ರಾಜ್ಯವೆಂದರೆ ನಮ್ಮ ರಾಜ್ಯವಾಗಿರುತ್ತದೆ. ಆದರೂ ಲ್ಯಾಂಡ್ ಟ್ರಿಬ್ಯುನಲ್ ಎಂದು ಈವಾಗ ಏನು ಇರುತ್ತವೆ ಇವುಗಳು ಸರಿಯಾಗಿ ಕೆಲಸ ಮಾಡದೆ ಬಹಳ ತೊಂದರೆಗಳು ಬರುತ್ತಾ ಇವೆ. ಆದ್ದರಿಂದ ಲ್ಯಾಂಡ್ ಟ್ರಿಬ್ಯುನಲ್‌ಗಳಲ್ಲಿ ಎಲ್ಲ ತಾಲ್ಲೂಕು ಗಳಲ್ಲಿಯೂ ಕಮಿಟಿ ಮಾಡಿ ಆದಷ್ಟು ಜಾಗ್ರತೆ ಕೇಸ್‌ಗಳನ್ನು ಡಿಸ್‌ಪೋಸ್ ಮಾಡಲು ಅವಕಾಶ ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸಣ್ಣ ನೀರಾವರಿ ಬಗ್ಗೆ ಹೇಳುವುದಾದರೆ ಸಣ್ಣ ನೀರಾವರಿಗಾಗಿ ಸರ್ಕಾರದವರು ಅನೇಕ ವಿದ ವಾದ ಕಾರ್ಯಕ್ರಮಗಳನ್ನು ಕೈಗೊಂಡು ಬಹಳವಾಗಿ ಹಣವನ್ನು ವ್ಯಯ ಮಾಡುತ್ತಿದ್ದಾರೆ. ಆದರೆ ಅನೇಕ ಅಚ್ಚುಕಟ್ಟುದಾರರಿಗೆ ಸರಿಯಾಗಿ ನೀರು ದೊರೆಯದೆ ಬೆಳೆಯನ್ನು ಮಾಡಲು ತೊಂದರೆಯನ್ನು ಪಡುತ್ತಿರುತ್ತಾರೆ. ಆದ್ದರಿಂದ ಆದಷ್ಟು ನೀರನ್ನು ಸಂಗ್ರಹಿಸಿ ಸಕಾಲದಲ್ಲಿ ನೀರನ್ನು ಒದಗಿಸಿದ್ದೇ ಆದರೆ ಒಂದು ಬೆಳೆಯಾಗುವ ಕಡೆ ಎರಡು ಬೆಳೆಯನ್ನು ಬೆಳೆಸಲು ಸಾಧ್ಯವಾಗುತ್ತದೆ. ಕೆಲವು ಕಡೆಗಳಲ್ಲಿ ಎರಡು ತಿಂಗಳಾದರೂ ನೀರು ಬಾರದೆ ತೊಂದರೆಯಾಗಿರುವುದು ಉಂಟು. ಆದ್ದರಿಂದ ನೀರಾವರಿ ಮಂತ್ರಿಗಳು ಇತ್ತಕಡೆ ಗಮನ ಕೊಟ್ಟು ನೀರು ಪೋಲಾಗದಂತೆ ಹೆಚ್ಚು ಉಪಯೋಗವಾಗುವಂತೆ ನೋಡಿಕೊಳ್ಳ ಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ಆರ್ಥಿಕ ಮಂತ್ರಿಗಳಲ್ಲಿ ಒಂದು ಬಿನ್ನಹವೇನೆಂದರೆ ಈಗ ಏನು ಪ್ರೊಫೇಷನಲ್ ಟ್ಯಾಕ್ಸ್ ಎಂದು ವಿಧಿಸಿದ್ದಾರೆ ಇದನ್ನು ಬೇಡವೆಂದು ಹೇಳುವುದಿಲ್ಲ. ಆದರೆ ಇದರ ಬಗ್ಗೆ ಹೇಳುವು ದಾದರೆ ಏಳು ವರ್ಷ, ಆರು ವರ್ಷವಾಗಿರುವ ಜೂನಿಯರ್ ಲಾಯರ್ಸ್‌ಗಳಿಗೂ ವರ್ಷಕ್ಕೆ ೧೫೦ ರೂಪಾಯಿಗಳನ್ನು ಕೊಡಬೇಕೆಂದು ಹೇಳಿದ್ದಾರೆ. ಇದರಿಂದ ಜೂನಿಯರ್ ಲಾಯರುಗಳಿಗೆ ತೊಂದರೆಯಾಗಿರುತ್ತದೆ, ಏತಕ್ಕೆಂದರೆ ಅವರಿಗೆ ಬಹಳ ಕಡಿಮೆ ಉತ್ಪತ್ತಿ ಇರುತ್ತದೆ. ಆರವತ್ತು ವರ್ಷ ಗಳಾದವರಿಗೆ ಪ್ರೊಫೆಷನಲ್ ಟ್ಯಾಕ್ಸ್ ಕೊಡುವಹಾಗೆ ಇಲ್ಲವೆಂದು ಹೇಳುತ್ತಾರೆ, ಆದರೆ ನಾನು ಹೇಳುವುದೇ ನೆಂದರೆ ಈ ವೃತ್ತಿಯಲ್ಲಿ ೬೦ ವರ್ಷ ಆದಮೇಲೇನೆ ಸಂಪಾದನೆ ಜಾಸ್ತಿಯಾಗಿರುತ್ತದೆ. ಹೆಚ್ಚು ಸಂಪಾದನೆ ಯಾಗುವವರಿಗೆ ಟ್ಯಾಕ್ಸ್ ಇಲ್ಲ, ೬–೭ ವರ್ಷವಾದವರಿಗೆ ಟ್ಯಾಕ್ಸ್ ಕೊಡಬೇಕೆಂದು ಹೇಳಿದರೆ ಯಾವ ನ್ಯಾಯ, ಆದ್ದರಿಂದ ಈಗ ಏನು ವಿದಿಸಿದ್ದೀರಿ ಅವರಲ್ಲಿ ಸ್ವಲ್ಪ ಭಾಗವನ್ನಾದರೂ ಕಡಿಮೆ ಮಾಡಬೇಕೆಂದು ಹೇಳುತ್ತೇನೆ. ಸಂಪೂರ್ಣವಾಗಿ ತೆಗೆದು ಹಾಕಬೇಕೆಂದು ಹೇಳುತ್ತಿಲ್ಲ, ಅರ್ಧಭಾಗವನ್ನಾದರೂ ದಯವಿಟ್ಟು ಮನ್ನ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಎಂ. ಯಾಹ್ಯಾ.—ಪ್ರೊಫೆಷನಲ್ ಟ್ಯಾಕ್ಸ್ ಕಟ್ಟಲಿಕ್ಕೆ ತೊಂದರೆಯಾಗಿದ್ದರೆ ಏನು ಮಾಡಬೇಕೆಂಬುದರ ಬಗ್ಗೆ ಮಾನ್ಯ ಸದಸ್ಯರು ಸೂಚನೆ ಕೊಟ್ಟರೆ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಪಿ ಎನ್. ರೆಡ್ಡಿ.—ಮಂತ್ರಿಯವರು ಉದಾರ ಮನಸ್ಸುಳ್ಳವರಾಗಿದ್ದಾರೆ. ಈ ಪ್ರೊಫೆಸ ನಲ್ ಟ್ಯಾಕ್ಸನ್ನು ಸ್ವಲ್ಪ ಮಟ್ಟಿಗೆ ಮನ್ನ ಮಾಡಬೇಕೆಂದು ನನ್ನ ಪ್ರಾರ್ಥನೆ.

ಶ್ರೀ ಎಸ್. ಎಂ. ಯಾಹ್ಯಾ.—ಮಾನ್ಯ ಸದಸ್ಯರು ಪ್ರೊಫೆಷನಲ್ ಟ್ಯಾಕ್ಸ್ ಬಗ್ಗೆ ಸಂಪೂರ್ಣವಾಗಿ ತೆಗೆಯದೆ ಲಾಯರ್ಸ್ ಬಗ್ಗೆ ಏನಾದರೂ ಸ್ವಲ್ಪ ಒಳ್ಳೆಯ ರೀತಿಯಲ್ಲಿ ಸಹಾಯ ಮಾಡಬೇಕೆಂದು ಕೇಳು ತ್ತಿದ್ದಾರೆ. ಪ್ರೊಫೇಷನ್ ಟ್ಯಾಕ್ಸ್ ಬಗ್ಗೆ ನಾವು ಕಡಿಮೆ ಮಾಡುವುದು ಬಹಳ ಕಷ್ಟವಾದ ಸಂಗತಿ ಯಾಗಿರುತ್ತದೆ. ಇದನ್ನು ರ್ಯಾಷನಲೈಸ್ ಮಾಡಬೇಕೆಂದು ಆಲೋಚನೆ ಮಾಡುತಿ ದ್ದೇವೆ.

ಶ್ರೀ ಪಿ. ಎನ್. ರೆಡ್ಡಿ.—ರಾಷ್ಟ್ರೀಕರಣ ಮಾಡಿದರೆ ಒಳ್ಳೆಯದು, ಅದನ್ನು ನಾನು ಸ್ವಾಗತ ಮಾಡುತ್ತೇನೆ.

ಇನ್ನು ಕಾನೂನು ಸಚಿವರಿಗೆ ಒಂದು ಅರ್ಜಿಯನ್ನು ಕೊಟ್ಟಿದ್ದೇವೆ. ನಮ್ಮ ತಾಲ್ಲೂಕಿಗೆ ಒಂದು ಮುನಸೀಫ್ ಕೋರ್ಟ್ ಬೇಕೆಂದು, ಜೊತೆಗೆ ಅನೇಕ ಸಲ ಹೇಳಿದ್ದೇನೆ ಮುನಸೀಫ್‌ಗಳಿಗೆ ಬರುವ ಸಂಬಳ ಬಹಳ ಕಡಿಮೆ ಇರುತ್ತದೆ. ಅವರಿಗೆ ಇರುವುದಕ್ಕೆ ವಸತಿ ಸೌಕರ್ಯವಿಲ್ಲದೆ ಬಹಳ ತೊಂದರೆ ಪಡುತ್ತಿದ್ದಾರೆ. ಆದ್ದರಿಂದ ಆದಷ್ಟು ಜಾಗ್ರತೆ ಕಾನೂನು ಮಂತ್ರಿಗಳಿಗೆ ನಮ್ಮ ಆರ್ಥಿಕ ಮಂತ್ರಿಗಳ ಮೂಲಕ ಕೇಳಿಕೊಳ್ಳುತ್ತೇನೆ ಅವರಿಗೆ ವಸತಿ ಸೌಕರ್ಯವನ್ನು ಒದಗಿಸಿಕೊಡಬೇಕೆಂದು.

ಇನ್ನು ದೇವಸ್ಥಾನಗಳ ಬಗ್ಗೆ ಹೇಳುವುದಾದರೆ ನಮ್ಮ ಜನಗಳು ಹಿಂದುಗಳಾಗಲಿ ಮುಸಲ್ಮಾನರಾಗಲಿ ದೇವರಲ್ಲಿ ನಂಬಿಕೆಯುಳ್ಳಂಥ ಜನ. ನಮ್ಮ ದೇಶ ಸೆಕ್ಯೂಲರ್ ಸ್ಟೇಟ್ ಎನೆಸಿಕೊಂಡಮೇಲೆ ಎಲ್ಲ ಮತದ ಜನರನ್ನು ಒಂದೇ ರೀತಿಯಲ್ಲಿ ಕಾಣಬೇಕು. ನಮ್ಮ ರಾಜ್ಯದಲ್ಲಿ ಅನೇಕ ಕಡೆ ದೇವಸ್ಥಾನಗಳು, ಮಸೀದಿಗಳು ದುರಸ್ತಿಯಲ್ಲಿದ್ದು ಹಾಳಾಗುತ್ತಿವೆ. ಇದಕ್ಕಾಗಿ ಸರ್ಕಾರದಲ್ಲಿ ಫಂಡ್ಸ್ ಇದ್ದರೂ ಕೂಡ ಅಧಿಕಾರಿಗಳು ಅದರ ದುರಸ್ತಿಯ ಕಡೆಗೆ ಹೆಚ್ಚು ಗಮನವನ್ನು ಕೊಡುತ್ತಿಲ್ಲ. ಆದ್ದರಿಂದ ಎಲ್ಲೆಲ್ಲಿ ಹಳ್ಳಿಗಳಲ್ಲಿಯೇ ಆಗಲಿ ಪಟ್ಟಣಗಳಲ್ಲಿಯೇ ಆಗಲಿ ದೇವಸ್ಥಾನದ ಕಟ್ಟಡದ ಕಡೆ ವಿಶೇಷವಾದ ಗಮನವನ್ನು ಕೊಡಬೇಕೆಂದು ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಶಿವಾರ ಪಟ್ಟಣವೆಂದು ಇದ್ದು ಇಡೀ ರಾಜ್ಯದ ಗಮನವನ್ನೇ ಸೆಳೆದಿರುತ್ತದೆ. ಇಡೀ ಕರ್ನಾಟಕಕ್ಕೆ ಬಂದಂಥ ವಾಸಿಸುವ, ಜನರು ಇಲ್ಲಿಯ ಕಲೆಯನ್ನು ಬಹಳವಾಗಿ ಮೆಚ್ಚಿಕೊಂಡಿರುತ್ತಾರೆ. ಇಲ್ಲಿ ಒಳ್ಳೆಯ ಕಲೆಗಾರರು ಇರುತ್ತಾರೆ. ಇವರಿಗೆ ನಮ್ಮ ಸರ್ಕಾರದಿಂದ ಯಾವ ರೀತಿಯಾದ ಆರ್ಥಿಕ ಸಹಾಯವು ದೊರೆಯುತ್ತಿಲ್ಲ. ಎಲ್ಲರೂ ಬಂದು ನೋಡಿ ಕೊಂಡಾಡುತ್ತಿದ್ದಾರೆ. ಇಂಥ ಕಲೆ ಯಾರು ಮಾಡಿದ್ದು ಎಂದು ಕೇಳುತ್ತಾರೆ. ಅಂಥ ಕುಶಲಶಿಲ್ಪ ಕಲಾಗಾರರಿಗೆ ಹೆಚ್ಚಿನ ಉತ್ತೇಜನ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನು ಪ್ರಾಹಿಬಿಷನ್ ಬಗ್ಗೆ ಹೇಳುವುದಾದರೆ, ನಿಜಕ್ಕೂ ಇದನ್ನು ಸ್ವಾಗತಿಸಲೇ ಬೇಕಾಗುತ್ತದೆ. ನಮ್ಮ ಮಾನ್ಯ ಮಂತ್ರಿಗಳು ಆಯವ್ಯಯ ಪತ್ರದಲ್ಲಿ ಪಾನ ನಿರೋಧವನ್ನು ಹಂತ ಹಂತವಾಗಿ ಕಡಿಮೆ ಮಾಡುತ್ತೇವೆಂದು ಹೇಳಿರುವುದು ಸಂತೋಷದ ಸಂಗತಿಯಾಗಿರುತ್ತದೆ. ಹಳ್ಳಿಗಳಲ್ಲಿ ಏನು ನಡೆಯುತ್ತಿರುತ್ತದೆಂಬುದು ಪಟ್ಟಣ ವಾಸಿಗಳಿಗೆ ಗೊತ್ತಾಗುವುದಿಲ್ಲ. ಹಳ್ಳಿಗಳಲ್ಲಿ ಕಳ್ಳಬಟ್ಟಿಯನ್ನು ತಯಾರು ಮಾಡುವುದು ಜಾಸ್ತಿಯಾಗಿರುತ್ತದೆ, ಇದರಿಂದ ಜನರು ತಮ್ಮ ಆರೋಗ್ಯವನ್ನು ಕೆಡಿಸಿಕೊಳ್ಳುವುದಲ್ಲದೆ ತಮ್ಮ ಆಸ್ತಿ ಪಾಸ್ತಿಯನ್ನು ಹಾಳು ಮಾಡಿಕೊಂಡು ಅನೇಕ ವಿಧವಾದ ತೊಂದರೆಗಳಿಗೆ ಒಳಗಾಗುತ್ತಿದ್ದಾರೆ. ಆದ್ದರಿಂದ ಈ ಪಾನನಿರೋಧವನ್ನು ಹಂತ ಹಂತವಾಗಿ ಜಾರಿಗೆ ತರುವುದನ್ನು ನಾನು ಸ್ವಾಗತಿಸುತ್ತೇನೆ.

ಇನ್ನು ಲ್ಯಾಂಡ್ ರಿಫಾರಮ್ಸ್ ಆಕ್ಟ್ ಪ್ರಕಾರ ನಮ್ಮ ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದಾರೆ. ಪೊಜಿಷನ್ ಮಾತ್ರ ಕೊಡುತ್ತಿದ್ದಾರೆ, ಆದರೆ ಓನರ್ ಶಿಪ್ ಕೊಡುತ್ತಿಲ್ಲವೆಂದು. ಇದಕ್ಕೆ ಕಾರಣವೇನೆಂದರೆ ಫಂಡಮೆಂಟಲ್ ರೈಟ್ಸ್‌ನಲ್ಲಿ ಪ್ರಾಪರ್ಟಿ ರೈಟ್ಸನ್ನೇ ತೆಗೆದುಬಿಡಬೇಕೆಂಬ ಸಲಹೆಗಳಿರುವುದರಿಂದ ಓನರ್‌ಷಿಪ್ ಕೊಡದೆ ಪೊಜಿಷನ್ ಸರ್ಟಿಫಿಕೇಟನ್ನು ಕೊಡುತ್ತಾ ಇರುವುದು ಒಳ್ಳೆಯದು. ಓನರ್ ಷಿಪ್ ಕೊಡಬೇಕೆಂದು ಕೇಳುತ್ತಿರುವುದು ಸರಿಯಲ್ಲ. ಇದೊಂದು ಒಳ್ಳೆಯ ಅಭಿಪ್ರಾಯವಾಗಿರುತ್ತದೆ. ಇದನ್ನು ಎಲ್ಲರೂ ಒಪ್ಪಿಕೊಳ್ಳಲೇ ಬೇಕಾಗಿರುತ್ತದೆ.

ಇನು ತುರ್ತುಪರಿಸ್ಥಿತಿಯ ವೇಳೆಯಲ್ಲಿ ಸರ್ಕಾರದ ಕಾರ್ಯಕ್ರಮಗಳು ಬಹಳ ಚೆನ್ನಾಗಿ ನಡೆಯುತ್ತಿತ್ತು. ೧೦೦ಕ್ಕೆ ೯೫ ಭಾಗ ಆರ್ಥಿಕ ಕಾರ್ಯಕ್ರಮಗಳು ರಾಜ್ಯದಲ್ಲಿ ಬಹಳ ಪ್ರಗತಿ ಪರವಾಗಿ ನಡೆಯುತ್ತಿತ್ತು. ಅಲ್ಲದೆ ತುರ್ತುಪರಿಸ್ಥಿತಿಯಲ್ಲಿ ಆಡಳಿತವು ದಕ್ಷತೆಯಿಂದಲೂ ಶಿಸ್ತಿನಿಂದಲೂ ನಡೆಯುತ್ತಿತ್ತು. ೧೯೭೫ನೇ ಇಸವಿಯಲ್ಲಿ ಉತ್ತರಭಾರತದಲ್ಲಿ ಡಿಕ್ಲೇರ್ಡ್ ಎಮರ್ಜೆನ್ಸಿ ಎಂಬುದಾಗಿ ಪತ್ರಿಕೆಗಳಲ್ಲಿ ಬಂದಿತ್ತು. ಆ ಪತ್ರಿಕೆ ಇನ್ನೂ ನನ್ನ ಹತ್ತಿರ ಇದೆ. ೧೯೭೫ನೇ ಇಸವಿಯಲ್ಲೇ ಕೆಲವರಿಗೆ ದೇಶ ಪ್ರೇಮ ರಾಷ್ಟ್ರಪ್ರೇಮ ಕಡಿಮೆಯಾಗಿತ್ತು. ಅದಕ್ಕೆ ಕಾರಣ ಕೆಲವು ಬಂಡವಾಳ ಶಾಹಿಗಳು ಸೇರಿಕೊಂಡು ಅವರ ಉಪಯೋಗಕ್ಕಾಗಿ ನಡೆಸಿಕೊಂಡು ಹೋಗುತ್ತಿದ್ದ ಕಾರ್ಯಭಾರ ಆದುದರಿಂದ ಹಿಂದೆ ಬಂದಿದ್ದಂತಹ ತುರ್ತು ಪರಿಸ್ಥಿತಿಯಲ್ಲಿ ಅನೇಕ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಆ ರೀತಿಯ ಒಳ್ಳೆಯ ಕೆಲಸ ಮಾಡಿದ್ದರಿಂದಲೇ ಇಂತಹ

ಒಳ್ಳೆಯ ಆಯವ್ಯಯದ ವರದಿಯನ್ನು ನಮ್ಮ ಮಾನ ಹಣಕಾಸಿನ ಸಚಿವರು ಕೊಟ್ಟಿರುವುದು. ಇದರ ಜೊತೆಗೆ ಇನ್ನೂ ಅನೇಕ ವಿದ್ಯಾಭ್ಯಾಸ, ಆಹಾರ ಧಾನ್ಯಗಳ ಸಂಗ್ರಹಣೆ, ಇನ್ನೂ ಅನೇಕ ಕಾರ್ಯಕ್ರಮಗಳು ಕಾರ್ಯರೂಪಕ್ಕೆ ಬರುವುದಕ್ಕೆ ಸಹಕಾರಿಯಾಗಿವೆ.

ಕಡೆಯದಾಗಿ ನಮ್ಮ ತಾಲ್ಲೂಕಿನ ವಿಚಾರ. ನಮ್ಮ ಮಾಲೂರು ತಾಲ್ಲೂಕಿನಲ್ಲಿ ರಸ್ತೆಗಳಿಲ್ಲ. ಬ್ರಿಡ್ಜಸ್ ಆಗಬೇಕು. ಇದಕ್ಕೆ ಸರ್ಕಾರದವರು ಈಗಾಗಲೇ ಆಶ್ವಾಸನೆ ಕೊಟ್ಟಿದ್ದಾರೆ ಆದರೆ ಈ ರೀತಿಯಾಗಿ ಆಶ್ವಾಸನೆ ಕೊಟ್ಟಿರುವುದೇ ಹೆಚ್ಚಲ್ಲ. ಅದನ್ನು ೨-೩ ವರ್ಷಗಳಲ್ಲಿ ಕಾರ್ಯಗತ ಮಾಡಿಬಿಟ್ಟರೆ ನಮ್ಮ ಜನಗಳ ಸೌಕರ್ಯಕ್ಕೆ ಒಂದು ಸಹಕಾರಿಯಾಗುತ್ತದೆ. ಜೊತೆಗೆ ನಮ್ಮ ರಾಜ್ಯದಲ್ಲಿ ಜನಗಳಿಗೆ ನಮ್ಮ ಸರ್ಕಾರದವರು ಇಂತಿಂಥ ಕೆಲಸಗಳನ್ನು ಮಾಡುತ್ತಿದೆ ಎಂಬುದಾಗಿ ಧೈರ್ಯವಾಗಿ ಪ್ರಜೆಗಳಿಗೆ ಹೇಳಬಹುದು.

ಕಡೆಯದಾಗಿ ನಮ್ಮ ತಾಲ್ಲೂಕಿನಲ್ಲಿರುವ ಸ್ಕೇರ್‌ಸಿಟಿ ವಿಚಾರ. ನಮ್ಮ ತಾಲ್ಲೂಕನ್ನು ಸ್ಕೇರ್‌ಸಿಟಿ ಕಂಡೀಷನ್ ತಾಲ್ಲೂಕು ಎಂಬುದಾಗಿ ಘೋಷಣೆ ಮಾಡಿ ಕೇಂದ್ರ ಸರ್ಕಾರದಿಂದ ಬರುವ ಎಲ್ಲಾ ಸವಲತ್ತುಗಳನ್ನು ಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಮಾನ್ಯ ಅರ್ಥ ಸಚಿವರು ಮಂಡಿಸಿರುವ ಆಯವ್ಯಯವನ್ನು ನನ್ನ ಮನಃಪೂರ್ವಕವಾಗಿ ಅನುಮೋದಿಸುತ್ತಾ ಮಾತನಾಡಲು ನನಗೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ನನ್ನ ಕೃತಜ್ಞತೆಯನ್ನು ಸಲ್ಲಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಭಾವೂರಾವ್ ದೇಶಪಾಂಡೆ (ಧಾರವಾಡ).—ಅಧ್ಯಕ್ಷ ಮಹಾಶಯರೇ, ಈಗ ನನ್ನ ಮಿತ್ರರು ಅನಾವಶ್ಯಕವಾಗಿ ತುರ್ತುಪರಿಸ್ಥಿತಿಯಲ್ಲಿ ಬಹಳ ಒಳ್ಳೆಯ ಕೆಲಸಗಳಾಗಿವೆ ಎಂಬುದಾಗಿ ಹೇಳಿದರು. ಜೊತೆಗೆ ಕೆಲವುಕಡೆಗಳಲ್ಲಿ ಆಗಿಲ್ಲ ಎಂಬುದಾಗಿಯೂ ಹೇಳಿದರು ಆದರೆ ಆರೀತಿ ಕೆಲವು ಕಡೆಗಳಲ್ಲಿ ಒಳ್ಳೆಯ ಕೆಲಸಗಳಾಗದಿರಲು ಕಾರಣ ಏನು ಎಂಬುದನ್ನೂ ದಯಮಾಡಿ ಹೇಳಬೇಕಾಗಿತ್ತು. ನಾನು ಒಂದೊಂದನ್ನೂ ಹೇಳುತ್ತಿದ್ದೇನೆ. ಹುಬ್ಬಳಿ-ಧಾರವಾಡ ಮಹಾನಗರಸಭೆ ಇದೆ.ಅದನ್ನು ಜ್ಞಾಪಕ ಮಾಡಿಕೊಂಡರೆ ಅದರ ಒಂದುಸ್ಪಷ್ಟ ಚಿತ್ರ ನಿಮ್ಮ ಕಣ್ಣಮುಂದೆ ಬರಬಹುದು. ಅಂತಹ ಒಂದು ಮಹಾನಗರ ಸಭೆಗೆ ಇವತ್ತು ಅದಕ್ಕೆ ಜನತಾ ಪ್ರತಿನಿಧಿಗಳಿರತಕ್ಕಂಥ ಆಡಳಿತ ಇಲ್ಲ. ಸರ್ಕಾರ ನೇಮಕ ಮಾಡಿರತಕ್ಕ ಆಡಳಿತಾಧಿಕಾರಿ ಇನ್ನೂ ಬಂದಿಲ್ಲ. ಆಡಳಿತ ಅಧಿಕಾರಿಗಳಿಗೆ ಇದನ್ನು ಕೊಟ್ಟಿದ್ದಾರೆ. ಅವರು ಸರ್ಕಾರದ ನಿಯಮಗಳ ಪ್ರಕಾರ ಬಡವರಿಗೆ ಮತ್ತು ಗುಡಿಸಲು ನಿವಾಸಿಗಳಿಗೆ ಮನೆಕಟ್ಟಿಸಿಕೊಡುವುದಕ್ಕೆ ಜಾಗ ಕೊಟ್ಟಿರುತ್ತಾರೆ. ಮಳೆಗಾಲ ಬರುವುದರೊಳಗಾಗಿ ಕಟ್ಟಿಗೆ ಮತ್ತು ಹೆಂಚನ್ನು ಕೊಡಬೇಕೆಂದು ನಾನು ಕೇಳಿಕೊಂಡಿದ್ದೆನು. ಅದಕ್ಕೆ ಅವರು ಒಪ್ಪಿದ್ದರು. ಆದರೆ ಅವರು ಇನ್ನೂ ಬರಲಿಲ್ಲ. ನಾನು ಮೊನ್ನೆ ಆ ಜಾಗಕ್ಕೆ ಹೋಗಿದ್ದೆನು. ಗೋಡೆಗಳು ನಿಂತಿವೆ. ಆಡಳಿತಾಧಿಕಾರಿಗಳು ಇಲ್ಲ. ಕಟ್ಟಿಗೆ ಹೆಂಚು ಕೊಟ್ಟಿಲ್ಲ. ಗೋಡೆಗಳು ಬೀಳುವ ಸ್ಥಿತಿಯಲ್ಲಿವೆ. ಇದರ ಬಗ್ಗೆ ನಾನು ಜಿಲ್ಲಾಧಿಕಾರಿಗಳ ಜೊತೆಯಲ್ಲಿ ಮಾತನಾಡಿದ್ದೇನೆ. ಜಿಲ್ಲಾಧಿಕಾರಿಗಳು ಹೇಳುತ್ತಾರೆ, ಆಡಳಿತಾಧಿಕಾರಿಗಳು ಇಲ್ಲದೇ ಇರುವ ಕಡೆ ಗಮನ ಕೊಡುವುದಕ್ಕಾಗುವುದಿಲ್ಲ ಎಂಬುದಾಗಿ ಹೇಳುತ್ತಾರೆ. ನಮ್ಮ ಹರಿಜನ ಭಾಂದವರಿಗೆ ನಿವೇಶನಗಳನ್ನು ಒದಗಿಸಿಕೊಡತಕ್ಕಂಥ ಸರ್ಕಾರದ ಯೋಜನೆ ಇದೆ. ಆದರೆ ಅಲ್ಲಿ ಆಡಳಿತಾಧಿಕಾರಿ ಇಲ್ಲ. ಕಳೆದ ತುರ್ತು ಪರಿಸ್ಥಿತಿ ಸಮಯದಲ್ಲಿ ಆಗಿದ್ದಂತಹ ಜನತಾ ಪ್ರತಿನಿಧಿಗಳ ಸಭೆಯನ್ನು ರದ್ದುಗೊಳಿಸಿ ಅಂದು ಹಿಂದಿನ ಮಂತ್ರಿಗಳು ತಮ್ಮ ಅಧಿಕಾರವನ್ನು ಚಲಾಯಿಸುವುದಕ್ಕೆ ಇರತಕ್ಕ ಜನತಾ ಪ್ರತಿನಿಧಿಯ ಸಭೆಯನ್ನು ರದ್ದುಗೊಳಿಸಿದರು. ಆ ಒಂದು ಆಡಳಿತವನ್ನು ಸರ್ಕಾರ ವಹಿಸಿಕೊಂಡ ಮೇಲೆ ಅಲ್ಲಿ ಜನತಾ ಪ್ರತಿನಿಧಿಗಳಿಲ್ಲ. ಮತ್ತು ಸರ್ಕಾರ ನೇಮಿಸಿರತಕ್ಕಂಥ ಆಡಳಿತ ಅಧಿಕಾರಿಯೂ ಇಲ್ಲ. ಈ ರೀತಿಯಾದ ಒಂದು ನಗರಸಭೆ ಇವತ್ತು ಅಲ್ಲಿ ಇದೆ. ಇವತ್ತು ಯಾವ ಒಂದು ಸಣ್ಣ ಪುಟ್ಟ ಕೆಲಸಗಳನ್ನು ಮಾಡುವುದಕ್ಕೂ ಕೂಡ ಅಲ್ಲಿ ಯಾರೂ ಇಲ್ಲ. ಇದು ಆ ನಗರದ ಪರಿಸ್ಥಿತಿ. ಇಂತಹ ತುರ್ತು ಪರಿಸ್ಥಿತಿಯನ್ನು ಅನೇಕ ಕಡೆಗಳಲ್ಲಿ ಅನೇಕ ದೃಷ್ಟಿಯಿಂದ ನೋಡಬಹುದು. ಇದೇ ಮಹಾನಗರದಲ್ಲಿ ಮೇದಾರರ ಅನೇಕ ಸಂಸಾರಗಳಿವೆ ಅವರು ಬಿದಿರು ಚಾಪೆಗಳನ್ನು ಮತ್ತು ಬುಟ್ಟಿಗಳನ್ನು ಮಾಡಿ ಅವುಗಳನ್ನು ಮಾರಾಟ ಮಾಡಿ ಹೊಟ್ಟೆ ತುಂಬಿಸಿಕೊಳ್ಳತಕ್ಕಂಥ ಜನ ಅವರು. ಈ ಸಮಸ್ಯೆ ಇಡೀ ಪ್ರಾಂತ್ಯಕ್ಕೆ ಅನ್ವಯಿಸುತ್ತದೆ. ಹಲಿಯಾಳ ಹತ್ತಿರ ಕಾಡಿನಲ್ಲಿ ಬಿದಿರನ್ನು ತಂದು ತಮ್ಮ ಕೆಲಸ ಸಾಗಿಸಿಕೊಂಡು ಜೀವನ ಸಾಗಿಸುತ್ತಿದ್ದರು. ಈಗ ಅಲ್ಲಿರತಕ್ಕಂಥ ಬಿದಿರನ್ನು ಸರ್ಕಾರದವರು ದಾಂಡೇಲಿಯಲ್ಲಿರತಕ್ಕಂಥ ಕಾಗದದ ಕಾರ್ಖಾನೆಗೆ ಗುತ್ತಿಗೆಗೆ ಕೊಟ್ಟಿರುವುದರಿಂದ, ಈ ಬಡಜನರು ಅಲ್ಲಿಂದ ಬಿದಿರು ತರುವುದಕ್ಕಾಗುತ್ತಿಲ್ಲ. ಸ್ವಾಭಾವಿಕವಾಗಿ ಇವರಿಗೆ ಬಿದಿರಿನ ಅಭಾವದಿಂದ ತುಂಬಾ ತೊಂದರೆಯಾಗಿದೆ. ಬೆಳಗಾಂ ಮತ್ತು ಇತರೇ ಎರಿಯಾಗಳಿಗೆ ಹೋಗಿ ಅಲ್ಲಿ ಸರಿಯಾದ ಬಿದಿರು ಸಿಕ್ಕದಿದದ್ದರೂ ಹೇಗೋ ತಮ್ಮ

ಉಪ ಜೀವನವನ್ನು ಸಾಗಿಸಬೇಕಾದರೂ ಕಷ್ಟವಾಗುತ್ತಿದೆ. ಇದರ ಬಗ್ಗೆ ನಮ್ಮ ಮಾನ್ಯ ಅರಣ್ಯ ಮಂತ್ರಿಗಳಿಗೆ ಒಂದು ಕಾಗದ ಬರೆದಿದ್ದೇನೆ. ಈ ಪರಿಸ್ಥಿತಿ ಬಗ್ಗೆ ಏನಾದರೂ ಯೋಚನೆ ಮಾಡಬೇಕೆಂದು ಒಂದು ಕಾಗದ ಬರೆದಿದ್ದೇನೆ ಆದರೆ ಇದುವರೆಗೂ ನನ್ನ ಕಾಗದಕ್ಕೆ ಉತ್ತರ ಇಲ್ಲ. ಇವತ್ತು ಆ ಮಂತ್ರಿಗಳು ಇಲ್ಲಿ ಇಲ್ಲ. ಅರ್ಧ ಮಂತ್ರಿಗಳಿದ್ದಾರೆ. ಈ ರೀತಿಯಾಗಿರತಕ್ಕಂಥ ಅನೇಕ ಉದಾಹರಣೆಗಳಿವೆ. ಇಂತಹ ಒಂದು ನಿರ್ಲಕ್ಷ್ಯ ಭಾವನೆಯಿಂದ ಮತ್ತು ಬಡವರ ಉದ್ಧಾರ ಮಾಡುತ್ತೇವೆ ಎಂದು ಹೇಳತಕ್ಕಂಥವರು ಯಾವ ರೀತಿ ಮಾಡುತ್ತಾರೆ? ಕೈ ಕಸಬು ಮಾಡತಕ್ಕಂಥ ಬಡವರಿಗೆ ಸಹಾಯ ಮಾಡತಕ್ಕಂಥ ಹೊಣೆಗಾರಿಕೆಯನ್ನು ಸರ್ಕಾರದವರು ತೆಗೆದುಕೊಳ್ಳಬೇಕು. ಈ ವಿಚಾರದ ಬಗ್ಗೆ ಅತ್ಯಾವಶ್ಯಕವಾಗಿ ಸರ್ಕಾರ ಯೋಚನೆ ಮಾಡಬೇಕಾದುದು ಸೂಕ್ತ. ಇನ್ನೂ ಹಲವಾರು ಸಮಸ್ಯೆಗಳು ಇವೆ. ಈ ಎಲ್ಲಾ ಸಮಸ್ಯೆಗಳ ಬಗ್ಗೆ ನಮ್ಮ ಆಯವ್ಯಯ ವರದಿಯಲ್ಲಿ ಒಂದಕ್ಕೂ ಉತ್ತರ ಇಲ್ಲ.

ಇನ್ನು ರೈತರ ಸಮಸ್ಯೆಯನ್ನು ನೋಡಬಹುದು. ಇವತ್ತು ಅವನ ಒಂದು ಜೀವನ ಬಹಳ ಗಂಭೀರ ಸಮಸ್ಯೆ ಇದೆ. ಆ ಸಮಸ್ಯೆ ಏನೆಂದರೆ, ನಮ್ಮಲ್ಲಿ ವರಲಕ್ಷ್ಮಿ ಹತ್ತಿಯನ್ನು ಬೆಳೆಯುತಕ್ಕಂಥ ಪದ್ಧತಿ ಕೆಲವು ವರ್ಷಗಳಿಂದ ಬಂದು ಬಿಟ್ಟಿದೆ. ಈ ರೀತಿ ವರಲಕ್ಷ್ಮಿ ಹತ್ತಿಯನ್ನು ಬೆಳೆಯುವುದರ ಮೂಲಕ ಸ್ವಾಭಾವಿಕವಾಗಿ ಆತನ ಆರ್ಥಿಕ ಸ್ಥಿತಿ ಸುಧಾರಣೆಯಾಗುತ್ತದೆ. ಹತ್ತಿಯನ್ನು ಬಿತ್ತನೆ ಮಾಡತಕ್ಕಂಥ ಕಾಲ ಈಗ. ಜುಲೈ ೧೫ನೇ ತಾರೀಖಿನೊಳಗೆ ಬಿತ್ತನೆ ಕೆಲಸ ಪೂರ್ತಿಗೊಳ್ಳಬೇಕು. ಆಗರೆ ಈಗ ಬಿತ್ತನೆ ಬೀಜಗಳು ಸಿಗುತ್ತಿಲ್ಲ. ಜನರು ಎಲ್ಲೆಲ್ಲೋ ಓಡಾಡುತ್ತಿದ್ದಾರೆ. ಆದರೂ ಅವರಿಗೆ ಬಿತ್ತನೆ ಬೀಜ ಸಿಗುತ್ತಿಲ್ಲ. ಸ್ವಾಭಾವಿಕವಾಗಿ ಕೆಲವರು ಮಹಾರಾಷ್ಟ್ರಕ್ಕೆ ಹೋಗಿ ದುಬಾರಿ ಬೆಲೆ ಕೊಟ್ಟು ಅಲ್ಲಿಂದ ಬೀಜ ತರುತ್ತಿದ್ದಾರೆ. ಅದು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಅನೇಕ ರೈತರಿಗೆ ಇನ್ನೂ ವರಲಕ್ಷ್ಮಿ ಬಿತ್ತನೆ ಬೀಜಗಳು ಸಿಕ್ಕಿಲ್ಲ. ಕೆಲವು ರೈತರಿಗೆ ವರಲಕ್ಷ್ಮಿ ಬೀಜ ಸಿಕ್ಕದೆ ಬೇರೆ ತರಹದ ಬಿತ್ತನೆ ಬೀಜಗಳನ್ನು ಹಾಕುತ್ತಿರುವ ಪರಿಸ್ಥಿತಿ ಇದೆ. ಇದರ ಬಗ್ಗೆ ತುರ್ತು ಕ್ರಮ ಕೈಗೊಳ್ಳಬೇಕಾಗಿದೆ. ನಿಧಾನ ಮಾಡಬೇಡಿ. ಕಾಲ ಮಿಂಚಿ ಹೋಗುತ್ತಿದೆ.

ಇನ್ನೊಂದು ವಿಚಾರ. ರೈತರು ಬೆಳೆಯುತಕ್ಕಂಥ ಎಲ್ಲಾ ಬೆಳೆಯ ಬಗ್ಗೆಯೂ ಕೂಡ ಬೆಲೆಗಳು ಕುಸಿಯುತ್ತಿವೆ. ಅದು ಗೋದಿ ಆಗಿರಬಹುದು, ಹತ್ತಿ ಆಗಿರಬಹುದು, ಜೋಳ ಆಗಿರಬಹುದು, ರಾಗಿ ಆಗಿರಬಹುದು. ಅಲ್ಲದೆ ಇನ್ನೂ ಅನೇಕ ಬೆಳೆಗಳು ಇರಬಹುದು. ಎಲ್ಲಾ ಬೆಳೆಗಳ ಬೆಲೆಗಳು ಕುಸಿಯುತ್ತಿವೆ. ಬೆಲೆಗಳು ಕುಸಿಯುತ್ತಿರತಕ್ಕಂಥ ಸಮಯದಲ್ಲಿ ರೈತರಿಗೆ ಭರವಸೆಯನ್ನು ಕೊಡತಕ್ಕಂಥ ಒಂದು ಜವಾಬ್ದಾರಿಯನ್ನು ಸರ್ಕಾರ ಹೊತ್ತುಕೊಳ್ಳಬೇಕಾಗುತ್ತದೆ. ಎಷ್ಟೋ ಸಲ ಭರವಸೆ ಕೊಟ್ಟಿದ್ದು ಉಂಟು. ಆದರೆ ಅದಕ್ಕೆ ಪ್ರತ್ಯಕ್ಷ ಏರ್ಪಾಡು ಇಲ್ಲ. ಇದರ ಜೊತೆಗೆ ಇನ್ನೂ ಅನೇಕ ಯೋಜನೆಗಳನ್ನು ಮಾಡುತ್ತಲೇ ಇದ್ದಾರೆ. ರೈತರಿಗೆ ಯಾವ ಪ್ರಕಾರ ಹಾನಿಯಾದರೂ ಆ ಹಾನಿಯನ್ನು ತುಂಬಿಸಿಕೊಳ್ಳುವ ದೃಷ್ಟಿಯಿಂದ ವಿಮಾ ಯೋಜನೆ ಜಾರಿಗೆ ತರತಕ್ಕಂಥದ್ದು ಅತ್ಯಂತ ಅವಶ್ಯಕ. ಈ ಯೋಜನೆಯನ್ನು ಜಾರಿಗೆ ತರತಕ್ಕಂಥ ವಿಚಾರವನ್ನು ನಾವು ಮೊದಲಿನಿಂದಲೂ ಯೋಚನೆ ಮಾಡಿಕೊಂಡೇ ಬರುತ್ತಿದ್ದೇವೆ. ವಿಮಾ ಯೋಜನೆಯನ್ನು ಮಾಡುವುದು ನಿಜಕ್ಕೂ ಯೋಗ್ಯವಿದೆ. ನಮ್ಮ ಕರ್ನಾಟಕ ಮಾದರಿ ರಾಜ್ಯವೆಂದು ಹೇಳಿಕೊಳ್ಳುವವರು, ವಿಮಾ ಯೋಜನೆಯನ್ನು ಮೊದಲು ಜಾರಿಗೆ ತರತಕ್ಕಂಥ ಕಾರ್ಯಕ್ರಮವನು ಏಕೆ ಕೈಗೊಳ್ಳಬಾರದು? ಈ ಯೋಜನೆಯ ಕಾರ್ಯಕ್ರಮವನ್ನು ನೀವು ತೆಗೆದುಕೊಂಡರೆ ರೈತರಿಗೆ ಬೆಲೆಗಳ ಬಗ್ಗೆ ಭರವಸೆಯನ್ನು ಕೊಡತಕ್ಕಂಥ ಕಾರ್ಯಕ್ರಮವನ್ನು ತೆಗೆದುಕೊಂಡಾಂತಾಗುತ್ತದೆ.

[CHAIRMAN (Smt. Sumati B. Madiman) in the Chair]

ರೈತರಿಗೆ ನೈಸರ್ಗಿಕ ವಿಪತ್ತುಗಳಿಂದ ಆಗತಕ್ಕ ನಷ್ಟಕ್ಕೆ ರಕ್ಷಣೆ ಕೊಡುವ ದೃಷ್ಟಿಯಿಂದ ವಿಮಾ ಯೋಜನೆಯನ್ನು ಜಾರಿಗೆ ತರಬೇಕು. ರೈತ ವರ್ಗದ ಅಭಿವೃದ್ಧಿಯ ದೃಷ್ಟಿಯಿಂದ ಅವರ ಅಭ್ಯುದಯದ ದೃಷ್ಟಿಯಿಂದ ಈ ವಿಮಾ ಯೋಜನೆಯನ್ನು ಜಾರಿಗೆ ತರುವುದರಿಂದ ಬಹಳಷ್ಟು ಅನುಕೂಲವಾಗುತ್ತದೆ. ಆ ರೀತಿಯ ಯೋಜನೆಗಳಿಂದ ಸಾಕಷ್ಟು ಉಪಯೋಗವಾಗುತ್ತದೆ, ಆದ್ದರಿಂದ ಅದನ್ನು ಜಾರಿಗೆ ತರಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ವಿದ್ಯುತ್ ದರಗಳು ಏರಿರುವುದರಿಂದ ರೈತರ ಮೇಲೆ ಮತ್ತು ಅವರು ಉಪಯೋಗಿಸತಕ್ಕ ಪಂಪುಸೆಟ್ಟುಗಳ ಮೇಲೆ ವಿಪರೀತ ಪರಿಣಾಮವಾಗುತ್ತದೆ. ಒಂದು ಯೂನಿಟ್ಟಿಗೆ ೨೫ ಪೈಸೆಯಂತೆ ಪಂಪ್‌ಸೆಟ್ ವಿದ್ಯುತ್ ದರ ಏರಿಸಿದಮೇಲೆ ಬಹಳ ತೊಂದರೆಯಾಗಿದೆ ಎಂದು ರೈತರು ಹೇಳುತ್ತಾರೆ. ಅಲ್ಲಿ ಅವರಿಗೆ ಬಂದಿರುವ ಬಿಲ್ಲುಗಳನ್ನು ತೆಗೆದುಕೊಂಡು ನೋಡಿದರೆ ಗೊತ್ತಾಗುತ್ತದೆ, ಇಲ್ಲಿ ನೀವು ಹೇಳತಕ್ಕ ಉತ್ತರದಿಂದ ಗೊತ್ತಾಗುವುದಿಲ್ಲ. ಈ ರೀತಿ ವಿದ್ಯುತ್ ದರ

ಏರಿಸಿರುವುದರಿಂದ ಬಹಳ ಆಘಾತವಾಗುತ್ತದೆ. ಇದನ್ನು ತಾವು ಗಮನಿಸಬೇಕು. ಮತ್ತು ವಿದ್ಯುತ್ ದರ ಏರಿದುದರ ಪರಿಣಾಮ ಉದ್ದಿಮೆಗಳ ಮೇಲೂ ಆಗುತ್ತದೆ. ಉದ್ದಿಮೆಗಳು ಅಭಿವೃದ್ಧಿಯಾಗುವುದಕ್ಕೆ ಅನೇಕ ಯೋಜನೆಗಳನ್ನು ಮಾಡಿದ್ದಾರೆ, ದುರ್ದೈವದಿಂದ ವಿದ್ಯುತ್ತಿನ ಪೂರೈಕೆ ತುಂಬಾ ಕಡಿಮೆ ಇದೆ. ಉದ್ದಿಮೆಗಳ ಅಭಿವೃದ್ಧಿಗೆ ಎಷ್ಟು ಬೇಕೋ ಅಷ್ಟು ಇಲ್ಲ. ಉದ್ದಿಮೆಗಳು ಸಾಕಷ್ಟು ಬರಬೇಕು ಎಂದು ಬಯಸುತ್ತಾರೆ ಮತ್ತು ನಿರುದ್ಯೋಗ ನಿವಾರಣೆ ದೃಷ್ಟಿಯಿಂದಲೂ ಉದ್ದಿಮೆಗಳು ಸಾಕಷ್ಟು ಬೆಳೆಯ ಬೇಕಾಗಿದೆ. ವಿದ್ಯುತ್ ಪೂರೈಕೆ ಸಾಕಷ್ಟು ಆಗದಿದ್ದರೆ ಉದ್ದಿಮೆಗಳ ಬೆಳವಣಿಗೆಯಾಗುವುದಿಲ್ಲ. ಕಾನೂನು ಪ್ರಕಾರ ಜಮೀನನ್ನು ವಶಪಡಿಸಿಕೊಳ್ಳತಕ್ಕ ಕ್ರಮ ಇದೆ, ಅದು ಸರಿಯಾಗಿ ಆಗುತ್ತಿಲ್ಲ. ವಿದ್ಯುತ್ತಿನ ಪೂರೈಕೆ ಸಾಕಷ್ಟು ಪ್ರಮಾಣದಲ್ಲಿಆಗುತ್ತಿಲ್ಲ. ಈ ಕಾರಣದಿಂದ ಧಾರವಾಡದಲ್ಲಿ ಆಗಬೇಕಾಗಿದ್ದ ರೆಂಕೋ ಮತ್ತು ಸ್ಕೂಟರ್ ಕಾರ್ಖಾನೆ ಆಗಿಲ್ಲ. ಎರಡು ಕಾರ್ಖಾನೆಗಳು ಬರುವುದಕ್ಕೆ ಒಪ್ಪಿಗೆ ತೆಗೆದುಕೊಂಡು ಜಮೀನು ಕೂಡ ವಶಪಡಿಸಿಕೊಂಡಿದ್ದರೂ ವಿದ್ಯುತ್ ಪೂರೈಕೆ ಸಾಕಷ್ಟು ಪ್ರಮಾಣದಲ್ಲಿ ಆಗದಿದ್ದುದರಿಂದ ಕೈಗಾರಿಕೋದ್ಯಮಿಗಳು ವಾಪಸ್ ಹೋಗುತ್ತಿದ್ದಾರೆ. ಇದರಿಂದ ಬೆಳೆಯುತಕ್ಕ ಕೈಗಾರಿಕೆಗಳ ಬೆಳವಣಿಗೆಗೆ ಬಹಳ ಅಡ್ಡಿಯಾಗುತ್ತಿದೆ. ಯಾವುದೇ ಒಂದು ಉದ್ದಿಮೆಯು ಒಳ್ಳೆಯ ರೀತಿಯಿಂದ ಬೆಳವಣಿಗೆಯಾಗುವು ದಕ್ಕೆ ಅವಕಾಶ ಇದ್ದರೂ ಕೂಡ ವಿದ್ಯುತ್ತಿನ ಪೂರೈಕೆ ಸರಿಯಾಗಿ ಮಾಡದೇ ಹೋದರೆ ಉದ್ದಿಮೆಗಳ ಬೆಳ ವಣಿಗೆಗೆ ಆಘಾತವಾಗುತ್ತದೆ. ಹೀಗಾದರೆ ನಮ್ಮ ರಾಜ್ಯದ ಪ್ರಗತಿ ಯಾವರೀತಿ ಆಗಬೇಕು, ಹೇಗೆ ಆಗ ಬೇಕು, ಯಾವ ವ್ಯವಸ್ಥೆಯನ್ನು ನಾವು ಮಾಡುತ್ತಿದ್ದೇವೆ ಇದನ್ನೆಲ್ಲಾ ಯೋಚನೆ ಮಾಡತಕ್ಕ ಅವಶ್ಯಕತೆ ಇದೆ. ನಮ್ಮಲ್ಲಿ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಸಾಕಷ್ಟು ಪ್ರಮಾಣದಲ್ಲಿದೆ. ಆದರೆ ಕೆಲವು ಪ್ರಮಾಣದಲ್ಲಾದರೂ ಆಗತಕ್ಕ ಕೆಲಸಗಳು ಸಕಾಲದಲ್ಲಿ ಆಗದೇ ಪರಿಸ್ಥಿತಿ ಉಲ್ಬಣವಾಗುತ್ತಿದೆ. ಉದಾ ಹರಣೆಗೆ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕವನ್ನು ತೆಗೆದುಕೊಳ್ಳಬಹುದು. ಅನೇಕ ಪ್ರಾಥಮಿಕ ಶಾಲೆ ಗಳಿಗೆ ಉಪಾಧ್ಯಾಯರುಗಳು ನೇಮಕ ಆಗಬೇಕಾಗಿದೆ. ಈಗ ಜೂನ್ ತಿಂಗಳು ಮುಗಿದು ಜುಲೈ ತಿಂಗಳು ಬರುತ್ತಿದೆ, ಆದರೂ ಮಕ್ಕಳಿಗೆ ಪಾಠ ಹೇಳುವುದಕ್ಕೆ ಶಿಕ್ಷಕರಿಲ್ಲ. ಅರ್ಜಿ ಹಾಕಿದರೂ ಕೆಲಸ ಸಿಕ್ಕಿಲ್ಲ ಎಂದು ಕೆಲಸಕ್ಕೆ ಅರ್ಜಿ ಹಾಕಿದವರು ಒದ್ದಾಡುತ್ತಿದ್ದಾರೆ; ಶಿಕ್ಷಣ ಇಲಾಖೆಯಿಂದ ಇನ್ನೂ ಯಾತಕ್ಕೆ ಉಪಾ ಧ್ಯಾಯರ ನೇಮಕಗಳು ಆಗಿಲ್ಲ? ಯಾವಾಗ ನೇಮಕವಾಗುತ್ತದೆ? ಕೆಲವರಿಗೆ ನೇಮಕವಾಗಿದ್ದರೂ ಕೂಡ ಅದನ್ನು ತಡೆಹಿಡಿಯಲಾಗಿದೆ ಎಂದು ನೋಟೀಸ್ ಬೋರ್ಡಿನಲ್ಲಿ ಹಾಕಿದ್ದಾರೆ. ಈ ರೀತಿಯಾದ ಕೆಲಸ ಅಲ್ಲಿ ನಡೆಯುತ್ತಿದೆ. ಇದಕ್ಕೆ ಏನು ಹೇಳಬೇಕೋ ಗೊತ್ತಾಗುತ್ತಿಲ್ಲ, ತೊಗಲಕ್ ದರ್ಬಾರು ಎನ್ನಬೇಕೋ ಅಥವಾ ಯಾವ ಶಬ್ದವನ್ನು ಉಪಯೋಗಿಸಬೇಕೋ ಗೊತ್ತಾಗುತ್ತಿಲ್ಲ. ಧಾರವಾಡದಲ್ಲಿ ಸಿವಿಲ್ ಆಸ್ಪತ್ರೆ ಇದೆ, ಅಲ್ಲಿ ಎಕ್ಸ್‌ರೇ ಮಿಷನ್ ಕೂಡ ಇಲ್ಲ. ಹುಬ್ಬಳ್ಳಿಯಲ್ಲಿ ಕೆ.ಎಂ.ಸಿ. ಆಸ್ಪತ್ರೆ ಇದೆ. ಅಲ್ಲಿ ಹೋರಾಟ ಮಾಡಿ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ ಮಾಡಿಸಿದ್ದಾಯಿತು. ಅಲ್ಲೂ ಕೂಡ ಎಕ್ಸ್‌ರೇ ಮಿಷನ್ ಇಲ್ಲ. ಧಾರವಾಡದಲ್ಲಿ ದಾದಿಯರ ಶಿಕ್ಷಣಕ್ಕಾಗಿ ವ್ಯವಸ್ಥೆ ಮಾಡಿದ್ದಾರೆ. ಆದರೆ ಅಲ್ಲಿ ಸರಿಯಾದ ಆಹಾರ ಸಿಗುವುದಿಲ್ಲ. ಹೀಗೆ ಅನೇಕ ಕಡೆಗಳಲ್ಲಿ ಆಗುತ್ತಿರುವ ಅವ್ಯವಸ್ಥೆಗಳನ್ನು ನೋಡುತ್ತಾ ಹೋದರೆ ನಮ್ಮ ಆಡಳಿತ ಯಾವರೀತಿ ನಡೆಯುತ್ತಿದೆ ಮತ್ತು ನಾವು ಮಂಜೂರು ಮಾಡತಕ್ಕ ಹಣ ಸರಿಯಾದ ರೀತಿಯಲ್ಲಿ ಖರ್ಚಾಗುತ್ತದೆಯೋ ಇಲ್ಲವೋ ಒಂದೊಂದನ್ನು ಯೋಚನೆ ಮಾಡತಕ್ಕ ಅವಶ್ಯಕತೆ ಇದೆ. ಇನ್ನೊಂದು ಉದಾಹರಣೆಯನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಧಾರವಾಡದಲ್ಲಿ ಒಂದು ಪ್ರಾಥಮಿಕ ಶಾಲೆ ಇದೆ. ಅದು ಹರಿಜನ ಬಾಂಧವರ ಸಲುವಾಗಿ ಇದೆ. ಆ ಶಾಲೆಯನ್ನು ನಡೆಸತಕ್ಕ ಅಧಿಕಾರವರ್ಗ ದಲ್ಲೂ ಹರಿಜನ ಬಾಂಧವರೇ ಇದ್ದಾರೆ. ಆ ಶಾಲೆಗೆ ಉಪಯೋಗವಾಗುತ್ತದೆ ಎಂದು ಆಡಳಿತ ವರ್ಗ ದವರು ಒಬ್ಬ ಹಿಂದುಳಿದ ವರ್ಗಕ್ಕೆ ಸೇರಿದ ಮುಖ್ಯೋಪಾಧ್ಯಾಯರನ್ನು ವರ್ಗ ಮಾಡಿಸಿನೇಮಕ ಮಾಡಿ ದರು. ನಾಲ್ಕೈದು ವರ್ಷದ ಅವಧಿಯಲ್ಲಿ ಆ ಶಾಲೆಯಲ್ಲಿನ ಆಡಳಿತ ವರ್ಗದವರು ಸರ್ಕಾರದಿಂದ ಬಂದಿರತಕ್ಕ ೮೧ ಸಾವಿರ ರೂಪಾಯಿ ಅನುದಾನದ ಹಣಕ್ಕೆ ಸರಿಯಾದ ಲೆಕ್ಕ ಇಡದೆ ಏನೋ ಆಗಿದೆ ಎಂದು ತಿಳಿದುಬಂತು. ಆಡಿಟ್ ಅಬ್ಜೆಕ್ಷನ್ ಕೂಡ ಬಂತು. ಮುಂದೆ ವಿಚಾರಣೆ ಆಗಲಿಲ್ಲ. ಅಷ್ಟಕ್ಕೇ ನಿಂತುಹೋಯಿತು. ಯಾತಕ್ಕೆ ನಿಂತುಹೋಯಿತೋ ಯಾರಿಗೂ ಗೊತ್ತಿಲ್ಲ. ಅದೇ ಶಾಲೆಯಲ್ಲಿ ಯಾವುದೇ ರೀತಿಯಿಂದ ಕೆಲಸ ಮಾಡುವುದಕ್ಕೆ ಅನರ್ಹರಾದ ಉಪಾಧ್ಯಾಯರನ್ನು ಇಟ್ಟುಕೊಂಡಿದ್ದರು. ಶಾರೀರಿಕವಾಗಿ ಯೋಗ್ಯರಲ್ಲದ, ವಯಸ್ಸಾದ, ಅವರಿಗೆ ನಡೆಯುವುದಕ್ಕೂ ಬರುವುದಿಲ್ಲ, ಬರೆಯುವು ದಕ್ಕೂ ಆಗುವುದಿಲ್ಲ ಅಂತಹ ಮಹಿಳಾ ಉಪಾಧ್ಯಾಯರಿದ್ದರು. ಇನ್ಸ್‌ಪೆಕ್ಟರ್ ಬಂದು ನೋಡಿ ಅವರ ಬದಲು ಬೇರೊಬ್ಬರನ್ನು ನೇಮಕ ಮಾಡಿಕೊಳ್ಳಬೇಕೆಂದು ಹೇಳಿದರು. ಮೊದಲಿದ್ದ ಆಡಳಿತ ವರ್ಗದವರೂ ಆ ಉಪಾಧ್ಯಾಯರನ್ನು ತೆಗೆಯುವುದಕ್ಕೆ ತಯಾರಿರಲಿಲ್ಲ. ಶಿಕ್ಷಕರು ಆಡಳಿತ ವರ್ಗದ ಜೊತೆ ಸಂಧಾನ

ಮಾಡಿಕೊಂಡು ಶಾಲೆಗೇ ಸರಿಯಾಗಿ ಬರುವುದಿಲ್ಲ. ಮುಖ್ಯೋಪಾಧ್ಯಾಯರಲ್ಲಿ ಓಡಿಸ ಇಲ್ಲ. ಅವರು ಏನಾದರೂ ಹೇಳಿದರೆ ಅವರನ್ನೇ ಉಪಾಧ್ಯಾಯರು ವರ್ಗ ಮಾಡಿಸುತ್ತಾರೆ. ಈ ರೀತಿ ಶಿಕ್ಷಣ ಸಂಸ್ಥೆಗಳು ನಡೆಯುವುದಾದರೆ ನಮ್ಮ ಶಿಕ್ಷಣ ಹೇಗೆ ನಡೆಯಬೇಕು, ಹಿಂದುಳಿದ ವರ್ಗದ ಉನ್ನತಿ ಯಾವರೀತಿಯಲ್ಲಿ ಆಗಬೇಕು ಎಂಬುದನ್ನು ಯೋಚನೆ ಮಾಡತಕ್ಕ ಅವಶ್ಯಕತೆ ಇದೆ. ನಾವು ವಿದ್ಯಾಭ್ಯಾಸಕ್ಕಾಗಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತಿದ್ದೇವೆ. ನಾವು ಖರ್ಚು ಮಾಡತಕ್ಕ ಹಣವನ್ನು ನಮ್ಮ ಜನಾಂಗದ ಅಭಿವೃದ್ಧಿಗೆ ಅವರಿಗೆ ಸರಿಯಾಗಿ ಉಪಯೋಗವಾಗುವ ರೀತಿಯಲ್ಲಿ ಖರ್ಚು ಮಾಡಬೇಕು. ಶಿಕ್ಷಣ ಸಂಸ್ಥೆಗಳಲ್ಲಿ ಇನ್ನೂ ಎಷ್ಟೋ ಅಕ್ರಮಗಳು ನಡೆಯುತ್ತವೆ, ಎಲ್ಲವನ್ನೂ ಹೇಳುವ ಅವಶ್ಯಕತೆ ಇಲ್ಲ. ಆದರೆ ಸರ್ಕಾರ ಈ ಬಗ್ಗೆ ಸೂಕ್ತ ಗಮನ ಹರಿಸಬೇಕು. ಇನ್ನು ಪಠ್ಯ ಪುಸ್ತಕಗಳ ಬಗ್ಗೆ ಹೇಳಬೇಕೆಂದರೆ ಅದರ ಬಗ್ಗೆ ಪತ್ರಿಕೆಗಳಲ್ಲಿ ಅನೇಕ ವಿಚಾರಗಳು ಬಂದಿವೆ ಅದನ್ನು ನಾನು ವರ್ಣನೆ ಮಾಡುವ ಅವಶ್ಯಕತೆ ಇಲ್ಲ. ಕೊನೇಪಕ್ಷ ಸಕಾಲದಲ್ಲಾದರೂ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳು ಸಿಗಬೇಕು. ಇಷ್ಟಾದರೂ ವ್ಯವಸ್ಥೆಯನ್ನು ಸರ್ಕಾರ ಮಾಡದಿದ್ದರೆ ಅದಕ್ಕೆ ಏನು ಹೇಳಬೇಕೋ ಗೊತ್ತಾಗುವುದಿಲ್ಲ. ಪಠ್ಯಪುಸ್ತಕಗಳು ಸಕಾಲದಲ್ಲಿ ದೊರೆಯದೇ ಇರುವುದು ಒಂದು ಸಮಸ್ಯೆಯಾದರೆ ಬಂದಿರತಕ್ಕ ಪಠ್ಯಪುಸ್ತಕಗಳಲ್ಲಿ ನೂರೆಂಟು ತಪ್ಪುಗಳಿರುತ್ತವೆ. ಅದನ್ನು ಯಾರು ನೋಡುತ್ತಾರೋ, ಹೇಗೆ ನೋಡುತ್ತಾರೋ ಗೊತ್ತಾಗುತ್ತಿಲ್ಲ. ಇಷ್ಟೊಂದು ತಪ್ಪುಗಳು ಬರುವುದಕ್ಕೆ ಕಾರಣಗಳೇನು? ಒಂದೇ ಪುಸ್ತಕದಲ್ಲಿ ಹಿಂದಿ ಕನ್ನಡ ಎಲ್ಲಾ ಇದೆ. ಮತ್ತು ಖಾಲಿ ಪುಟಗಳೂ ಇವೆ. ಇನ್ನೂ ಏನೇನೋ ತಪ್ಪುಗಳಿವೆ. ನಮ್ಮ ಸರ್ಕಾರ ಇಷ್ಟು ದೊಡ್ಡ ದೊಡ್ಡ ಮುದ್ರಣಾಲಯಗಳನ್ನಿಟ್ಟುಕೊಂಡು ದೊಡ್ಡ ದೊಡ್ಡ ತಜ್ಞರನ್ನು ಇಟ್ಟುಕೊಂಡು ಹೆಚ್ಚು ಹೆಚ್ಚು ಅಧಿಕಾರಿಗಳನ್ನಿಟ್ಟುಕೊಂಡು ಸಕಾಲದಲ್ಲಿ ಸರಿಯಾದ ಪಠ್ಯಪುಸ್ತಕ ಸಿಗುವಂತೆ ಮಾಡದಿದ್ದರೆ ಯಾತಕ್ಕೆ ಇದಕ್ಕಾಗಿ ಇಷ್ಟು ದುಡ್ಡು ಖರ್ಚು ಮಾಡಬೇಕು? ಜನತೆ ಕೊಡುವ ಹಣ ಸದುಪಯೋಗವಾಗಬೇಕು. ಹೇಗೋ ಹಣ ವಿನಿಯೋಗವಾಗಲಿ ಎಂದು ಜನತೆ ಹಣ ಕೊಡುವುದಿಲ್ಲ. ಜನತೆಯ ಹಣ ಸದುಪಯೋಗ ಆಗಬೇಕಾದರೆ ಯಾವ ಉದ್ದೇಶಕ್ಕಾಗಿ ಹಣವನ್ನು ಖರ್ಚು ಮಾಡಬೇಕೋ ಆ ಉದ್ದೇಶ ಸಫಲವಾಗುವ ರೀತಿಯಲ್ಲಿ ಖರ್ಚಾಗುತ್ತಿದೆಯೋ ಎಂಬುದನ್ನು ನೋಡಬೇಕಾಗುತ್ತದೆ. ಯಾವುದೇ ಕ್ಷೇತ್ರದಲ್ಲಾಗಲೀ ವಿದ್ಯಾ ಕ್ಷೇತ್ರದಲ್ಲಾಗಲೀ, ಕೃಷಿ ಕ್ಷೇತ್ರದಲ್ಲಾಗಲೀ, ಉದ್ದಿಮೆಗಳ ಕ್ಷೇತ್ರದಲ್ಲಾಗಲೀ ಆಡಳಿತ ಕ್ಷೇತ್ರದಲ್ಲಾಗಲೀ ಯಾವುದೇ ಕ್ಷೇತ್ರದಲ್ಲಾಗಲೀ ಖರ್ಚಾಗತಕ್ಕ ಹಣ ಸರಿಯಾದ ರೀತಿಯಲ್ಲಿ ಖರ್ಚಾಗುವಂತೆ ನೋಡಿಕೊಳ್ಳಬೇಕು. ನಾನು ಈ ಸಂದರ್ಭದಲ್ಲಿ ಒಂದೆರಡು ಸಲಹೆಗಳನ್ನು ಮಾಡುವುದಕ್ಕೆ ಬಯಸುತ್ತೇನೆ.

೩-೦೦ ಪಿ. ಎಂ.

ಧಾರವಾಡ ಜಿಲ್ಲೆಯಲ್ಲಿ ಹಾಲಿನ ಅಭಾವ ಬಹಳವಾಗಿದೆ. ಅಲ್ಲಿ ಡೈರಿಯ ವ್ಯವಸ್ಥೆ ಸರಿಯಾಗಿಲ್ಲ. ಅಲ್ಲಿ ಇದ್ದ ಡೈರಿ ವ್ಯವಸ್ಥಾಪಕರ ಮೇಲೆ ಅಪಾದನೆಗಳು ಬಂದಿವೆ. ಅವರನ್ನು ಅಲ್ಲಿಂದ ತೆಗೆಯಬೇಕೆಂದು ಸರ್ಕಾರದ ನಿರ್ಧಾರವಿತ್ತು ಡೈರಿಗೆ ಹಾಲಿನ ಸರಬರಾಜು ಸರಿಯಾಗಿ ಆಗದೆ ಜನಗಳಿಗೆ ತೊಂದರೆಯಾಗಿದೆ. ಈಗೇನೋ ಮಳೆಗಾಲವಾದ್ದರಿಂದ ಹಾಲಿನ ತೊಂದರೆ ಸ್ವಲ್ಪ ದೂರವಾಗಿದೆ. ಮಾನ್ಯ ಮಂತ್ರಿಗಳು ಕಳೆದ ಸಾರಿ ಈ ಮನೆಯಲ್ಲಿ ಮತ್ತು ಹುಬ್ಬಳ್ಳಿಗೆ ಬಂದಾಗಲೂ ಸಹ ಹಾಲಿನ ಪೂರೈಕೆಯನ್ನು ಹೆಚ್ಚು ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು. ಅಲ್ಲದೆ ಅಲ್ಲೇ ಒಂದು ಮೆಷಿನರಿ ಪ್ಲಾಂಟ್ ಹಾಕಿ ಹೆಚ್ಚಿನ ಹಾಲು ಉತ್ಪಾದನೆಯಾಗುವಂತೆ ಮಾಡುವುದಾಗಿ ಹೇಳಿದ್ದರು. ಆ ಕಾರ್ಯವಂತೂ ಅತ್ಯಂತ ಅಗತ್ಯವಾಗಿದೆ. ಅದು ಇಡೀ ಧಾರವಾಡ ಜಿಲ್ಲೆಯ ಜನತೆಗೆ ಅನುಕೂಲವಾಗುವಂತೆ ಹೈನು ಅಭಿವೃದ್ಧಿಯ ದೃಷ್ಟಿಯಿಂದ ಆ ರೀತಿಯ ಒಂದು ಯೋಜನೆ ಆಗಬೇಕಾದ ಅವಶ್ಯಕತೆ ಬಹಳವಾಗಿದೆ. ಜೊತೆಗೆ ಧಾರವಾಡದಲ್ಲಿರತಕ್ಕ ಕೃಷಿ ವಿಶ್ವವಿದ್ಯಾನಿಲಯ ಏನಿದೆ ಅದು ವಿಶ್ವವಿದ್ಯಾನಿಲಯದ ಮಟ್ಟಕ್ಕೆ ಏರಬೇಕು. ಅದರಿಂದ ಉತ್ತರ ಕರ್ನಾಟಕಕ್ಕೆ ಸಹಾಯವಾಗುತ್ತದೆ. ಆದ್ದರಿಂದ ಆ ಒಂದು ಯೋಜನೆಯನ್ನು ಕಾರ್ಯಗತ ಮಾಡುವುದೂ ಕೂಡ ಅವಶ್ಯವಾಗಿದೆ. ನಮಗೆ ಗೊತ್ತಿರುವ ಹಾಗೆ ಈಗಾಗಲೇ ಧಾರವಾಡ ಮಹಾನಗರ ಕ್ಷೇತ್ರದಲ್ಲಿ ಒಂದು ಹೈಕೋರ್ಟ್ ಬೆಂಚ್ ಆಗಬೇಕೆಂಬ ಸಲುವಾಗಿ ವಾದ ನಡೆದಿದೆ. ಅದರ ಉಪಯೋಗ ಮತ್ತು ಅವಶ್ಯಕತೆ ಅಲ್ಲಿನ ಜನತೆಗೆ ಬಹಳವಾಗಿದೆ. ಅವರು ತಮ್ಮ ತಮ್ಮ ದೂರುಗಳನ್ನು ಅಲ್ಲೇ ತೀರ್ಮಾನ ಮಾಡಿ ನ್ಯಾಯ ದೊರಕಿಸಿಕೊಳ್ಳುವ ದೃಷ್ಟಿಯಿಂದ ಆ ಒಂದು ಕಾರ್ಯವನ್ನು ಮಾಡುತ್ತೇವೆಂದು ಮಾನ್ಯ ಮಂತ್ರಿಗಳೂ ಕೂಡ ಹೇಳಿದ್ದರು. ಆದ್ದರಿಂದ ಈ ಒಂದು ಕಾರ್ಯ ಜಾಗ್ರತೆ ಕಾರ್ಯರೂಪಕ್ಕೆ ಬರುವಂತಾಗಬೇಕೆಂದು ಹೇಳುತ್ತೇನೆ. ಅಲ್ಲಿನ ರಾಯಪುರ

ಎಂಬಲ್ಲಿ ಒಂದು ಕಟ್ಟಡ ಇದೆ. ಅದನ್ನು ಪೋಲೀಸರಿಗೆ ಕೊಟ್ಟಿದ್ದಾರೆ. ಅದು ಮಹಾನಗರ ಸಭೆಯ ಕಛೇರಿಯೂ ಆಗಲಿಲ್ಲ ಅಥವಾ ಮತ್ತಾವ ಒಳ್ಳೆಯ ಉಪಯೋಗಕ್ಕೂ ಬರಲಿಲ್ಲ. ಅದರಲ್ಲಿ ಕೋರ್ಟನ್ನು ಸ್ಥಾಪಿಸಿದರೆ ಅಲ್ಲಿನ ಜನತೆಗೆ ತುಂಬ ಉಪಯೋಗವಾಗುತ್ತದೆ. ಹುಬ್ಬಳ್ಳಿಗೆ ಅಗತ್ಯವಾಗಿ ಆಗಬೇಕಾದ ಇನ್ನೊಂದು ಯೋಜನೆ ಎಂದರೆ ವಿಮಾನ ನಿಲ್ದಾಣ. ಅದಕ್ಕೆ ಕಾರ್ಪೊರೇಷನ್ನಿನವರು ಜಾಗ ಮತ್ತು ಹಣವನ್ನು ಕೊಟ್ಟಿದ್ದು ಕೆಲಸವೂ ಕೂಡ ಪ್ರಾರಂಭವಾಗಿದ್ದು ಮಧ್ಯದಲ್ಲಿ ನಿಂತುಹೋಗಿದೆ, ರಾಜ್ಯ ಸರ್ಕಾರದವರು ಮನಸ್ಸು ಮಾಡಿದರೆ ಅದಕ್ಕೆ ಬೆಂಬಲ ಸಿಗುತ್ತದೆ. ಈ ಬಗ್ಗೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಒಟ್ಟಿನಲ್ಲಿ ಆ ಭಾಗದ ಬೆಳವಣಿಗೆಯ ಒಂದು ದೃಷ್ಟಿಯಿಂದ ಕೆಲವು ಸೂಚನೆಗಳನ್ನು ಕೊಟ್ಟಿದ್ದೇನೆ. ಮತ್ತೇನಾದರೂ ಬೇರೆ ವಿಷಯಗಳಿದ್ದರೆ ಆಯಾಯ ಇಲಾಖೆಯ ಬೇಡಿಕೆಗಳು ಬಂದಾಗ ಮಾತನಾಡುತ್ತೇನೆ. ಇಂದು ಇಷ್ಟು ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ಕೆ. ತಕ್ಕಡ್ (ಪರಸಘಡ ಕ್ಷೇತ್ರ).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಮಾನ್ಯ ಅರ್ಥ ಮಂತ್ರಿಗಳು ಮಂಡಿಸಿರುವ ಮುಂಗಡ ಪತ್ರವು ಅತ್ಯಂತ ಸ್ವಾಗತಾರ್ಹವಾದುದು. ಅದು ಜನತೆಯ ವಿಕಾಸದ ದೃಷ್ಟಿಯಿಂದ ಮತ್ತು ಹಿಂದುಳಿದ ಭಾಗಗಳ ಸರ್ವಾಂಗೀಣ ಉನ್ನತಿಯ ದೃಷ್ಟಿಯಿಂದ ಮಂಡಿಸಿದಂತಹ ಒಂದು ಮುಂಗಡ ಪತ್ರ ಎಂದು ನನಗನ್ನಿಸುತ್ತದೆ. ನಾವು ಚುನಾವಣೆಯಲ್ಲಿ ಜನತೆಗೆ ಏನು ಆಶ್ವಾಸನೆಗಳನ್ನು ಕೊಟ್ಟಿದ್ದೇವೆ ಅದರಂತೆ ಜನತೆಯಲ್ಲಿ ಸರ್ಕಾರದ ಬಗ್ಗೆ ಒಂದು ವಿಶ್ವಾಸವನ್ನು ಹುಟ್ಟಿಸಬೇಕಾದರೆ ಸರ್ಕಾರದ ಯೋಜನೆಗಳನ್ನು ಅನುಷ್ಠಾನದಲ್ಲಿ ತರಬೇಕಾಗುತ್ತದೆ. ಇವತ್ತಿನ ಮುಂಗಡ ಪತ್ರದ ಸಾಮಾನ್ಯ ಚಿತ್ರವನ್ನು ನಾವು ಕಂಡಾಗ ಒಂದು ಆಶಾಕಿರಣ ನಮಗೆ ಬರುತ್ತದೆ. ಸಾಮಾನ್ಯವಾಗಿ ರಾಜ್ಯದ ಒಂದು ಪ್ರಗತಿಯ ದೃಷ್ಟಿಯಿಂದ ನೀರಾವರಿ ಯೋಜನೆಗಳು ಬಹಳ ಪ್ರಾಮುಖ್ಯವಾದವುಗಳು. ಇವತ್ತು ಎಲ್ಲ ಕಡೆ ಮಳೆಯ ಒಂದು ಅಭಾವ ಕಾಣುತ್ತಿದ್ದರೂ ನೀರಾವರಿ ಎಲ್ಲಿ ಇದೆ ಅಲ್ಲಿ ಮಾತ್ರ ರೈತರು ಆನಂದಭರಿತರಾಗಿದ್ದಾರೆ. ಮಲಪ್ರಭಾ ಯೋಜನೆಯ ಕೆಳಗೆ ಸುಮಾರು ಒಂದು ಲಕ್ಷಕ್ಕಿಂತ ಹೆಚ್ಚು ನೀರಾವರಿ ಯೋಜನೆ ತಯಾರಾಗುತ್ತಿದೆ. ಇಂಥ ಒಂದು ಕ್ಷೇತ್ರದಲ್ಲಿ ದೊಡ್ಡ ದೊಡ್ಡ ಏತ ನೀರಾವರಿ ಯೋಜನೆಗಳನ್ನು ಸರ್ಕಾರ ಕೈಗೊಂಡಿದೆ. ಆದರೆ ಏತ ನೀರಾವರಿ ಕಾರ್ಯ ಸಂಪೂರ್ಣವಾಗಿ ಮುಗಿದು, ಕಾಲುವೆ ಕೆಲಸ ಕೂಡ ಪೂರ್ಣವಾಗಿ, ರೈತರು ಭೂಮಿಯನ್ನು ಹಸನು ಮಾಡಿಕೊಂಡು ಗೊಬ್ಬರವನ್ನು ಹಾಕಿಕೊಂಡು ನಿಂತಿರುವಾಗ ಎಲೆಕ್ಟ್ರಿಸಿಟಿ ಇಲ್ಲದೆ ರೈತರಿಗೆ ನೀರು ದೊರೆಯುವಂತಿಲ್ಲ. ಸರ್ಕಾರದವರು ಎಲೆಕ್ಟ್ರಿಸಿಟಿ ಬೋರ್ಡಿಗೆ ಒಂದು ಲಕ್ಷದ ೩೫ ಸಾವಿರ ರೂಪಾಯಿಗಳನ್ನು ತುಂಬಿದ್ದಾರೆ. ಇವತ್ತು ಮಲಪ್ರಭಾ ಆಯಕಟ್ಟಿನ ಪ್ರದೇಶದಲ್ಲಿ ಏತ ನೀರಾವರಿ ಕಾರ್ಯ ಪೂರ್ಣವಾಗಿ ಸಾಕಷ್ಟು ನೀರು ತುಂಬಿ ನಿಂತಿದೆ, ಎಲೆಕ್ಟ್ರಿಸಿಟಿ ಇಲ್ಲದ್ದಕ್ಕೆ ಏತ ನೀರಾವರಿ ಕಾರ್ಯ ಪ್ರಾರಂಭವಾಗದೆ ಉಳಿದಿದೆ. ಸುಮಾರು ೧೦-೧೫ ಸಾವಿರ ಎಕರೆ ನೀರಾವರಿಯಾಗತಕ್ಕ ಇಂದಿನ ಪರಿಸ್ಥಿತಿಯಲ್ಲಿ ಸರ್ಕಾರ ಈ ಕಡೆ ಗಮನಹರಿಸಬೇಕಾಗಿದೆಯೆಂದು ನಾನು ಈ ಸಂದರ್ಭದಲ್ಲಿ ಸಂಬಂಧಪಟ್ಟ ಖಾತೆಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ ಈ ಬಗ್ಗೆ ನಾನು ಮಾನ್ಯ ಮಂತ್ರಿಗಳಿಗೆ ಸುಮಾರು ೮-೧೦ ತಂತಿಗಳನ್ನು ಕಳುಹಿಸಿದ್ದೇನೆ ಮತ್ತು ಪತ್ರಗಳನ್ನೂ ಕೂಡ ಬರೆದಿದ್ದೇನೆ. ಇವತ್ತು ಏತ ನೀರಾವರಿ ಕಾರ್ಯ ಪ್ರಾರಂಭವಾಗಬೇಕಾದರೆ ವಿದ್ಯುಚ್ಛಕ್ತಿಯ ಅವಶ್ಯಕತೆ ಬಹಳವಾಗಿದೆ. ಆ ಬಗ್ಗೆ ಸರ್ಕಾರ ಗಮನ ಹರಿಸುವುದು ಸೂಕ್ತ. ಮಲಪ್ರಭಾ, ಘಟಪ್ರಭಾ, ಅಪ್ಪರ್ ಕೃಷ್ಣ ಮತ್ತಿತರ ಇಂತಹ ಯೋಜನೆಗಳು ನಮ್ಮ ರಾಜ್ಯದಲ್ಲಿ ಪ್ರಾರಂಭವಾಗುವಾಗ ಅವಕ್ಕೆ ಇನ್ನೂ ಹೆಚ್ಚಿನ ರೀತಿಯ ಸಹಾಯವನ್ನು ಮಾಡಬೇಕು. ರೈತರಿಗೆ ನೀರು ಎಂದರೆ ಬಂಗಾರ ಬಂಗಾರ ಎಂದರೆ ನೀರು. ಇಷ್ಟೊಂದು ಮಹತ್ವವಾದ ನೀರಿನ ಸಮಸ್ಯೆಯನ್ನು ಮತ್ತು ರೈತರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಬೇಕೆಂದರೆ ಏತ ನೀರಾವರಿ ಯೋಜನೆಗಳನ್ನು ಮಾಡುವುದಾಗಲೀ ಕೆರೆಗಳನ್ನು ಕಟ್ಟಿಸಿ ಕೊಡುವುದಾಗಲೀ, ಬಾವಿಗಳನ್ನು ತೋಡಿಸಿ ಪಂಪುಸೆಟ್ಟುಗಳನ್ನು ಹಾಕಿಸಿಕೊಡುವುದಾಗಲೀ ಮಾಡಬೇಕು. ಇವತ್ತು ಸಣ್ಣ ಅಥವಾ ದೊಡ್ಡ ಹಿಡುವಳಿದಾರರಿಗೆ ನೀರನ್ನು ಒದಗಿಸಿಕೊಡುವ ಸಲುವಾಗಿ ಈ ನೀರಾವರಿ ಯೋಜನೆಗಳಿಗೆ ಸಾಕಷ್ಟು ಹಣವನ್ನು ನಮ್ಮ ಸರ್ಕಾರವು ಇಗಾಗಲೇ ಪೂರೈಸಿದೆ. ಇನ್ನು ಮುಂದೆಯೂ ಕೂಡ ಹೆಚ್ಚಿನ ರೀತಿಯಲ್ಲಿ ಮುಂದುವರಿಸಿಕೊಂಡು ಹೋಗಬೇಕೆಂದು ಸರ್ಕಾರಕ್ಕೆ ನಮ್ರವಾಗಿ ಸೂಚಿಸುತ್ತೇನೆ. ಇವತ್ತು ಭೂಸುಧಾರಣೆಯಿಂದ ಭೂಮಾಲೀಕತ್ವದ ಹಕ್ಕನ್ನು ದೊರಕಿಸಿಕೊಟ್ಟು ಸರ್ಕಾರ ರೈತರಿಗೆ ಸಂಜೀವಿಯಾಗಿದೆ, ಆದರಿಂದ ಇವತ್ತು ನಾವು ಭೂಮಿಯನ್ನು ಇಂಟೆನ್ಸಿವ್ ಕಲ್ಟಿವೇಷನ್ ಮಾಡುತ್ತಿದ್ದೇವೆ. ಭೂಮಿ ನಮ್ಮದೇ ಆಗಿರುವುದರಿಂದ ಸಾಗುವಳಿಯನ್ನು ಸರಿಯಾದ ರೀತಿಯಲ್ಲಿ ಮಾಡುತ್ತಿದ್ದೇವೆ. ಅಂಥ

ಭೂಮಿಗೆ ಇವತ್ತು ಎಲ್ಲೆಲ್ಲಿ ನೀರು ಸಿಗುತ್ತದೆಯೋ ಅದನ್ನೆಲ್ಲ ಹಿಡಿದು ಒದಗಿಸಬೇಕಾಗಿದೆ. ರೈತರ ಸಾಮಾನ್ಯ ಜೀವನದ ಆರ್ಥಿಕ ಪರಿಸ್ಥಿತಿಯನ್ನು ಎದುರಿಸುವ ಹಲವಾರು ರಾಜ್ಯದಲ್ಲಿ ಸಂಪೂರ್ಣವಾಗಿ ಸಣ್ಣ ಸಣ್ಣ ಕೆರೆಗಳನ್ನು ಕಟ್ಟುವುದಾಗಲೀ, ಬಾವಿಗಳನ್ನು ತೋಡಿಸುವುದರ ಮೂಲಕವಾಗಲೀ ಯಾವುದೇ ರೀತಿಯಲ್ಲಾದರೂ ನೀರನ್ನು ಹೊರಕ್ಕೆ ಹೋಗಬಿಡದೆ ರೈತರ ಭೂಮಿಗೆ ಉಪಯೋಗವಾಗುವಂತೆ ಮಾಡಬೇಕು. ಆ ದೃಷ್ಟಿಯಿಂದ ಮಾನ್ಯ ಅರ್ಥಮಂತ್ರಿಗಳು ನಮ್ಮ ನೀರಾವರಿ ಯೋಜನೆಯ ಪ್ರತಿಯೊಂದು ಕಾರ್ಯಕ್ಕೂ ಹೆಚ್ಚಿನ ಹಣವನ್ನು ಮಂಜೂರ್ಮಾಡಬೇಕು. ಈಗ ಮತ್ತೊಂದು ಮಾತನ್ನು ಸೂಚಿಸ ಬಯಸುತ್ತೇನೆ. ಅದೇನೆಂದರೆ, ಈಗಾಗಲೇ ನೀರಾವರಿಯಾದಂತಹ ಕೆಲವೊಂದು ಪ್ರದೇಶಗಳಲ್ಲಿ ಸೈಫನ್ ಹಾಕಿದರೂ ಕೂಡ ಸ್ವಲ್ಪ ಎತ್ತರ ಮಟ್ಟದಲ್ಲಿರತಕ್ಕ ಭೂಮಿ ಹಾಗೆಯೇ ನಡುವೆ ಉಳಿದು ಹೋಗುತ್ತದೆ. ಅಂಥ ಕಡೆಗೆ ನೀರನ್ನೊದಗಿಸಲು ಸ್ವಲ್ಪ ಹೆಚ್ಚು ಹಣವನ್ನು ಖರ್ಚು ಮಾಡಬೇಕು. ಹೀಗೆ ಮಾಡುವುದರಿಂದ ಸುಮಾರು ೧೦–೨೦ರಿಂದ ೧೦೦–೨೦೦ ಎಕರೆ ಭೂಮಿಗೆ ನೀರೊದಗಿಸುವ ಸಾಧ್ಯತೆ ಇದೆ.

ಸಾಮಾನ್ಯವಾಗಿ ನಾನು ಹೇಳಬೇಕಾದರೆ ಪರಸ್‌ಗಡ್ ಕ್ಷೇತ್ರದಲ್ಲಿ ಈಪೂತ್ತು ಗೋರಬಾಳ್, ಬಸಿದುನಿ, ಗೋರ್ನ್‌ಕೊಪ್, ಸಿರ್ಸ್ಂಗಿ, ಕಲ್ಲಾಪುರ ಈ ಕಡೆಗಳಲ್ಲಿ ಅರ್ಧಭಾಗ ನೀರಾವರಿಯಾಗಿದೆ. ಅದನ್ನು ಸಂಪೂರ್ಣಗೊಳಿಸಿ ಇನ್ನು ಮುಂದಕ್ಕೆ ಒಂದು ಕಾಲುವೆ ತೆಗೆಯುವುದಾದರೆ ಅಲ್ಲಿನ ಸಾವಿರಾರು ಎಕರೆ ನೀರಾವರಿಯಾಗುವ ಸಂದರ್ಭ ಇದೆ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಡನೆ ಚರ್ಚೆ ಮಾಡಿದ್ದೇನೆ. ಈ ಬಗ್ಗೆ ಮಾನ್ಯ ಮಂತ್ರಿಗಳ ಗಮನವನ್ನೂ ಕೂಡ ಈ ಸಂದರ್ಭದಲ್ಲಿ ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ಈಗ ಕಾಲುವೆ ಕೆಲಸ ನಡೆದಿದೆ, ಮುಂದಕ್ಕೆ ಇನ್ನೊಂದು ಸಣ್ಣ ಕಾಲುವೆ ಹಾಕಿದರೆ ಹೆಚ್ಚು ನೀರಾವರಿಯಾಗುತ್ತದೆ ಎಂದು ಮತ್ತೊಮ್ಮೆ ಹೇಳಬಯಸುತ್ತೇನೆ. ಇನ್ನು ಎರಡನೆಯದಾಗಿ ಕರಿಕಟ್ಟಿ, ಎಡಹಳ್ಳಿ, ಸಂಗ್ರಹಿಸಿಕೊಪ್ ಆ ಭಾಗದಲ್ಲಿ ಅಜುಬಾಜೂ ಕಾಲುವೆ ಕೆಲಸ ಆಗಿರುವುದರಿಂದ ಇದನ್ನು ಸ್ವಲ್ಪ ಮುಂದಕ್ಕೆ ಹಾಕಿ ಅದನ್ನು ಮುಂದುವರೆಸುವುದಾದರೆ ಅಲ್ಲೂ ಹೆಚ್ಚು ನೀರಾವರಿಯಾಗುತ್ತದೆ. ಇನ್ನು ಮೂರನೆಯದಾಗಿ ಘಟಪ್ರಭಾ ಯೋಜನೆ ಕೆಳಗೆ ಯಜ್ಞಸ್ರ್ವಿ. ಕಡಬಿ. ಶಿವಾಪೂರ್, ಕೊಟೂರ್, ಯಾರಗುಡ್ಡ ಭಾಗಕ್ಕೆಲ್ಲಾ ಕೆನಾಲ್ ಹಾಕಿದ್ದಾರೆ. ಅಲ್ಲಿ ಹೆಚ್ಚು ನೀರಾವರಿ ಆಗುವ ಸಾಧ್ಯತೆ ಇದೆ. ಅಲ್ಲಿ ಇನ್ನೊಂದು ಕೆನಾಲ್ ತೆಗೆಯುವುದಾದರೆ ಅದರ ಮುಂದೆ ಅಕ್ಕಿಸಾಗರ, ಮಾಡಂಗಿರಿ ಈ ಭಾಗಕ್ಕೂ ಕೂಡ ನೀರಾವರಿಯಾಗಿ ಬಡವರ ಭೂಮಿಗೆ ನೀರು ಸಿಕ್ಕುತ್ತದೆ. ಈ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ. ಆ ಭಾಗಕ್ಕೆಲ್ಲಾ ನೀರು ಸಾಕಾಗುವಷ್ಟು ಇದೆ. ಈಗ ಆ ನೀರು ಎಲ್ಲಿಯವರೆಗೆ ಕಾಲುವೆ ತೆಗೆದಿದ್ದಾರೆ ಅಲ್ಲಿಯವರೆಗೆ ಬಂದು ನಿಂತಿದೆ; ಅಲ್ಲಿ ರೈತರುಗಳು ನಮಗೆ ಇದರಿಂದ ಫಲ ಸಿಗುತ್ತದೆ ಅನ್ನುವ ಭಾವನೆ ಬಂದಿದೆ. ಆದುದರಿಂದ ಇತ್ತ ಕಡೆ ಅಧಿಕಾರಿಗಳು ಲಕ್ಷ್ಯಕೊಟ್ಟು ಆ ಬಡವರ ಭೂಮಿಗೆ ನೀರು ಒದಗಿಸಿಕೊಡುವಂತೆ ಕೆಲಸಕಾರ್ಯಗಳನ್ನು ಕೈಗೊಳ್ಳಬೇಕು ಎಂದು ಹೇಳುತ್ತೇನೆ. ಮತ್ತು ಮಾನ್ಯ ಮಂತ್ರಿಗಳು ಇದಕ್ಕೆ ಹೆಚ್ಚು ಹಣ ಒದಗಿಸಿಕೊಟ್ಟು ಆ ಭಾಗಕ್ಕೆಲ್ಲಾ ಹೆಚ್ಚು ನೀರಾವರಿಯಾಗುವಂತೆ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎಂದು ನಾನು ಈ ಸಂದರ್ಭದಲ್ಲಿ ಮನಃಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಇನ್ನು ಅಬ್ಕಾರಿ ಖಾತೆ ಬಗ್ಗೆ ಹೇಳುವುದಾದರೆ ಈ ಮದ್ಯಪಾನದಿಂದ ಹಣ ಬರುತ್ತಾ ಇದೆ ಎಂದು ಹೇಳುತ್ತಿದ್ದಾರೆ. ಆದರೆ ಇದರಿಂದಹಾನಿಯಾಗುತ್ತಾ ಇದೆ ಎಂದು ಹೇಳಬೇಕಾಗಿದೆ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಈ ಅಬ್ಕಾರಿ ಅಧಿಕಾರಿಗಳು ಸರಿಯಾಗಿ ಕಾರ್ಯಮಾಡಲಾರರು ಎಂದು ಹೇಳುತ್ತೇನೆ, ಏತಕ್ಕೆಂದರೆ ಕೆಲವು ಅಂಗಡಿಗಳನ್ನು ಖಾಸಗಿಯಾಗಿ ಇವರೇ ನಡೆಸುತ್ತಿದ್ದಾರೆ ಅಂತೆ ಕಾಣುತ್ತದೆ. ಮದ್ಯದ ಅಂಗಡಿಗಳ ಬಗ್ಗೆ ಹೇಳುವುದಾದರೆ ಕೆಲವು ಕಂಟ್ರಾಕ್ಟರುಗಳು ಖಾಸಗಿ ಸಿಬ್ಬಂದಿಯನ್ನು ಇಟ್ಟುಕೊಂಡು ಅನೇಕ ಜನರ ಮೇಲೆ ಅತ್ಯಾಚಾರ ಮಾಡುತ್ತಿದ್ದಾರೆ ಮದ್ಯದ ಒಂದು ಹೆಸರಿನ ಮೇಲೆ, ಮದ್ಯದ ಅಂಗಡಿಗಳ ಮೇಲೆ ಧಾಳಿ ಮಾಡಿದ ನಂತರ ಕಾನೂನಿನ ಏನು ಕ್ರಮಗಳನ್ನು ಕೈಗೊಳ್ಳಬೇಕೋ ಅದನ್ನು ಕೈಗೊಳ್ಳುತ್ತಾ ಇಲ್ಲ. ಅಂಥಾ ಸಮರ್ಥ, ಯೋಗ್ಯ ಅಧಿಕಾರಿಗಳು ಈ ಅಬ್ಕಾರಿ ಖಾತೆಯಲ್ಲಿ ಇದ್ದಿದ್ದರೆ ಇದರಿಂದ ಇನ್ನೂ ಉತ್ಪನ್ನ ಹೆಚ್ಚಾಗುತ್ತಿತ್ತು. ಈಗ ಅಬ್ಕಾರಿ ಇಲಾಖೆ ಶಿಥಿಲವಾಗಿದ್ದು ಇದನ್ನು ತಿರಸ್ಕರಿಸಬೇಕಾಗಿದೆ. ಎಲ್ಲಿ ನೋಡಿದರೆ ಅಲ್ಲಿ ಈ ಕಂಟ್ರಾಕ್ಟರುಗಳು ಜನರ ಮೇಲೆ ದಬ್ಬಾಳಿಕೆ ಮಾಡಿ ಆ ಜನರನ್ನು ನೋಯಿಸುತ್ತಿದ್ದಾರೆ. ಅವರು ಅಂಥಾ ಖಾಸಗೀ ಸಿಬ್ಬಂದಿಯನ್ನಿಟ್ಟುಕೊಂಡು ತಮಗೆ ಉಪಯೋಗವಾಗುವಂಥಾ ಕೆಲಸಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಇತ್ತ ಕಡೆ

ಸರ್ಕಾರದವರು ಗಮನ ಹರಿಸಿ ಯಾರು ಖಾಸಗೀ ಸಿಬ್ಬಂದಿ ಇಟ್ಟುಕೊಂಡಿದ್ದಾರೋ ಅವರನ್ನು ನಿರ್ಮೂಲ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಈವೊತ್ತಿನ ದಿವಸ ಮಧ್ಯದ ಅಂಗಡಿಗಳನ್ನು ಸಂಪೂರ್ಣವಾಗಿ ಬಂದ್ ಮಾಡಬೇಕು ಅನ್ನುವುದು ಕೇಂದ್ರ ಸರ್ಕಾರದ ಒಂದು ನೀತಿಯಾಗಿದೆ. ಅವರು ಈವೊತ್ತಿನ ದಿವಸ ರಾಜ್ಯಸರ್ಕಾರಕ್ಕೆ ಇದರಿಂದ ಸಿಕ್ಕಬೇಕಾದ ಹಣವನ್ನು ಸಂಪೂರ್ಣವಾಗಿ ಒದಗಿಸಿ ಕೊಡುವುದಾದರೆ ಈವೊತ್ತು ರಾಜ್ಯ ಸರ್ಕಾರ ಈ ಮಧ್ಯದ ಅಂಗಡಿಗಳನ್ನು ಬಂದ್ ಮಾಡಬಹುದು. ಈಗ ನಮ್ಮ ಸರ್ಕಾರ ಟೆಂಪರೆನ್ಸ್ ಬೋರ್ಡ್ ಅಂತ ಮಾಡಿದ್ದಾರೆ. ಮಧ್ಯವನ್ನು ಕುಡಿಯಬೇಕು ಆದರೆ ಅದು ಮಿತವಾಗಿರಬೇಕು ಎಂದು ಹೇಳುತ್ತಾರೆ. ಈವೊತ್ತಿನ ದಿವಸ ಫ್ರೆಂಚ್ ಪಾಲಿಷ್ ಅಂತ ಬಂದು ಅದು ಜನರ ಆರೋಗ್ಯವನ್ನು ಕೆಡಿಸುತ್ತಾ ಇದೆ. ಈವೊತ್ತು ಇದಕ್ಕೆ ಹೆಚ್ಚು ಲೈಸನ್ಸ್ ಅನ್ನು ಕೊಡುತ್ತಿದ್ದಾರೆ. ಈವೊತ್ತಿನ ದಿವಸ ಕಳ್ಳಭಟ್ಟಿ ವ್ಯಾಪಾರ ಹೆಚ್ಚಾಗಿದೆ. ಫ್ರೆಂಚ್ ಪಾಲಿಷ್ ಆಗಲಿ, ಸ್ಪಿರಿಟ್ ಆಗಲಿ ಇದನ್ನು ಹೆಚ್ಚಾಗಿ ಕೆಲಸಕ್ಕೆ ಉಪಯೋಗ ಆಗುತ್ತಾ ಇದೆ. ಅದಕ್ಕಾಗಿ ನಮ್ಮ ಬೆಳಗಾಂ ಜಿಲ್ಲೆಯೊಂದರಲ್ಲೇ ಸುಮಾರು ೧೦೦ ಪಟ್ಟು ಲೈಸನ್ಸ್ ಕೊಟ್ಟಿದ್ದಾರೆ ಏತಕ್ಕೆಂದರೆ ಫರ್ನೀಚರ್ ಮಾಡುವ ಸಲುವಾಗಿ ಈ ಲೈಸನ್ಸ್ ಅನ್ನು ಕೊಟ್ಟಿದ್ದಾರೆ. ತಮಗೆ ಹೇಳಬೇಕಾದರೆ ಬೆಳಗಾಂ ಜಿಲ್ಲೆಯ ದೃಷ್ಟಿಯಿಂದಾಗಲಿ ರಾಜ್ಯದ ದೃಷ್ಟಿಯಿಂದಾಗಲಿಲಿ ಈ ಮಧ್ಯವನ್ನು ಬಂದ್ ಮಾಡಬೇಕಾದರೆ ಫ್ರೆಂಚ್ ಪಾಲಿಷ್‌ಗೆ ಈವೊತ್ತು ಏನು ಲೈಸನ್ಸ್ ಕೊಟ್ಟಿದ್ದಾರೋ ಅದನ್ನು ಕಂಟ್ರೋಲ್ ಮಾಡಬೇಕು. ಈ ಬಗ್ಗೆ ಅಬ್ಕಾರಿ ಅಧಿಕಾರಿಗಳು ಗಮನ ಹರಿಸಬೇಕು. ಈ ಬಗ್ಗೆ ಅಬ್ಕಾರಿ ಖಾತೆಯಲ್ಲಿರುವ ಕೆಲವರು ಫ್ರೆಂಚ್ ಪಾಲಿಷ್‌ಗೆ ಲೈಸನ್ಸ್ ಕೊಟ್ಟು ಈ ಒಂದು ವ್ಯಾಪಾರ ನಡೆಸುತ್ತಿದ್ದಾರೆ ಎಂದು ನಮಗೆ ಕಂಡು ಬಂದಿದೆ. ಎಷ್ಟೋ ಜನ ಬಡವರು ಇದರಿಂದ ಕಣ್ಣು ಕಳೆದುಕೊಂಡಿದ್ದಾರೆ, ಕೆಲವರಿಗೆ ಕಣ್ಣಿನ ರೋಗ ಬಂದಿದೆ. ಎಷ್ಟೋ ಜನರು ಸತ್ತಿದ್ದಾರೆ. ಆದುದರಿಂದ ಇದಕ್ಕೆ ಲೈಸನ್ಸ್ ಕೊಡುವುದನ್ನು ಕಡಿಮೆ ಮಾಡಬೇಕು ಮತ್ತು ಈ ಬಗ್ಗೆ ಯಾರು ವ್ಯಾಪಾರ ಮಾಡುತ್ತಾರೋ ಅವರ ಕಡೆ ಸರಿಯಾಗಿ ಗಮನ ಹರಿಸಿ ತಕ್ಕ ಕಾರ್ಯಕ್ರಮ ಕೈಗೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನು ಪೋಲೀಸ್ ಖಾತೆ ಬಗ್ಗೆ ಹೇಳುವುದಾದರೆ ಕೆಲವು ಅಧಿಕಾರಿಗಳು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಇದರಲ್ಲಿ ಐ.ಪಿ.ಸಿ. ಮತ್ತು ಸಿ.ಆರ್.ಪಿ.ಸಿ. ಖಾತೆ ಏನು ಇದೆ ಈ ಖಾತೆಗಳು ಏನು ಇವೆ ಇದರಿಂದ ಸಂಪೂರ್ಣ ರಕ್ಷಣೆ ಆಗಬೇಕಾಗಿದೆ. ಈಗ ಮಟ್ಕಾ ಮತ್ತು ಗ್ಯಾಂಬ್ಲಿಂಗ್ ತೆಗೆದುಕೊಂಡರೆ ಪ್ರತಿಯೊಂದು ಹಳ್ಳಿಯಲ್ಲೂ ಕೂಡ, ಪ್ರತಿಯೊಂದು ಷಹರ್‌ನಲ್ಲೂ ಕೂಡ, ಪ್ರತಿಯೊಂದು ಸಣ್ಣ ಸಣ್ಣ ಬೀಡಿ ಅಂಗಡಿಗಳಲ್ಲೂ ಕೂಡ ಈ ವ್ಯಾಪಾರ ನಡೆಯುತ್ತಾ ಇದೆ. ಈ ಬಗ್ಗೆ ಜಿಲ್ಲಾ ಪೋಲೀಸ್ ಅಧಿಕಾರಿಗಳಾಗಲಿ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಆಗಲಿ ಸಾಕಷ್ಟು ಗಮನ ಹರಿಸಿದಂತೆ ಕಾಣಲಿಲ್ಲ. ತಮಗೆ ಹೇಳಬೇಕಾದರೆ ಬೆಳಗಾಂ ಒಂದರಲ್ಲೇ ಪ್ರತಿ ದಿವಸವೂ ೫೦ ಸಾವಿರಕ್ಕಿಂತ ಹೆಚ್ಚಾಗಿ ಈ ಮಟ್ಕಾದಲ್ಲಿ ಕಲೆಕ್ಷನ್ ಆಗುತ್ತಾ ಇರುವುದನ್ನು ನಾನು ನೋಡುತ್ತ ಇದ್ದೇವೆ. ಪೋಲೀಸಿನವರು ಪ್ರತಿಯೊಂದು ಅಂಗಡಿಯ ಮುಂದೆ ಬಂದು ತಮ್ಮ ಮಾಮೂಲನ್ನು ವಸೂಲ್ಮಾಡಿಕೊಂಡು ಹೋಗುತ್ತಿದ್ದಾರೆ. ಇತ್ತ ಕಡೆ ಗಮನ ಹರಿಸಬೇಕು. ಇನ್ನು ಇವೊತ್ತಿನ ದಿವಸ ಚರ್ಚೆ ಮತ್ತು ಮಸೀದಿ ಮತ್ತು ಪವಿತ್ರವಾದಂಥಾ ಸ್ಥಳಗಳಲ್ಲಿ ಕಡೆಗಳಲ್ಲಿ ಕಳ್ಳಭಟ್ಟಿ ಅಂಗಡಿಳನ್ನು ತೆರೆದಿದ್ದಾರೆ. ಹೈವೇ ಮೇಲೆ ಅಂಗಡಿಗಳನ್ನು ತೆರೆದಿದ್ದಾರೆ, ಎಷ್ಟೋ ಕಡೆಗಳಲ್ಲಿ ಪವಿತ್ರವಾದ ಸ್ಥಳಗಳ ಮುಂದೆ ಅಂಗಡಿಗಳನ್ನು ತೆರೆಯುವುದಕ್ಕೆ ಉತ್ತೇಜನ ಕೊಟ್ಟಿದ್ದಾರೆ. ಅಂಥಾ ಕಡೆಗಳಲ್ಲಿ ಈ ಅಂಗಡಿಗಳನ್ನು ಬಂದ್ ಮಾಡುವುದಕ್ಕ ಪೋಲೀಸಿನವರಿಗೆ ಅಧಿಕಾರ ಇದ್ದರೂ ಕೂಡ ಮತ್ತಷ್ಟು ಕೂಡ ಉತ್ತೇಜನ ಕೊಡುತ್ತಿದ್ದಾರೆ. ಆದುದರಿಂದ ಸರ್ಕಾರದವರು ಇತ್ತ ಕಡೆ ಸ್ವಲ್ಪ ಗಮನ ಹರಿಸಬೇಕು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ನಾನು ಈಗ ಇಲ್ಲಿ ಮೂರು ಮಾತನ್ನು ಮುಖ್ಯವಾಗಿ ಹೇಳಬೇಕಾಗಿದೆ. ಒಂದು ಗ್ಯಾಂಬ್ಲಿಂಗ್ ಇನ್ನೊಂದು ಮಟಕಾ, ಮತ್ತೊಂದು ಅರ್‍ಯಾಕ ಷಾಪ್ಸ್ ಟಾಡಿ ಷಾಪ್ಸ್‌ಗಳನ್ನು, ಇವುಗಳನ್ನು ಎಷ್ಟೇ ಬಡೆದಾಟ ಆದರೂ ಕೂಡ, ಎಷ್ಟೇ ಅತ್ಯಾಚಾರಗಳು ಆದರೂ ಕೂಡ ಬಂದ್ ಮಾಡಬೇಕು. ಕೆಲವು ಕಡೆಗಳಲ್ಲಿ, ಅದರಲ್ಲಿಯೂ ನಮ್ಮ ಹಳ್ಳಿಗಳಲ್ಲಿ ಇವುಗಳ ಬಗ್ಗೆ ಜನರು ಕಂಪ್ಲೆಂಟ್ ತೆಗೆದುಕೊಂಡು ಪೋಲೀಸ್ ಸ್ಟೇಷನ್‌ಗೆ ಹೋದರೆ, ಕಂಪ್ಲೇಂಟನ್ನು ತೆಗೆದುಕೊಳ್ಳುವವರು ಇಲ್ಲವಾಗಿದೆ. ಇಂಥವರು ನಮ್ಮ ಪೋಲೀಸ್ ಖಾತೆಯಲ್ಲಿದ್ದಾರೆ. ಒಂದೊಂದು ಕಡೆ ಪೋಲೀಸ್ ಠಾಣೆಯಲ್ಲಿ ೮–೧೦ ವರ್ಷದಿಂದ ಕೆಲಸ ಮಾಡುತ್ತಿರುವ ಅಧಿಕಾರಿಗಳು ಇದ್ದಾರೆ, ಸಬ್ ಇನ್ಸ್‌ಪೆಕ್ಟರ್ ಆದವರು ಡಿವೈಎಸ್‌ಪಿ ಆಗುವ ತನಕ ಒಂದೇ ಕಡೆ ಇರುವ ಸನ್ನಿವೇಶಗಳು ಇವೆ. ಇಂಥವರ ಬಗ್ಗೆ ಸರ್ಕಾರ ಯಾವ ರೀತಿ ಗಮನಹರಿಸು

ತ್ತದೆಯೋ ನನಗೆ ಗೊತ್ತಿಲ್ಲ. ಜನತೆಯ ಆಸ್ತಿಪಾಸ್ತಿಗಳನ್ನು ಮತ್ತು ಅವರನ್ನು ರಕ್ಷಣೆ ಮಾಡುವ ದೃಷ್ಟಿಯ ಸಲುವಾಗಿ ನಾನು ವಿನಂತಿ ಮಾಡಿಕೊಳ್ಳುವುದು ಇಷ್ಟೆ, ಇಂಥ ಅಧಿಕಾರಿಗಳನ್ನು ಮೊದಲು ಬದಲಾಯಿಸಬೇಕು. ಈ ರೀತಿಯಲ್ಲಿ ಆಗದ ಹೊರತು ಸಮಾಜದಲ್ಲಿ ಪೋಲೀಸ್ ಖಾತೆಯವರಿಂದ ಯಾವ ರೀತಿಯ ಪ್ರಯೋಜನ ಆಗುತ್ತದೆ ಎನ್ನುವುದು ತಿಳಿಯುವುದಿಲ್ಲ. ಮಟಕಾ ಬಿಸಿನೆಸ್, ಗ್ಯಾಂಬ್ಲಿಂಗ್ ಮತ್ತು ಅನೇಕ ತರಹದ ಜೂಜುಗಳು, ಜನರ ಮೇಲೆ ಆಗುವಂಥ ಅನ್ಯಾಯವನ್ನು ತೊಲಗಿಸುವ ಸಲುವಾಗಿ ಹೋಂ ಡಿಪಾರ್ಟ್‌ಮೆಂಟ್‌ನವರು ಇನ್ನೂ ಹೆಚ್ಚಿನ ರೀತಿಯಲ್ಲಿ ಸುಧಾರಿಸಬೇಕು ಎಂದು ನಾನು ನಮ್ರತೆಯಿಂದ ಸೂಚನೆ ಮಾಡುತ್ತೇನೆ. ಅದಕ್ಕಾಗಿ ಸರ್ಕಾರದವರು ಎಷ್ಟೇ ಹಣವನ್ನು ಖರ್ಚು ಮಾಡಿದರೂ, ಅದು ಯೋಗ್ಯ ರೀತಿಯಲ್ಲಿ ಖರ್ಚು ಆಗುತ್ತಿದೆಯೋ ಎನ್ನುವುದನ್ನು ನಾವು ವಿಚಾರ ಮಾಡಬೇಕು.

ಇನ್ನು ರಸ್ತೆ ನಿರ್ಮಾಣದ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ನಮ್ಮ ಕಡೆ ೩೦ ವರ್ಷಗಳಾದರೂ ಕೂಡ, ಅದರಲ್ಲಿಯೂ ನನ್ನ ಮತದಾರರ ಕ್ಷೇತ್ರದಲ್ಲಿ ಅನೇಕ ಕಡೆಗಳಲ್ಲಿ ಸರಿಯಾದ ರಸ್ತೆಗಳು ಇಲ್ಲ. ಒಂದೊಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಹೋಗಬೇಕಾದರೆ ಸುಮಾರು ೮ ಮೈಲಿಗಳ ವರೆಗೆ ನೇರವಾದ ರಸ್ತೆಯಿಲ್ಲದೆ ಕಾಲು ನಡಿಗೆಯಲ್ಲಿಯೇ ಹೋಗಬೇಕಾಗಿದೆ. ಮಕ್ಕಳುಗಳು ಶಾಲೆಗಳಿಗೆ ನಡೆದುಕೊಂಡು ಹೋಗಬೇಕಾಗಿದೆ, ಅಲ್ಲದೆ, ಗಿರಣಿಗೆ ಹೋಗಿ ಬೀಸಿಕೊಂಡು ಬರಬೇಕಾದರೆ ನಡುವೆ ಮಳೆಗೆ ಸಿಕ್ಕರೆ ಬೀಸಿದಂಥ ಹಿಟ್ಟು ಕಣಕ ಆಗುತ್ತದೆ. ಇವತ್ತು ನನ್ನ ಕ್ಷೇತ್ರದಲ್ಲಿ ಸತ್ತಿಗೆರೆ, ಕೊಡ್ಲಿವಾಡ, ಮತ್ತು ಪರಸ್‌ಗಡ್ ಇವುಗಳಿಗೆ ಸರಿಯಾದ ರಸ್ತೆ ಇಲ್ಲ. ನನ್ನ ಕ್ಷೇತ್ರದ ಒಂದು ಊರಿನಲ್ಲಿ ಒಬ್ಬರೂ ನೌಕರಿಗೆ ಹೋಗದ ಪರಿಸ್ಥಿತಿ ಇದೆ. ಅಲ್ಲಿ ೪–೫ನೇ ಸ್ಟ್ಯಾಂಡರ್ಡ್‌ವರೆಗೆ ಸ್ಕೂಲು ಸಹ ಇಲ್ಲ. ಇದಕ್ಕಾಗಿ ಅರ್ಜಿ ಕೊಟ್ಟರೂ ಸಹಾ ಶಿಕ್ಷಣಾಧಿಕಾರಿಗಳು ಅದಕ್ಕೆ ಮಾನ್ಯತೆ ಮಾಡಿಲ್ಲ, ಕೆಲವೊಂದು ಕಡೆ ಏಳನೇ ಸ್ಟ್ಯಾಂಡರ್ಡ್‌ವರೆಗೆ ಮಾತ್ರ ಶಾಲೆಗಳು ಇವೆ. ಪ್ರೈಮರಿ ಶಿಕ್ಷಣದ ಸೌಕರ್ಯ ನಮ್ಮ ಹಳ್ಳಿಗಳಿಗೆ ಮುಟ್ಟಬೇಕಾದರೆ, ಜಿಲ್ಲಾಧಿಕಾರಿಗಳಾಗಲೀ ಸಂಬಂಧಿಸಿದ ಶಿಕ್ಷಣಾಧಿಕಾರಿಗಳಾಗಲೀ, ಸೂಕ್ತ ಗಮನಹರಿಸಿಲ್ಲ ಎಂದು ನನಗನ್ನಿಸುತ್ತದೆ. ಏಕೆಂದರೆ, ಸುಮಾರು ೫–೬ ಊರುಗಳಲ್ಲಿ ಇನ್ನೂ ೫ನೇ ಸ್ಟ್ಯಾಂಡರ್ಡ್ ಸಹ ಕೊಟ್ಟಿಲ್ಲ. ಇರುವಂಥ ಶಾಲೆಗಳಲ್ಲಿ ಕೂಡಲಿಕ್ಕೆ ಸ್ಥಳ ಇಲ್ಲ, ಒಂದೊಂದು ತರಗತಿಯಲ್ಲಿ ೭೦–೮೦ ಹುಡುಗರುಗಳು ಇದ್ದಾರೆ. ನಮ್ಮ ಕ್ಷೇತ್ರದಲ್ಲಿ ವಿಶಾಲವಾದ ಸ್ಕೂಲುಗಳು ಇಲ್ಲ, ಕಟ್ಟಡಗಳು ಇಲ್ಲ, ಮತ್ತು ಮಾಸ್ತರುಗಳ ಕೊರತೆಯೂ ಹೆಚ್ಚಾಗಿ ಇದೆ. ನಮಗೆ ಸುಮಾರು ಇನ್ನೂ ಒಂದು ಸಾವಿರ ಜನರು ಶಿಕ್ಷಕರು ಬೇಕಾಗಬಹುದು ಎಂದು ನನ್ನ ಅಭಿಪ್ರಾಯ. ಆದರೆ ಇದು ಹಾಗೆಯೇ ಮುಂದುವರಿದುಕೊಂಡು ಹೋಗುತ್ತಿದೆ ಅದಕ್ಕಾಗಿ ನನಗೆ ಬಹಳ ಖೇದ ಅನ್ನಿಸುತ್ತದೆ. ಶಿಕ್ಷಣದ ಸೌಕರ್ಯವನ್ನು ಸರ್ಕಾರದವರು ಹೆಚ್ಚಾಗಿ ಕೊಡಬೇಕು, ಶಿಕ್ಷಣದ ಜ್ಞಾನ ಜ್ಯೋತಿಯನ್ನು ನಮ್ಮ ಹಳ್ಳಿಯಲ್ಲಿ ನಮ್ಮ ಮಕ್ಕಳಿಗೆ ಕೊಡಬೇಕಾಗಿದೆ. ಅದರ ಮುಖಾಂತರ ಜ್ಞಾನ ದೀಪದ ಬೆಳಕು ಹರಿಯಬೇಕು ಎನ್ನುವ ದೃಷ್ಟಿಯಿಂದ ಸರ್ಕಾರದವರು ಇದರ ಬಗ್ಗೆ ಹೆಚ್ಚಿನ ಹಣವನ್ನು ಖರ್ಚು ಮಾಡಬೇಕು ಎಂದು ನಾನು ನಮ್ರಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಸಮಾಜ ಕಲ್ಯಾಣ ಖಾತೆಯ ಬಗೆ ಎರಡು ಮಾತುಗಳನ್ನು ಹೇಳುತ್ತೇನೆ. ಈ ಖಾತೆಯವರು ಅನೇಕ ಹಾಸ್ಟೆಲುಗಳನ್ನು ನಡೆಸುತ್ತಿದ್ದಾರೆ. ಆದರೆ ಇವುಗಳ ಮೇಲ್ವಿಚಾರಣೆ ಸರಿಯಾದ ರೀತಿಯಲ್ಲಿ ಆಗುತ್ತಿಲ್ಲ. ಕೆಲವೊಂದು ಹಾಸ್ಟಲ್‌ನಲ್ಲಿ ಹುಡುಗರ ಸಂಖ್ಯೆಯನ್ನು ೨–೩ ಪಟ್ಟು ಜಾಸ್ತಿ ಕೊಟ್ಟು ಹಣವನ್ನು ತೆಗೆದುಕೊಳ್ಳುತ್ತಿದ್ದಾರೆಂದು ನಮಗೆಲ್ಲಾ ಗೊತ್ತಿದೆ. ಈ ಬಗ್ಗೆ ಸರ್ಕಾರದವರು ತಮ್ಮ ದಕ್ಷ ಆಡಳಿತವನ್ನು ಕೊಡಬೇಕಾಗಿದೆ. ನಮ್ಮ ಕಡೆ ರಾಯಭಾಗ ಮತ್ತು ಗೋಕಾಕ್‌ನಲ್ಲಿ ಇವರು ನಡೆಸುವ ಕೆಲವು ಹಾಸ್ಟಲುಗಳು ಇವೆ. ಖಾನಾಪುರದಲ್ಲಿಯೂ ಇಂಥ ಹಾಸ್ಟಲುಗಳು ಇವೆ. ಆದರೆ ಹೆಚ್ಚಿನ ಹಾಸ್ಟಲುಗಳು ಬೋಗಸ್ ಎಂದು ತಿಳಿದುಬಂದಿದೆ. ಬೆಳಗಾಂ ಜಿಲ್ಲೆಯಲ್ಲಿ ಅನೇಕ ಬೋಗಸ್ ಹಾಸ್ಟಲುಗಳು ಇವೆ, ಇದರ ಬಗೆ ಅನೇಕ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಸರ್ಕಾರಕ್ಕೆ ಅರಿಕೆ ಮಾಡಿಕೊಂಡರೂ ಸಹ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಇತ್ತ ಕಡೆ ಗಮನಹರಿಸುತ್ತಿಲ್ಲ. ಹತ್ತು ಹುಡುಗರು ಇರುವ ಹಾಸ್ಟಲುಗಳಲ್ಲಿ ೪೦-೫೦ ಹುಡುಗರು ಇದ್ದಾರೆ ಎಂದು ಲೆಕ್ಕ ತೋರಿಸಿ ಬೋಗಸ್ ಹಾಸ್ಟಲುಗಳನ್ನು ನಡೆಸುತ್ತಿದ್ದಾರೆ.

ಪಠ್ಯ ಪುಸ್ತಕಗಳ ಬಗ್ಗೆ ನಮ್ಮ ಮಾನ್ಯ ಮಿತ್ರರುಗಳು ಹೇಳಿದ್ದಾರೆ.

ಆಸ್ಪತ್ರೆಗಳ ವಿಷಯವಾಗಿ ಎರಡು ಮಾತುಗಳನ್ನು ಹೇಳುತ್ತೇನೆ. ನಮ್ಮ ಸವದತ್ತಿಯ ಆಸ್ಪತ್ರೆಯಲ್ಲಿ ಎಕ್ಸ್‌ರೇ ಮೆಷಿನ್ ಕೆಟ್ಟು ಹೋಗಿದೆ. ಅಲ್ಲಿಯ ಡಾಕ್ಟರು ಖಾಸಗಿಯಾಗಿ ಪ್ರಾಕ್ಟೀಸ್ ಮಾಡುತ್ತಿದ್ದಾರೆ. ನಮ್ಮ ಜನರಿಗೆ ಸೌಕರ್ಯಗಳನ್ನು ಒದಗಿಸಿಕೊಡದೆ ಔಷಧಿಗಳನ್ನು ತೆಗೆದುಕೊಂಡು ಹೋಗಿ, ತಮ್ಮ ದವಾಖಾನೆಗಳಲ್ಲಿ ಇಟ್ಟುಕೊಂಡಿದ್ದಾರೆ. ಇದರ ಬಗ್ಗೆ ನಾನು ಹೆಲ್ತ್ ಡೈರೆಕ್ಟರ್ ಅವರಿಗೆ ತಿಳಿಸಿದ್ದೇನೆ. ಈ ಡಿಸ್ಪೆನ್ಸರಿಗೆ ಹಾಕಿದಂಥ ಎಂಬಿಬಿಎಸ್ ಡಾಕ್ಟರ್, ಆಸ್ಪತ್ರೆಯಲ್ಲಿ ಮೂರು ದಿವಸ ಕೆಲಸವನ್ನು ಸರಿಯಾಗಿ ಮಾಡುತ್ತಾರೆಯೋ ಎನ್ನುವುದನ್ನು ನೋಡಬೇಕು. ಯಾವ ಡಾಕ್ಟರು ಹಳ್ಳಿಯಲ್ಲಿ ಕೆಲಸ ಮಾಡಬೇಕು ಎನ್ನುವ ಮನೋಭಾವ ಇಟ್ಟುಕೊಂಡಿರುತ್ತಾರೋ ಅಂಥವರನ್ನು ಮಾತ್ರ ಹಳ್ಳಿಗಳಿಗೆ ಹಾಕಬೇಕು ಎಂದು ನಾನು ಸೂಚನೆ ಮಾಡುತ್ತೇನೆ. ನನ್ನ ಕ್ಷೇತ್ರದಲ್ಲಿ ಮಾದಲಗೆರೆಯಲ್ಲಿ, ಒಬ್ಬರು ಸುಟ್ಟುಕೊಂಡು ೧೫ ದಿವಸವಾದರೂ ಅಲ್ಲಿಗೆ ಡಾಕ್ಟರು ಹೋಗಿ ನೋಡುವಂಥ ಪರಿಸ್ಥಿತಿ ಬರಲಿಲ್ಲ. ಮೂರು ಮೈಲಿ ದೂರದಲ್ಲಿರುವ ಎರಗಟ್ಟಿಗೆಯ ಡಾಕ್ಟರ್‌ಗೆ ವರದಿ ಕೊಟ್ಟರೂ ಕೂಡ ಡಾಕ್ಟರ್ ಹೋಗಲಿಲ್ಲ. ಸವದತ್ತಿ. ಎರಗಟ್ಟಿ ಇಂಥ ಹಳ್ಳಿಗಳಿಗೆ ಸರ್ಕಾರದವರು ಸಾಕಷ್ಟು ಗಮನ ಹರಿಸಿ, ಹಳ್ಳಿಯ ಬಾಂಧವರಿಗೆ ಉಪಯೋಗವಾಗುವಂಥ ಕೆಲಸ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಈಗ ಸರ್ಕಾರದವರು ಬೆಂಗಳೂರು ನಗರದಿಂದ ಹೊರಗೆ ಹೈಕೋರ್ಟ್ ಬೆಂಚು ಒಂದನ್ನು ತೆರೆಯಬೇಕು ಎಂದು ಮಾಡಿದ್ದಾರೆ ಇದಕ್ಕೆ ಬೆಳಗಾವಿ ಎಲ್ಲಾ ರೀತಿಯಿಂದಲು ಯೋಗ್ಯವಾದ ಸ್ಥಳ ಎಂದು ನಾನು ಹೇಳಬೇಕಾಗಿದೆ. ಬ್ರಿಟಿಷರ ಕಾಲದಿಂದಲೂ ಬೆಳಗಾವಿ ಸರ್ವಾಂಗೀಣ ಉನ್ನತ ಸ್ಥಿತಿಯಲ್ಲಿದೆ. ನಮ್ಮ ಕರ್ನಾಟಕದಲ್ಲಿ, ಬೆಂಗಳೂರಿನ ನಂತರ ಆಡಳಿತ ದೃಷ್ಟಿಯಿಂದ, ಔದ್ಯೋಗಿಕ ದೃಷ್ಟಿಯಿಂದ ಮತ್ತು ಎಲ್ಲಾ ದೃಷ್ಟಿಗಳಿಂದಲೂ ಕೂಡ ಇದು ಉತ್ತಮನಗರವಾಗಿದೆ. ವಿಮಾನದ ಅನುಕೂಲತೆ ಇದೆ ರೈಲು ಅನುಕೂಲ ಇದೆ, ಬಸ್‌ಗಳ ಅನುಕೂಲ ಇದೆ. ಇಲ್ಲಿ ಮೂರು ಡಿಸ್ಟ್ರಿಕ್ ಕೋರ್ಟುಗಳು ೯ ಸಿವಿಲ್ ಕೋರ್ಟುಗಳು, ೧೬ ಮುನ್ಸೀಫ್ ಕೋರ್ಟುಗಳು ಇವೆ. ಅಲ್ಲದೆ ಡಿವಿಷನಲ್ ಹೆಡ್‌ಕ್ವಾರ್ಟರ್ ಮತ್ತು ರೆವಿನ್ಯೂ ಅಪಲೇಟ್ ಕೋರ್ಟುಗಳು, ಲೇಬರ್ ಕೋರ್ಟುಗಳು ಇಲ್ಲಿ ಇವೆ. ಬೆಳಗಾವಿ ಡಿವಿಷನ್ ಎಂದರೆ, ಗುಲ್ಬರ್ಗ, ರಾಯಚೂರು, ಬೀದರ್, ಬಳ್ಳಾರಿ ಮತ್ತು ಧಾರವಾಡ, ಕಾರವಾರ ಜಿಲ್ಲೆಗಳು ಇದರಲ್ಲಿ ಸೇರುತ್ತವೆ. ಈ ಎಲ್ಲಾ ಜಿಲ್ಲೆಗಳಿಗೂ ಇದು ಮಧ್ಯವರ್ತಿಯಾಗಿದೆ. ಲಿಟಿಗೇಷನ್ಸ್ ದೃಷ್ಟಿಯಿಂದಲೂ ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಲಿಟಿಗೇಷನ್ಸ್ ಇವೆ. ಇಲ್ಲಿಯ ಜನರಿಗೆ ಈ ಎಲ್ಲಾ ದೃಷ್ಟಿಗಳಿಂದಲೂ ನ್ಯಾಯವನ್ನು ದೊರಕಿಸಿಕೊಡಬೇಕಾದರೆ, ಬೆಳಗಾಂ ಬಹಳ ಯೋಗ್ಯವಾದ ಸ್ಥಳ. ಹುಬ್ಬಳ್ಳಿ ದೊಡ್ಡ ನಗರ ಎನ್ನುವುದು ಎಂದು ಹೇಳುವುದನ್ನು ಬಿಟ್ಟರೆ, ಬೇರೆ ಯಾವ ದೃಷ್ಟಿಯಿಂದಲೂ ಬೆಳಗಾಂಗೆ ಇದು ಸಮನಾಗುವುದಿಲ್ಲ. ಎಲ್ಲಾ ಕಾಲೇಜುಗಳು ಅಲ್ಲಿವೆ, ಆದ್ದರಿಂದಲೇ ಇದೇ ಸೂಕ್ತವಾದಂಥ ಸ್ಥಳ, ಇಲ್ಲಿಗೇ ಹೈಕೋರ್ಟ್ ಬೆಂಚನ್ನು ಕೊಡಬೇಕು ಎಂದು ನಾನು ಸರ್ಕಾರಕ್ಕೆ ನಮ್ರತೆಯಿಂದ ಸೂಚನೆ ಮಾಡುತ್ತೇನೆ. ಮತ್ತು ಆರ್ಥಿಕ ಮಂತ್ರಿಗಳು ಮಂಡಿಸಿದ ಮುಂಗಡಪತ್ರ ಬಹಳ ಯೋಗ್ಯ ರೀತಿಯಿಂದ ಜನರ ಆರ್ಥಿಕ ಮಟ್ಟವನ್ನು ಹೆಚ್ಚಿಸಲಿಕ್ಕೆ ಸಹಾಯವಾಗುತ್ತದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

೩–೩೦ ಪಿ.ಎಂ.

† ಶ್ರೀಮತಿ ಅನಸೂಯಾ ಜಿ. ಶರ್ಮಾ (ಅಂಕೋಲ).—ಮಾನ್ಯ ಸಭಾಧ್ಯಕ್ಷಿಣಿಯವರೇ ನಮ್ಮ ಮುಂದಿರತಕ್ಕಂಥ ಬಡ್ಜೆಟ್ ಎಸ್ಟಿಮೆಂಟನ್ನು ಸ್ಥೂಲವಾಗಿ ನೋಡಿದರೆ, ಇದರಲ್ಲಿ ಪ್ಲಾನ್‌ಗೆ ಖರ್ಚಾಗುತ್ತಿರುವುದಕ್ಕಿಂತ ನಾನ್-ಪ್ಲಾನ್‌ಗೆ ಹೆಚ್ಚು ಖರ್ಚಾಗುತ್ತಿರುವುದು ನಮಗೆ ಕಂಡು ಬರುತ್ತದೆ. ನಮ್ಮ ಮಾನ್ಯ ಮಂತ್ರಿಗಳು ಇದಕ್ಕೆ ಕೆಲವೊಂದು ಉದಾಹರಣೆಗಳನ್ನು ಕೊಟ್ಟರು. ಮಳೆ ಬರಲಿಲ್ಲ, ಬರಗಾಲ ಬಂತು, ಅದಕ್ಕಾಗಿ ಹೆಚ್ಚು ಖರ್ಚಾಯಿತೆಂದು ಅವರು ಹೇಳಿದರೂ ಕೂಡ ಅದು ಪ್ರಪೋರ್ಷನೇಟ್ ಇಲ್ಲ. ಇದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ನಾನ್–ಪ್ಲಾನ್‌ಗೆ ೧೯೭೬–೭೭ರಲ್ಲಿ ೧೫೩ ಕೋಟಿ ರೂಪಾಯಿಗಳು ಖರ್ಚಾಗಿದ್ದರೆ, ೧೯೭೭–೭೮ರಲ್ಲಿ ೧೬೩ ಕೋಟಿ ರೂಪಾಯಿ ಖರ್ಚಾಗಿದೆ. ೧೯೭೮–೭೯ರಲ್ಲಿ ೧೭೪ ಕೋಟಿ ಖರ್ಚಾಗಿರುವುದು ಕಾಣುತ್ತಿದೆ. ಇಂತಹ ಎಷ್ಟೋ ಉದಾಹರಣೆಗಳನ್ನು ಬೇಕಾದರೆ ಕೊಡಬಹುದು. ಕೌನ್ಸಿಲ್ ಆಫ್ ಮಿನಿಸ್ಟರ್ಸ್ ಹೆಡ್ಸ್‌ನಲ್ಲಿ ೧೯೭೬–೭೭ರಲ್ಲಿ ೩೭.೯೨ ಲಕ್ಷ ರೂಪಾಯಿ ಖರ್ಚಾಗಿದ್ದರೆ ೧೯೭೭–೭೮ರಲ್ಲಿ ೪೫ ಲಕ್ಷ ರೂಪಾಯಿ ಖರ್ಚಾಗಿದೆ. ಅದರಂತೆ ಸಪ್ಲಿಮೆಂಟರಿಯಲ್ಲಿ ೧೯೭೭–೭೮ರಲ್ಲಿ ೪೫.೪೭ ಲಕ್ಷ ರೂಪಾಯಿ ಖರ್ಚಾಗಿದೆ. ೧೯೭೮–೭೯ರಲ್ಲಿ ಈಗಾಗಲೇ ೪೭ ಲಕ್ಷ ರೂಪಾಯಿ ಖರ್ಚಾ

ಗಿದೆ. ಸಪ್ಲಿಮೆಂಟರಿಯಲ್ಲಿ ಎಷ್ಟು ಖರ್ಚು ಬರುತ್ತದೋ ಗೊತ್ತಿಲ್ಲ. ಕಾದು ನೋಡಬೇಕಾಗಿದೆ. ಬರಗಾಲಕ್ಕಾಗಿ ೧೯೭೬–೭೭ರಲ್ಲಿ ೨೦ ಲಕ್ಷ ರೂಪಾಯಿ ಖರ್ಚಾಗಿದ್ದರೆ, ೧೯೭೭–೭೮ರಲ್ಲಿ ೧೦ ಲಕ್ಷ ರೂಪಾಯಿ ಖರ್ಚಾಗಿದೆ. ಹೀಗೆ ವರ್ಷಕ್ಕಿಂತ ವರ್ಷ ನಾನ್–ಪ್ಲಾನ್‌ನಲ್ಲಿ ಹೆಚ್ಚು ಖರ್ಚಾಗುತ್ತಿರುವುದನ್ನು ನಾವು ನೋಡಬಹುದಾಗಿದೆ. ಒಂದು ಪ್ರಪೋರ್ಷನೇಟ್ ಆಗಿ ಯಾವುದಾದರು ಒಂದು ಕಾರಣದಿಂದ ಖರ್ಚಾದರೆ, ಅದು ಇಷ್ಟೊಂದು ಪ್ರಮಾಣದಲ್ಲಿ ಹೆಚ್ಚಾಗುವುದಿಲ್ಲ. ಆದರೆ ಈಗ ನಾನ್–ಪ್ಲಾನ್ ಬಾಬಿನಲ್ಲಿ ಸಿಕ್ಕಾಪಟ್ಟೆ ಖರ್ಚಾಗುತ್ತಿರುವುದನ್ನು ನಾವು ನೋಡಬಹುದಾಗಿದೆ.

ಶ್ರೀ ಎಸ್.ಎಂ. ಯಾಹ್ಯಾ.—ಪ್ಲಾನ್ ಮತ್ತು ನಾನ್–ಪ್ಲಾನ್ ಎಂದರೆ, ಹೊಸದಾಗಿ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳುತ್ತೇವೆ. ಆದಕ್ಕೆ ಖರ್ಚು ಮಾಡುವುದಿರುತ್ತದೆ. ನಾನ್–ಪ್ಲಾನ್‌ನಲ್ಲಿ ಸ್ಯಾಲರೀ ಖರ್ಚು ಒಂದೇ ಬರುವುದಿಲ್ಲ, ಕಳೆದವರ್ಷ ತೆಗೆದುಕೊಂಡ ಡೆವಲಪ್‌ಮೆಂಟ್ ಆಕ್ಟಿವಿಟೀಸ್ ಖರ್ಚು ಸಹ ಇದರಲ್ಲಿಯೇ ಬರುತ್ತದೆ. ಆದಕಾರಣ ನಾನ್–ಪ್ಲಾನ್ ಅಲೋಕೇಷನ್ ಯಾವಾಗಲೂ ಹೆಚ್ಚಾಗಿಯೇ ಇರುತ್ತದೆ. ಈ ಸಲ ಅದು ೩೩೨ ಕೋಟಿ ರೂಪಾಯಿಗಳಾಗಿವೆ. ಅಂದರೆ ಬೇರೆ ವರ್ಷಗಳಿಗಿಂತ ಇದು ಹೆಚ್ಚಾಗಿದೆ.

ಶ್ರೀಮತಿ ಅನಸೂಯಾ ಜಿ. ಶರ್ಮಾ.—ಅದನ್ನು ನಾನು ಪೂರ್ಣವಾಗಿ ತಪ್ಪು ಎಂದು ಹೇಳುವುದಿಲ್ಲ.

ಶ್ರೀ ಎಸ್.ಎಂ. ಯಾಹ್ಯಾ.—ತಾವು ಹೇಳಿದ್ದು ತಪ್ಪು ಎಂದು ನಾನು ಹೇಳುವುದಿಲ್ಲ, ಪ್ಲಾನ್ ಮತ್ತು ನಾನ್–ಪ್ಲಾನ್ ಅಂದರೆ ಏನು ಎಂಬುದನ್ನು ನಾನು ಹೇಳಿದೆ.

ಶ್ರೀ ಜೆ. ಎಚ್. ಪಟೇಲ್.–ಟೆಕ್ನಿಕಲ್ ಆಗಿ ಅವರು ಏನೂ ಹೇಳುತ್ತಿಲ್ಲ, ಆದರೆ ನಿಮಗೆ ಸರಿಯಾದ ಪ್ಲಾನ್ ಇಲ್ಲ ಎಂದು ಅವರು ಹೇಳಿದ್ದು.

ಶ್ರೀ ಎಸ್.ಎಂ. ಯಾಹ್ಯಾ.—ಈ ಮಾತನ್ನು ತಾವು ಅಲ್ಲಿ ಹೇಳಿ. ಅಲ್ಲಿ ರೋಲಿಂಗ್ ಪ್ಲಾನ್ ಇದೆ. ಇಲ್ಲಿ ನಮ್ಮ ಪ್ಲಾನ್ ಚೆನ್ನಾಗಿಯೇ ಇದೆ.

ಶ್ರೀಮತಿ ಅನಸೂಯಾ ಜಿ. ಶರ್ಮಾ.-- ನಾನು ಹೇಳಿದ್ದು, ಬರಗಾಲ ಬಂತು, ಅದಕ್ಕಾಗಿ ಹಣ ಖರ್ಚು ಮಾಡಿದ್ದೇವೆಂದು ತಾವು ಹೇಳುತ್ತೀರಿ. ಆದರೆ ಅದನ್ನು ಸ್ಥೂಲವಾಗಿ ನೋಡಿದಾಗ ನಮ್ಮ ನಜರಿಗೆ ಬರುವುದೇನೆಂದರೆ, ನಾನ್–ಪ್ಲಾನ್‌ನಲ್ಲಿ ಪಗಾರ, ಕಾರುಭತ್ಯ ಮುಂತಾದವುಗಳಿಗೇ ಹೆಚ್ಚು ಖರ್ಚಾಗಿರುವುದು ಕಂಡುಬರುತ್ತದೆ. ಇಂತಹ ಹೆಚ್ಚಿನ ಖರ್ಚನ್ನು ಯಾವ ರೀತಿ ತಡೆಹಿಡಿಯಬಹುದೆಂಬುದನ್ನು ಸರ್ಕಾರದವರು ವಿಚಾರ ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ. ಈ ದೃಷ್ಟಿಯಿಂದ ವಿಚಾರ ಮಾಡಿದರೆ ಎರಡು ತುದಿಗಳನ್ನು ಒಂದೇ ಕಡೆ ಕೂರಿಸುವುದು ಒಳ್ಳೆಯದೆಂದು ಹೇಳುತ್ತೇನೆ. ಆಗ ಅರ್ಥ ಮಂತ್ರಿಗಳಿಗೆ ಹೆಚ್ಚು ತೊಂದರೆಯಾಗುವುದಿಲ್ಲ. ಮತ್ತು ಹೆಚ್ಚು ಹೆಚ್ಚು ಕರಭಾರವನ್ನು ಜನತೆಯ ಮೇಲೆ ಹಾಕುವುದೂ ಸಹ ತಪ್ಪುತ್ತದೆಯಲ್ಲದೆ, ಮಾನ್ಯ ಅರ್ಥ ಮಂತ್ರಿಗಳಿಗೆ ಕೆಲಸವೂ ಹಗುರವಾಗುತ್ತದೆಂದು ಹೇಳುತ್ತೇನೆ. ಒಂದು ಕಡೆ ಈ ಸರ್ಕಾರದವರು ನಾವು ಬಡಜನರಿಗಾಗಿ ದುಡಿಯುತ್ತೇವೆ, ನಮ್ಮನ್ನು ಬಿಟ್ಟರೆ ಬೇರೆ ಯಾರೂ ಇಲ್ಲವೆಂದು ಹೇಳುತ್ತಿರುವಾಗ, ಈ ಅಂಶವನ್ನು ಸಹ ಗಮನದಲ್ಲಿಟ್ಟುಕೊಂಡು ಮುಂದಡಿಯಿಡುವುದು ಒಳ್ಳೆಯದೆಂದು ನನಗನ್ನಿಸುತ್ತದೆ

ಇನ್ನು ಭೂಸುಧಾರಣೆ ಕಾಯಿದೆ ಬಗ್ಗೆ ಹೇಳಬೇಕೆಂದರೆ, ಇದು ಒಂದು ಒಳ್ಳೆಯ ಸುಧಾರಣೆಯಾಗಿದೆ ಇದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಇದು ಒಂದು ಕ್ರಾಂತಿಯ ಹೆಜ್ಜೆ. ಇದನ್ನು ಲಕ್ಷ್ಯದಲ್ಲಿಟ್ಟುಕೊಂಡು ಭೂಮಿಯನ್ನೇ ಅವಲಂಬಿಸಿ ಕೂತ ಎಷ್ಟೋ ಕುಟುಂಬಗಳಿವೆ. ಈ ಕುಟುಂಬಗಳಿಗೆ ಸರ್ಕಾರ ಯಾವ ಪ್ರಮಾಣದಲ್ಲಿ ಪರಿಹಾರದ ಹಣ ಕೊಡುತ್ತದೆ,ಎಷ್ಟು ಕುಟುಂಬಗಳಿಗೆ ಕೊಟ್ಟಿದೆ, ಈ ಎಲ್ಲ ವಿವರಗಳನ್ನು ಈಗ ಹೇಳುವ ಅಗತ್ಯವಿಲ್ಲ. ಈ ಒಂದು ಕಾಯಿದೆ ಬಂದಮೇಲೆ ಎಷ್ಟೋ ಕುಟುಂಬದವರು ಇಂದು ನಿರ್ಗತಿಕರಾಗಿದ್ದಾರೆ. ಕಣ್ಣೀರಿನಲ್ಲಿ ಕೈತೊಳೆದು ಉಪವಾಸ ಮಾಡುತ್ತಿದ್ದಾರೆ. ಜನವರಿ ೨೬, ಆಗಸ್ಟ್ ೧೫ ಇಂತಹ ಹಬ್ಬದ ದಿವಸಗಳಲ್ಲಿ ದೇವಾಸ್ಥಾನಗಳು, ಮಸೀದಿಗಳು, ಚರ್ಚ್‌ಗಳು, ಈದ್ಗಾ ಇಲ್ಲೆಲ್ಲಾ ವಿಶೇಷ ಪೂಜೆಗಳನ್ನು ಮಾಡಬೇಕೆಂದು ನಮ್ಮ ಸರ್ಕಾರ ಹುಕುಂ ಮಾಡಿದೆ. ಆದರೆ ಇಂದು ಅನೇಕ ಗುಡಿಗಳಲ್ಲಿ ನಂದಾದೀಪವೇ ಇಲ್ಲ. ಇಂತಹ ಒಂದು ಪರಿಸ್ಥಿತಿ ಈ ಭೂ ಸುಧಾರಣೆಯಿಂದ ಬಂದಿದೆ. ಇದು ಸರ್ಕಾರದ ಲಕ್ಷ್ಯಕ್ಕೆ ಬಂದಿದೆಯೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಇಂಥ ಒಂದು ಪರಿಸ್ಥಿತಿ ಯಾವುದೇ ಒಂದು ಸರ್ಕಾರಕ್ಕೆ ಭೂಷಣ ತರುವುದಿಲ್ಲ. ಈ ಭೂಸಂಧಾರಣಾ ಕಾಯಿದೆ ಪ್ರಕಾರ ಉಳುವವನಿಗೇ ಹೊಲ ಕೊಡುವುದು ನ್ಯಾಯ. ಬಡಜನರ ಹಾಗೂ ದೀನದಲಿತರ ಉದ್ಧಾರ

needed brainpower. Second, the thrust of much of our education continues to be the training of a large number of bureaucrats. A redirection of educationwith orientation towards the farms and the trades is essential. In this connection one noteswith gratitude the the introduction of terminal courses in the trades in the last year of high school. I would also hope that at the elementary level our curricula would include more play and less role, a greater use of visual aids such as the slides and the movies. I would also hope that we will accept a definition of education as an ongoing process and introduce retraining programmes are a part of the process of education used in the more economically advanced countries and this accouuts in part the high degree of productivity that they enjoy.

Coming to health I do hope that this 25 paise surcharge that we have put on patients should go in our hospitals. I believe it is not a great source of income because about only Rs. 1½ crores are derived from this sourse. I am sure that we can find an alternative source of revenue for this item.

Secondly I suggest that we have to set up health needs of Beedi workers and this has to be looked into with some seriousness. The health needs of special sectors of our population, working people are looked after. But the kind of environment in which these Beedi workers live and the longevity of these people in relation to the general population, the diseases from which they suffer, all point out to the need for establishment of special hospjtals for these Beedi workers.

One notes that the budget operates under a newly defined concept of a rolling plan. Although this concept is still the subject of debate, one must observe that in its limit, a rolling plan is no plan at all. In a country such as ours where savings are marginal and where they often accrue through direct or indirect taxation, the only source for large capital outlays is the state treasury. Such capital outlays are stretched over a period of years both as a matter of convenience for finance and as a necessaiey to procure plant and equipment. As such capital outlays are bound to occupy a major portion of any plan outlay. Fluctuations are possible only in the outlays for social and welfare schemes and such other items whose nature is more that of an expense than an expenditure. One may therefore suggest that in our dialogue with the Pla ning Commission we suggest a mixinvolving long term commitments for capital outlays and short term adjustments on the services.

In short Madam Speaker, the budget represents a vision of this Government for the upliftment of the poor and the betterment of all the citizens and commends our srrong support.

Thank you very much.

೫-೦೦ ಪಿ. ಎಂ.

†ಶ್ರೀ ಕೆ. ರಾಮಭಟ್ (ಪುತ್ತೂರು),—ಮಾನ್ಯ ಸಭಾಧ್ಯಕ್ಷರೇ, ಈ ವಿಧಾನ ಸಭೆಯ ಪ್ರಥಮ ಸಭೆಯಲ್ಲಿ ರಾಜ್ಯಪಾಲರು ಭಾಷಣ ಮಾಡುತ್ತಾ ಈ ಸರ್ಕಾರದ ಒಂದು ನೀತಿಯನ್ನು ಹೇಳಿದ್ದಾರೆ. ಅದೇನೆಂದರೆ, ನಮ್ಮ ಎಲ್ಲ ಮುನಿಸಿಪಾಲಿಟಿಗಳಿಗೂ, ನಗರಸಭೆಗಳಿಗೂ ೩ ವರ್ಷದೊಳಗೆ ನಲ್ಲಿ ನೀರಿನ ಯೋಜನೆಯನ್ನು ಮಾಡಿಕೊಡುತ್ತೇವೆಂದು; ಅದರಂತೆ ನಮ್ಮ ಪುತ್ತೂರು ನಗರಸಭೆಗೆ ಸೇರಿದಂತೆ ೫೬ ಲಕ್ಷ ರೂ.ಗಳ ಒಂದು ನಲ್ಲಿ ನೀರಿನ ಯೋಜನೆಯನ್ನು ಮಾಡಬೇಕಾಗಿತ್ತು. ಇದಕ್ಕಾಗಿ ಆಗಿನ ಮಂತ್ರಿಗಳಾಗಿದ್ದ ಶ್ರೀ ವೀರಪ್ಪಮೊಯ್ಲಿ ಅವರ ದಿವ್ಯಹಸ್ತದಿಂದ ಶಿಲಾನ್ಯಾಸ ನಡೆದಿತ್ತು. ಆದ ಕಾರಣ ಈ ಯೋಜನೆಗೆ ಹಣವನ್ನು ಈ ಸಲದ ಬಡ್ಜೆಟ್‌ನಲ್ಲಿ ಒದಗಿಸಿದ್ದಾರೆಯೋ ಏನೋ ಎಂದು ನೋಡಲು ಪ್ರಯತ್ನ ಮಾಡಿದೆ. ಆದರೆ ದುರ್ದೈವದಿಂದ ಒಂದು ಪೈಸೆಯನ್ನು ಸಹ ಇದಕ್ಕಾಗಿ ಇಟ್ಟಿಲ್ಲ. ಇದಕ್ಕಾಗಿ ಪುತ್ತೂರು ನಗರಸಭೆಯವರು ತಮ್ಮ ಪಾಲಿನ ಶೇಕಡಾ ಹತ್ತರಷ್ಟು ಹಣವನ್ನು ಅಂದರೆ ೫ ಲಕ್ಷ ೬೦ ಸಾವಿರ ರೂ.ಗಳನ್ನು ಡೆಪಾಜಿಟ್ ಮಾಡಿದ್ದಾರೆ. ಸರ್ಕಾರದಿಂದ ಸಾಲವಾಗಿ ಪಡೆದ ಎರಡು ಲಕ್ಷ ಎರಡು ಸಾವಿರ ಮತ್ತು ಸಿಂಡಿಕೇಟ್ ಬ್ಯಾಂಕ್‌ನಿಂದ ಸಾಲವಾಗಿ ಪಡೆದ ಎರಡು ಲಕ್ಷ ಎರಡು ಸಾವಿರ ರೂಪಾಯಿಗಳನ್ನು ಇದಕ್ಕಾಗಿ ಡಿಪಾಜಿಟ್ ಮಾಡಿದ್ದೇವೆ. ಬ್ಯಾಂಕ್‌ನಿಂದ ಪಡೆದ ಹಣಕ್ಕೆ ಬಡ್ಡಿ ಕೊಡುತ್ತಿದ್ದೇವೆ. ಈ ಯೋಜನೆಯ ಶಿಲಾನ್ಯಾಸ ನಡೆದದ್ದು ತಾ॥ ೭-೧೦-೧೯೭೭ರಂದು. ಆದಕಾರಣ ಈ ಸಲದ ಬಡ್ಜೆಟಿನಲ್ಲಿ ಇದನ್ನು ಸೇರಿಸುತ್ತಾರೆಂದು ಮತ್ತು ಇದರ ಕಾರ್ಯವನ್ನು ಆರಂಭ ಮಾಡುತ್ತಾರೆಂದು ನಾವು ತಿಳಿದಿದ್ದೆವು. ಆದರೆ ದುರ್ದೈವದಿಂದ ಸರ್ಕಾರ ಇಷ್ಟರವರೆಗೆ ಇದನ್ನು ಕಾರ್ಯಗತ ಮಾಡಿದಂತೆ ಕಾಣಲಿಲ್ಲ. ಇದನ್ನು ಮಾನ್ಯ ಮಂತ್ರಿಗಳ ಹತ್ತಿರವೂ ಪ್ರಸ್ತಾಪ ಮಾಡಿದೆ. ಇದರಿಂದ ಏನಾಗುತ್ತದೆಂದರೆ, ಬಡ್ಡಿಯನ್ನು ದಂಡವಾಗಿ ಕೊಡಬೇಕಾಗುತ್ತದೆ ಮತ್ತು ಯೋಜನೆಯ ಕೆಲಸ ಮುಂದೆ ಹೋದಂತೆ ಅದರ ಖರ್ಚು ಸಹ ಜಾಸ್ತಿಯಾಗುತ್ತದೆ. ಈ ಮೊದಲು ೨೩ ಲಕ್ಷ ರೂಪಾಯಿಗಳ ಯೋಜನೆಯನ್ನು ತಯಾರು ಮಾಡಲಾಗಿತ್ತು. ಈಗ ಅದು ೫೬ ಲಕ್ಷಕ್ಕೆ ಬಂದಿದೆ. ಜಾಗ್ರತೆ ಇದನ್ನು ಮುಗಿಸದಿದ್ದರೆ ಇದರ ವೆಚ್ಚ ಮುಂದೆ ೬೫ ರಿಂದ ೭೫ ಲಕ್ಷ ರೂಪಾಯಿಗಳವರೆಗೂ ಹೋಗಬಹುದೆಂದು ಕಾಣುತ್ತದೆ. ಆದಕಾರಣ ಆದಷ್ಟು ಶೀಘ್ರವಾಗಿ ಇದರ ಕಾರ್ಯವನ್ನು ಆರಂಭ ಮಾಡಬೇಕೆಂದು ಮತ್ತು ಬಡ್ಜೆಟಿನಲ್ಲಿ ಇದಕ್ಕೆ ಬೇರೆ ಯಾವುದಾದರೂ ಒಂದು ಬಾಬಿನಿಂದ ಹಣವನ್ನು ಡೈವರ್ಟ್ ಮಾಡಿ ಕೆಲಸ ಪ್ರಾರಂಭ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

ಇನ್ನು ಸರ್ಕಾರದವರು ಸಾರ್ವಜನಿಕರ ಹಿತದೃಷ್ಟಿಯಿಂದ ಬಸ್‌ಗಳನ್ನು ರಾಷ್ಟ್ರೀಕರಣ ಮಾಡಿದ್ದಾರೆ. ಪುತ್ತೂರು ಮತ್ತು ಮಂಗಳೂರು ನಡುವೆ ಸರ್ಕಾರದ ಬಸ್‌ಗಳು ಓಡಾಡುತ್ತವೆ. ಇದರ ನಡುವಿನ ಅಂತರ ೩೧ ಮೈಲಿಗಳು. ೨ ರೂಪಾಯಿ ೮೦ ಪೈಸೆ ಚಾರ್ಜ್ ಮಾಡುತ್ತಾರೆ. ಅದೇ ಮಂಗಳೂರು ಮತ್ತು ಉಡುಪಿಯ ನಡುವೆ ಖಾಸಗೀ ಬಸ್‌ಗಳು ಸಂಚಾರ ಮಾಡುತ್ತವೆ. ಇದರ ನಡುವಿನ ಅಂತರ ೩೮ ಮೈಲಿಗಳು. ಆದರೆ ಖಾಸಗಿಯವರು ೨ ರೂಪಾಯಿ ೪೦ ಪೈಸೆ ಚಾರ್ಜ್ ಮಾಡುತ್ತಾರೆ. ಅವರ ಬಸ್‌ಗಳು ಸಹ ಥಳಥಳಿಸುತ್ತವೆ. ಆದರೆ ಸರ್ಕಾರದವರು ಓಡಿಸುವ ಬಸ್‌ಗಳು ಕಂಡೆಮ್ ಆಗಿವೆ. ಆದರೂ ೨ ರೂಪಾಯಿ ೮೦ ಪೈಸೆ ವಸೂಲಿ ಮಾಡುತ್ತಾರೆ. ಬಡವರಿಗೆ ಅನುಕೂಲ ಮಾಡುವುದು ಸರ್ಕಾರದ ಗುರಿಯಾಗಿದ್ದರೆ ಖಾಸಗೀಯವರಿಗಿಂತ ಹೆಚ್ಚಿನ ದರವನ್ನು ವಸೂಲು ಮಾಡಲು ಕಾರಣವೇನು? ಈಗ ಮಾನ್ಯ ಸಾರಿಗೆ ಮಂತ್ರಿಗಳು ಇಲ್ಲಿ ಇಲ್ಲ. ಆದರೂ ಅವರ ಗಮನಕ್ಕೆ ತರುವುದೇನೆಂದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ಕಾರದ ಬಸ್‌ಗಳಲ್ಲಿ ಪ್ರಯಾಣ ಮಾಡುವವರ ಸಂಖ್ಯೆ ದಿನೇ ದಿನೇ ಜಾಸ್ತಿಯಾಗುತ್ತಿದೆ. ಇದರಿಂದ ಓವರ್‌ಲೋಡ್ ಮಾಡುತ್ತಾರೆ ೫೦ ಜನರು ಕೂರುವ ಬಸ್‌ಗಳಲ್ಲಿ ೧೦೦ ಇಲ್ಲವೇ ೧೫೦ ಜನರನ್ನು ಕೂರಿಸುತ್ತಾರೆ. ಎಲ್ಲರಿಗೂ ಟಿಕೇಟ್ ಕೊಡುತ್ತಾರೆ. ಸರ್ಕಾರಕ್ಕೆ ವಂಚನೆ ಮಾಡದೆ ಎಲ್ಲರಿಗೂ ಟಿಕೇಟ್ ಕೊಡುತ್ತಾರೆ. ಆ ಹಣ ಸರ್ಕಾರಕ್ಕೆ ಬರುತ್ತದೆ. ಆದರೆ ಅಲ್ಲಿ ಬಸ್‌ಗಳ ಅಭಾವ ಎಷ್ಟು ತೀವ್ರವಾಗಿದೆ ಎಂಬುದು ಅಲ್ಲಿಗೆ ಬಂದು ನೋಡಿದರೆ

ಗೊತ್ತಾಗುತ್ತದೆ. ಇದು ಒಳ್ಳೆಯದಲ್ಲ. ಸಾಕಷ್ಟು ಬಸ್‌ಗಳನ್ನು ಓಡಿಸಬೇಕೆಂದು ಮುನಿಸಿಪಾಲಿಟಿಯವರು ಕೇಳಿದ್ದಾರೆ, ಸಾರ್ವಜನಿಕರು ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿದ್ದಾರೆ. ಆದಕಾರಣ ಸಾರ್ವಜನಿಕರ ಹಿತದೃಷ್ಟಿಯಿಂದ ಅಲ್ಲಿ ಹೆಚ್ಚಿನ ಬಸ್‌ಗಳನ್ನು ಓಡಿಸುವುದರ ಮೂಲಕ ಈಗಿರುವ ಅನಾನುಕೂಲತೆಯನ್ನು ಪರಿಹಾರ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಜನತಾ ಗೃಹಗಳ ಬಗ್ಗೆ ಈಗಾಗಲೇ ಎಚ್. ಟಿ. ಹೆಗ್ಡೆಯವರು ಉಲ್ಲೇಖ ಮಾಡಿದ್ದಾರೆ. ೧೫೦–೧೬೦ ಇಂಚು ಮಳೆ ಬೀಳುವ ಪ್ರದೇಶಗಳಲ್ಲಿ ಮಳೆಯನ್ನು ತಡೆದುಕೊಳ್ಳುವಂಥ ಮನೆಗಳನ್ನು ಕಟ್ಟಿಸಬೇಕು. ೨ ಸಾವಿರ ಮನೆಗಳ ಪೈಕಿ ಈಗಾಗಲೇ ೨೫೦ ಮನೆಗಳಿಗೆ ಹಾನಿಯಾಗಿದೆ. ಈ ಬಗ್ಗೆ ಮಾನ್ಯ ಕಕ್ಕಿಲ್ಲಾಯ ಅವರು ಕಾಲಿಂಗ್ ಅಟೆಂಷನ್ ನೋಟೀಸ್ ಸಹ ಕೊಟ್ಟಿದ್ದರು. ಹೆಚು ಹೆಚು ಮಳೆ ಬೀಳುವ ಕಡೆಗಳಲ್ಲಿ ಮನೆಗಳನ್ನು ಯಾವ ರೀತಿ ಕಟ್ಟಿಸಬೇಕು ಎಂಬ ಬಗ್ಗೆ ಮತ್ತು ಅದರ ಉಪಯುಕ್ತತೆಯ ಬಗ್ಗೆ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ಮಾಡಿ ಅದರ ವರದಿಯನ್ನು ಪಡೆದುಕೊಳ್ಳುವುದು ಒಳ್ಳೆಯದೆಂದು ನಾನು ಸಲಹೆ ಮಾಡುತ್ತೇನೆ. ಈ ರೀತಿ ಮಾಡದಿದ್ದರೆ ಸರ್ಕಾರ ಇದಕ್ಕೆ ಹಾಕಿದ ಹಣವೆಲ್ಲಾ ನೀರು ಪಾಲಾಗುತ್ತದೆ. ಈ ರೀತಿ ಆಗುವುದು ಬೇಡ. ಮಳೆ ಜಾಸ್ತಿ ಬರುವ ಕಡೆ ಶಾಶ್ವತವಾಗಿ ಉಳಿಯುವಂತಹ ಮನೆಗಳನ್ನು ಕಟ್ಟಿಸುವ ಬಗ್ಗೆ ಎಕ್ಸ್‌ಪರ್ಟ್ ಕಮಿಟಿಯ ಸಲಹೆ ಪಡೆದು, ಆ ಒಂದು ಸಲಹೆಯ ಪ್ರಕಾರ ಸರ್ಕಾರ ವರ್ತನೆ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

ಇನ್ನು ಶಾಲೆಗಳ ವಿಚಾರವನ್ನು ಎಲ್ಲರೂ ಹೇಳಿದ್ದಾರೆ. ನಮ್ಮ ಪುತ್ತೂರು ಶಾಲೆಗಳಲ್ಲಿ ಉಪಾಧ್ಯಾಯರೇ ಇಲ್ಲ. ಆಸ್ಪತ್ರೆಗಳಲ್ಲಿ ಡಾಕ್ಟರ್ಸ್ ಇಲ್ಲ. ಈ ರೀತಿಯೆಲ್ಲಾ ಉಳಿತಾಯ ಮಾಡಿದರೆ ಅದು ಉಳಿತಾಯವಾಗುವುದಿಲ್ಲ. ಒಂದು ಕಡೆ ಮಾನ್ಯ ಮಂತ್ರಿಗಳು ಡಿಫಿಸಿಟ್ ಕಡಿಮೆ ಮಾಡಿದ್ದೇವೆಂದು ಹೇಳಿದರು. ಸರ್ಕಾರ ತನ್ನ ಕರ್ತವ್ಯವನ್ನು ಸರಿಯಾಗಿ ಮಾಡದೆ ಹಣ ಉಳಿಸಿದರೆ ಅದು ಉಳಿತಾಯ ಎಂದು ಹೇಳುವುದಕ್ಕಾಗುವುದಿಲ್ಲ. ಬೆಟರ್‌ಮೆಂಟ್ ಕಮಿಟಿಯವರು ಡೊನೇಷನ್ ಸಂಗ್ರಹ ಮಾಡಿ ಒಂದೊಂದು ಶಾಲೆಯಲ್ಲಿ ೨–೩ ಉಪಾಧ್ಯಾಯರನ್ನು ಸಾಕುತ್ತಿದ್ದಾರೆ. ನೂರರಿಂದ ನೂರೈವತ್ತರವರೆಗೆ ಸಂಬಳ ಕೊಡುತ್ತಿದ್ದಾರೆ. ಇಂತಹ ಒಂದು ಪರಿಸ್ಥಿತಿ ಬಂದರೆ ನಮ್ಮ ಮಕ್ಕಳ ವಿದ್ಯಾಭ್ಯಾಸದ ಗತಿ ಏನಾಗಬೇಕು ? ಉಪಾಧ್ಯಾಯರನ್ನು ಸಾಕಷ್ಟು ಸಂಖ್ಯೆಯಲ್ಲಿ ನೇಮಕ ಮಾಡದಿರುವುದರಿಂದ ಎಷ್ಟೊಂದು ರೀತಿಯಿಂದ ಅನಾನುಕೂಲವಾಗಿದೆ ಎಂಬುದನ್ನು ವರ್ಣನೆ ಮಾಡಲು ನನಗೆ ಶಬ್ದಗಳೇ ಸಿಗುವುದಿಲ್ಲ. ಮಾನ್ಯ ವಿದ್ಯಾಮಂತ್ರಿಗಳ ಗಮನವನ್ನು ಈ ಸಮಸ್ಯೆಯ ಕಡೆಗೆ ಎಳೆಯುತ್ತಿದ್ದೇನೆ.

ಇನ್ನು ವೃದ್ಧಾಪ್ಯ ವೇತನ ಕೊಡಬೇಕೆಂದು ನಾವೂ ಸಹ ಹೇಳುತ್ತೇವೆ, ಆದರೆ ಈ ವೇತನ ಸರ್ಕಾರದಿಂದ ಸಿಗುತ್ತದೆ ಎಂಬುದು ಎಷ್ಟೋ ಜನರಿಗೆ ಗೊತ್ತಿಲ್ಲ. ಆದಕಾರಣ ಸರ್ಕಾರದ ಕಡೆಯಿಂದಲೇ ಈ ವೇತನವನ್ನು ಹೊಂದಲು ಯಾರು ಯಾರು ಅರ್ಹರಿದ್ದಾರೆಂಬುದನ್ನು ಗುರುತಿಸಿ, ಅವರಿಗೆಲ್ಲಾ ಈ ವೇತವನ್ನು ಅವರವರ ಮನೆಗಳಿಗೇ ತಲುಪಿಸುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕು.

ಇನ್ನು ಅಂಗವಿಕಲರಿಗೂ ಆರ್ಥಿಕ ಸಹಾಯ ಮಾಡುವ ವ್ಯವಸ್ಥೆ ಇದೆ. ಆದರೆ ದುರ್ದೈವದ ಪ್ರಸಂಗವೆಂದರೆ, ಒಬ್ಬರಿಗೆ ಒಂದು ಕೈ ಮತ್ತು ಒಂದು ಕಾಲು ಇರಲಿಲ್ಲ; ಅವರು ಈ ಒಂದು ಸಹಾಯವನ್ನು ಪಡೆದುಕೊಳ್ಳಲು ಹೋದಾಗ, ಸಂಬಂಧಪಟ್ಟವರು ಏನು ಹೇಳಿದ್ದಾರೆಂದರೆ, ಕೈಕಾಲು ಇಲ್ಲದವರಿಗೆ ಅಂದರೆ ಅಂಗವಿಕಲ್ಪರಾದವರಿಗೆ ಈ ಸಹಾಯ ಸಿಗುವುದಿಲ್ಲ, ಕೈತಿರುವಿರಬೇಕು, ಅಂತಹವರಿಗೆ ಸಿಗುತ್ತದೆಂದು ಹೇಳಿದ್ದಾರೆ. ಅಧಿಕಾರಿಗಳಿಗೆ ಇಂತಹ ಸಂದೇಹ ಏನಾದರು ಇದ್ದರೆ, ಸರ್ಕಾರದವರು ಅದನ್ನು ತಕ್ಷಣ ನಿವಾರಣೆ ಮಾಡಿ ಎಲ್ಲರಿಗೂ ಸಿಗುವಂತಹ ವ್ಯವಸ್ಥೆ ಮಾಡಬೇಕು.

ಇನ್ನು ಪೋಲೀಸ್ ಡಿಪಾರ್ಟ್‌ಮೆಂಟ್ ಬಗ್ಗೆ ನಾನು ಒಂದು ಸಲಹೆ ಕೊಡುತ್ತೇನೆ. ಇವೊತ್ತು ಜನಗಳೂ ಕೂಡ ಬಹಳ ವೇಗವಾಗಿ ಕ್ರೈಮ್ ನಡೆಸುತ್ತಿದ್ದಾರೆ. ಹೆಚ್ಚು ಹೆಚ್ಚು ವಿದ್ಯಾಭ್ಯಾಸ ಮಾಡಿದ್ದರೂ ಕೂಡ ಕ್ರೈಮ್ಸ್ ಮಾಡತಕ್ಕ ನಿದರ್ಶನಗಳು ನಡೆದಿವೆ. ಆದ್ದರಿಂದ ಪ್ರತಿಯೊಂದು ಪೋಲೀಸ್ ಸ್ಟೇಷನ್ನಿನ ಸಬ್-ಇನ್‌ಸ್ಪೆಕ್ಟರಿಗೂ ಕೂಡ ಕಾರಿನ ಮಾಲೀಕರ ಮತ್ತು ಕಾರನ್ನು ಬಾಡಿಗೆಗೆ ಓಡಿಸುವವರ ಕೃಪೆ ಇರಬೇಕಾಗುತ್ತದೆ. ಅವರ ಕೃಪೆಯಲ್ಲಿ ಸಬ್-ಇನ್‌ಸ್ಪೆಕ್ಟರು ಇರಬೇಕಾಗುತ್ತದೆ. ಆದಕಾರಣ ಸಬ್-ಇನ ಸ್ಪೆಕ್ಟರು ಸ್ವತಂತ್ರವಾಗಿ ಇದ್ದುಕೊಂಡು ಯಾರದೇ ಹಂಗಿಗೆ ಒಳಪಡದೆ ಇರುವ ಹಾಗೆ ಅವರಿಗೆ ಅನುಕೂಲವಾಗುವ ಹಾಗೆ ಪ್ರತಿಯೊಂದು ಪೋಲೀಸ್ ಠಾಣೆಗೂ ಪ್ರತಿಯೊಬ್ಬ ಸಬ್-ಇನ್‌ಸ್ಪೆಕ್ಟರಿಗೂ ಒಂದೊಂದು ಜೀಪನ್ನು ಕೊಡುವ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು ಎಂದು ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಷಯವೇನೆಂದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಹಕ್ಕುದಾರಿಕೆ ಕುಮ್ಕಿ ಹಕ್ಕು ಎಂದು ಬ್ರಿಟೀಷ್ ಸರ್ಕಾರ ಇದ್ದಾಗಿನಿಂದಲೂ ನಡೆದುಕೊಂಡು ಬಂದಿದೆ. ಹೆಚ್ಚು ಮಳೆ ಬೀಳುವ ಪ್ರದೇಶದಲ್ಲಿ ಗೊಬ್ಬರ ಹಾಗೂ ಭೂಮಿ ಕೊಚ್ಚಿ ಹೋಗಿ ಅದು ಸಮುದ್ರಕ್ಕೆ ಹೋಗುತ್ತದೆ. ಆದ್ದರಿಂದ ರೈತರಿಗೆ ಸಹಾಯವಾಗಲಿ, ಕೃಷಿಗೆ ಉಪಯುಕ್ತವಾಗಲಿ ಎಂದು ಕುಮ್ಕಿ ಹಕ್ಕನ್ನು ಸರ್ಕಾರದವರು ಹಿಂದಿನಿಂದಲೂ ಇಟ್ಟಿದ್ದರು. ಈ ಕುಮ್ಕಿ ಜಮೀನು ಸರ್ಕಾರದ್ದೇ ಆಗಿದ್ದರೂ ಕೂಡ ಅದರಲ್ಲಿ ರೈತರು ಪ್ರಿವಿಲೇಜ್ ಪಡೆದುಕೊಂಡು ಸೊಪ್ಪು ತೆಗೆದುಕೊಳ್ಳುವಂಥಾದ್ದು ಮನೆಗೆ ಬೇಕಾದ ಕಟ್ಟಿಗೆಯನ್ನು ತೆಗೆದುಕೊಂಡು ಹೋಗುವುದಕ್ಕೆ ಅವಕಾಶ ಇತ್ತು. ಈಗ ಏನಾಗಿದೆ ಎಂದರೆ ಅನೇಕ ಕಡೆಗಳಲ್ಲಿ ರೆವಿನ್ಯೂ ಅಧಿಕಾರಿಗಳು ಹೋಗಿ ಆ ಕುಮ್ಕಿ ಜಮೀನನ್ನು ಸರ್ವೆ ಮಾಡಿ ಬೇರೆಯವರಿಗೆ ಕೊಡುವುದಕ್ಕೆ ಶುರು ಮಾಡಿದ್ದಾರೆ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ತಮ್ಮ ಗಮನ ಹರಿಸಿ ರೈತರಿಗೆ ಇದ್ದಂತಹ ಆ ಕುಮ್ಕಿ ಹಕ್ಕನ್ನು ಊರ್ಜಿತ ಮಾಡಿಕೊಡಬೇಕು. ಸರ್ಕಾರದವರು ದಕ್ಷಿಣ ಕನ್ನಡ ಜಿಲ್ಲೆಯ ಜನಗಳ ಸ್ಥಿತಿಗತಿಗಳನ್ನು ಅರ್ಥ ಮಾಡಿಕೊಡಬೇಕು.

ಇನ್ನು ಪಿ. ಡಬ್ಲ್ಯೂ. ಡಿ. ಗ್ಯಾಂಗ್ ಕೂಲಿ ಕೆಲಸಗಾರರ ವಿಚಾರ ಹಿಂದೆ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯಾಗುವಾಗ ಈ ವಿಚಾರವನ್ನು ಶ್ರೀಮಾನ್ ಕಕ್ಕಿಲಾಯ ಅವರು ಉಲ್ಲೇಖ ಮಾಡಿದ್ದಾರೆ, ಇದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಪಿ. ಡಬ್ಲ್ಯೂ. ಡಿ.ಯಲ್ಲಿ ಗ್ಯಾಂಗ್ ಕೂಡ ಕೆಲಸಗಾರರು ಎಂದರೆ ದಿನಗೂಲಿಯ ಕೆಲಸಗಾರರು ಇದ್ದಾರೆ. ಅವರ ಸ್ಥಿತಿಯಲ್ಲಿ ಅವರಿಗೆ ಸಂಬಳ ಹೆಚ್ಚಾಗುವ ಭರವಸೆ ಇಲ್ಲ. ಟೆಂಪರರಿಯಾಗಿ ದಿನಗೂಲಿಯ ಮೇಲೆ ಕೆಲಸ ಮಾಡಿಕೊಂಡು ಅವರು ಜೀವನವನ್ನು ನಡೆಸುತ್ತಿದ್ದಾರೆ. ಇಂಥಾ ಗ್ಯಾಂಗ್ ದಿನಗೂಲಿ ಕೆಲಸಗಾರರನ್ನು ಕೇರಳದಲ್ಲಿ ಸರ್ಕಾರಿ ನೌಕರರೆಂದು ಪರಿಗಣಿಸಿ ಅವರಿಗೆ ಸರ್ಕಾರಿ ನೌಕರರಿಗೆ ಕೊಡುವ ಸೌಲಭ್ಯವನ್ನು ಕೊಟ್ಟಿದ್ದಾರೆ. ಆದ್ದರಿಂದ ನಮ್ಮ ರಾಜ್ಯದಲ್ಲಿಯೂ ಕೂಡ ಕೇರಳದವರ ಮೇಲ್ಪಂಕ್ತಿಯನ್ನು ಅನುಸರಿಸಿ ಗ್ಯಾಂಗ್ ದಿನಗೂಲಿ ಕೆಲಸಗಾರರನ್ನು ಸರ್ಕಾರ ನೌಕರರೆಂದು ಪರಿಗಣಿ ಬೇಕು ಎಂದು ವಿನಂತಿ ಮಾಡಿಕೊಂಡು ಇಷ್ಟು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ಕೃತಜ್ಞತೆಯನ್ನು ಸಲ್ಲಿಸಿ ನಾನು ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ. ಎ. ಚಂದ್ರೇಗೌಡ (ಚಿಕ್ಕಮಗಳೂರು).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ ಈ ದಿವಸ ಮಾನ್ಯ ಆರ್ಥಿಕ ಮಂತ್ರಿಗಳು ೧೯೭೮—೭೯ನೇ ಸಾಲಿನ ಆಯವ್ಯಯ ಪಟ್ಟಿಯನ್ನು ಈ ಸಭೆಯ ಮುಂದೆ ಮಂಡಿಸಿರತಕ್ಕದ್ದು ಬಹಳ ಉತ್ತಮವಾದದ್ದು. ಇದನ್ನು ಸ್ವಾಗತಿಸುತ್ತಾ ಇವೊತ್ತು ಅನೇಕ ಅಭಿವೃದ್ಧಿ ಕಾರ್ಯಗಳ ಕಡೆ ಸರ್ಕಾರದವರು ಹೆಚ್ಚಿನ ಗಮನವನ್ನು ಹರಿಸಿರತಕ್ಕ ಬಜೆಟ್ಟು ಆಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಬಹುಭಾಗ ನಮ್ಮ ವಿರೋಧ ಪಕ್ಷದ ಮಿತ್ರರು ಇದನ್ನು ಸುಮಾರು ೭–೮ ವರ್ಷಗಳಿಂದ ಸರ್ಕಾರದವರು ಬಜೆಟ್ಟಿನ ಪ್ರತಿಯನ್ನು ಗ್ರಾಮಫೋನ್ ಪ್ಲೇಟಿನಲ್ಲಿ ಹಾಡಿದ್ದ ಗ್ರಾಮಫೋನ್ ಪ್ಲೇಟ್, ಇದು ಒಂದೇ ರೆಕಾರ್ಡ್ ಎಂದು ಮಾತನಾಡಿದರು. ಕೆಲವು ಸಂದರ್ಭದಲ್ಲಿ ಹೇಳಿದ್ದಾರೆ ಪುಸ್ತಕಗಳು ಒಂದೇ ರೀತಿಯಾಗಿ ಪ್ರಿಂಟ್ ಆಗಿದ್ದರೂ ಸಹ ಇದರಲ್ಲಿ ಅಂಕಿ ಸಂಖ್ಯೆಗಳು ಬದಲಾಗಿವೆ ಎಂದು. ಬಹುಭಾಗ ನಾವೂ ಸಹ ವಿರೋಧ ಪಕ್ಷದವರು ಕತ್ತಲು ಎಂದು ಹೇಳುವುದನ್ನು ಬೆಳಕು ಎಂದು ಹೇಳುವುದಾಗಲೀ ನಾವು ಬೆಳಕು ಎಂದು ಹೇಳುವುದನ್ನು ಅವರು ಕತ್ತಲು ಎಂದು ಹೇಳುವುದಾಗಲೀ ಸಮಂಜಸವಾಗುವುದಿಲ್ಲ. ಸರ್ಕಾರದವರು ಹೇಳಿರತಕ್ಕದ್ದರಲ್ಲಿ ಉಪಯುಕ್ತವಾದ ಕಾರ್ಯಗಳು ಆಗಿವೆ, ಅವನ್ನು ನಾವು ತಿಳಿದುಕೊಳ್ಳಬೇಕಾದ್ದು ಶ್ಲಾಘಿಸಬೇಕಾದ್ದು ನಮ್ಮ ಕರ್ತವ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ಅನೇಕ ದೋಷಾರೋಪಣೆಗಳು ಇದ್ದರೂ ಸಹ ಅದನ್ನು ಸರ್ಕಾರದ ಗಮನಕ್ಕೆ ತಂದು ಸರ್ಕಾರವನ್ನು ಎಚ್ಚರಿಸಿ ಆ ಕಡೆಗೆ ಸರ್ಕಾರದ ಗಮನವನ್ನು ನಾವು ಸೆಳೆಯಬೇಕಾಗುತ್ತದೆ ಎಂದು ನಾನು ಭಾವಿಸುತ್ತೇನೆ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಈಗ ಸುಮಾರು ೬–೭ ವರ್ಷಗಳಿಂದ ಸರ್ಕಾರದವರು ಮಾಡಿರತಕ್ಕ ಕಾರ್ಯಕ್ರಮಗಳನ್ನು ನೋಡಿದರೆ ಹೆಚ್ಚಿನ ರೀತಿಯಲ್ಲಿ ಇಡೀ ನಮ್ಮ ಭಾಗತದಲ್ಲೇ ಕಾಣದೇ ಇರತಕ್ಕ ಉತ್ತಮವಾದ ಅಭಿವೃದ್ಧಿ ಕಾರ್ಯಗಳನ್ನು ಕರ್ನಾಟಕದಲ್ಲಿ ನಮ್ಮ ಸರ್ಕಾರ ಮಾಡಿ ತೋರಿಸಿದೆ. ಸಾಮಾನ್ಯವಾಗಿ ಹಿಂದುಳಿದ

ಪ್ರದೇಶದ ಅಭಿವೃದ್ಧಿ ಮತ್ತು ಹೆಚ್ಚಿನ ರೀತಿಯಲ್ಲಿ ರೈತವರ್ಗದ ಆಗುಹೋಗುಗಳ ಬಗ್ಗೆ ಸರ್ಕಾರದವರು ತಮ್ಮ ಗಮನವನ್ನು ಹರಿಸಿದ್ದಾರೆ ರೈತರು ಹೆಚ್ಚಿನ ಬೆಳೆ ಬೆಳೆಯುವುದಕ್ಕೆ ಬೇಕಾದ ಸಹಾಯವನ್ನು ಮಾಡಿದ್ದಾರೆ. ಸಣ್ಣ ಹಾಗೂ ದೊಡ್ಡ ಕೈಗಾರಿಕೆಗಳನ್ನು ಸ್ಥಾಪಿಸಿ ಜನತೆಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಇಂಥಾ ಅನೇಕ ಕಾರ್ಯಗಳನ್ನು ಮಾಡಿ ದೇಶದ ಜನತೆಯ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸಿ ಅವರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ ಇಪ್ಪತ್ತು ಅಂಶಗಳ ಕಾರ್ಯಕ್ರಮದ ಅಂಗವಾಗಿ ಅನೇಕ ಹರಿಜನ ಗಿರಿಜನರ ಅಭಿವೃದ್ಧಿಕಾರ್ಯಗಳನ್ನು ಮಾಡಿ ಅವರ ಏಳಿಗೆಯನ್ನು ಸಾಧನೆ ಮಾಡಿದ್ದಾರೆ. ಈ ರೀತಿಯಾಗಿ ಸರ್ಕಾರದವರು ಇನ್ನೂ ಅನೇಕ ಉತ್ತಮವಾದ ಕೆಲಸಗಳನ್ನು ಮಾಡಿದ್ದಾರೆ. ಆದರೆ ನಿರೀಕ್ಷಿಸಿದಷ್ಟು ಕಾರ್ಯಗಳನ್ನು ಮಾಡಿಲ್ಲ ಎಂದು ಒಪ್ಪಿಕೊಳ್ಳೋಣ. ಇನ್ನೂ ಹೆಚ್ಚಿನ ರೀತಿಯಲ್ಲಿ ಬಹಳ ವೇಗವಾಗಿ ನಡೆಯಬೇಕಾಗಿತ್ತು. ನಾವು ಜನತೆಗೆ ಏನು ಆಶ್ವಾಸನೆಯನ್ನು ಕೊಟ್ಟಿದ್ದೇವೆ ಅದು ಈಡೇರಬೇಕು. ಈ ದೃಷ್ಟಿಯಿಂದ ಸರ್ಕಾರದವರು ಕಾರ್ಯಕ್ರಮವನ್ನು ಹಾಕಿಕೊಂಡರೂ ಕೂಡ ಅದರ ಕಡೆ ಸರ್ಕಾರದವರು ತಮ್ಮ ಗಮನವನ್ನು ಹರಿಸಿ ಕರ್ತವ್ಯ ನಿರ್ವಹಣೆ ಮಾಡಲು ಸರ್ಕಾರದ ಮೆಷನರಿ ಏನಿದೆ ಅದರ ಕಡೆ ಹೆಚ್ಚಿನ ಗಮನ ಕೊಡುವುದು ಆದ್ಯಕರ್ತವ್ಯ. ಇವೊತ್ತು ಎಷ್ಟೋ ಕೆಲಸಕಾರ್ಯಗಳು ಒಂದು ಯೋಜಿತ ರೀತಿಯಲ್ಲಿ ತೀವ್ರವಾಗಿ ಸಾಗಬೇಕು ಎಂದು ಹೇಳಿದರೂ ಕೂಡ ಕೆಲವು ಕೆಲಸಗಳು ಅರ್ಧಸ್ಥಿತಿಯಲ್ಲಿ ಉಳಿಯತಕ್ಕದ್ದು, ಕೆಲವು ಪ್ರಾರಂಭ ಆಗದೇ ಇರತಕ್ಕದ್ದು ನಾವು ನೋಡುತ್ತಿದ್ದೇವೆ. ಇದಕ್ಕೆ ಕಾರಣ ಅನೇಕ ಹಿರಿಯ ಅಧಿಕಾರಿಗಳಾಗಲೀ ಕಿರಿಯ ಅಧಿಕಾರಿಗಳಾಗಲೀ, ಇದರ ಬಗ್ಗೆ ಸರ್ಕಾರದ ಧ್ಯೇಯಧೋರಣೆಗಳ ಬಗ್ಗೆ ಹೆಚ್ಚಿನ ಗಮನ ಕೊಡದೆ ಲೋಪದೋಷಗಳು ಕಾಣುವುದಕ್ಕೆ ಕಾರಣವಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುತ್ತೇನೆ. ಇದನ್ನು ಸಂಬಂಧಪಟ್ಟ ಮಾನ್ಯ ಮಂತ್ರಿಗಳಾಗಲೀ, ಮಾನ್ಯ ಮುಖ್ಯಮಂತ್ರಿಗಳಾಗಲೀ ಗಮನಿಸಿ ಸರ್ಕಾರದವರು ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ ಅದು ಪೂರ್ಣವಾಗಿ ಕಾರ್ಯಗತವಾಗಿ ಜನತೆಯ ಆಶೆಯನ್ನು ಈಡೇರಿಸತಕ್ಕ ಸೌಲಭ್ಯ ದೊರೆಯುವಂತೆ ಕಾರ್ಯಕ್ರಮವಾಗಬೇಕು ಎಂದು ನಾನು ಹೇಳುತ್ತೇನೆ.

ಇನ್ನೊಂದು ವಿಷಯ ಇವೊತ್ತು ವಿದ್ಯಾ ಸೌಕರ್ಯದ ಬಗ್ಗೆ ಅನೇಕ ಮಿತ್ರರು ಭಾಷಣ ಮಾಡಿದ್ದಾರೆ. ವಿದ್ಯಾಭಿವೃದ್ಧಿಗೋಸ್ಕರ ಕುಡಿಯುವ ನೀರಿನ ಸೌಕರ್ಯಕ್ಕೋಸ್ಕರ ಸಣ್ಣ ನೀರಾವರಿ ಸೌಲಭ್ಯವನ್ನು ರೈತರಿಗೆ ಒದಗಿಸುವುದಕ್ಕೋಸ್ಕರ ಹೆಚ್ಚಿನ ರೀತಿಯಲ್ಲಿ ಸರ್ಕಾರದವರು ಹೆಚ್ಚಿನ ರೀತಿಯಲ್ಲಿ ಹಣವನ್ನು ಒದಗಿಸಿದ್ದಾರೆ. ಆದರೆ ಎಷ್ಟರಮಟ್ಟಿಗೆ ವಿದ್ಯಾ ಸೌಕರ್ಯ ಹಳ್ಳಿಯ ಜನತೆಯ ಮಕ್ಕಳಿಗೆ ದೊರಕಿದೆ ಎಂಬುದನ್ನು ಅವಲೋಕಿಸಿದರೆ ಬಹಳ ವ್ಯತ್ಯಾಸಗಳು ಕಾಣುತ್ತವೆ. ಪಟ್ಟಣದ ವಾಸಿಗಳ ಮಕ್ಕಳಿಗೆ ದೊರೆಯತಕ್ಕ ವಿದ್ಯಾಭ್ಯಾಸಕ್ಕೂ ಹಳ್ಳಿಗಳಲ್ಲಿರತಕ್ಕ ಬಡ ರೈತರ ಮಕ್ಕಳಿಗೆ ದೊರೆಯತಕ್ಕ ವಿದ್ಯಾಭ್ಯಾಸಕ್ಕೂ, ಸಾಮಾನ್ಯ ವರ್ಗದ ಜನರ ಮಕ್ಕಳಿಗೆ ದೊರೆಯತಕ್ಕ ವಿದ್ಯಾಭ್ಯಾಸಕ್ಕೂ ಬಹಳ ವ್ಯತ್ಯಾಸ ಕಾಣುತ್ತದೆ. ಆದ್ದರಿಂದ ಇದರಲ್ಲಿ ಎಲ್ಲಿ ಲೋಪದೋಷಗಳು ಇವೆ ಎಂಬುದನ್ನು ತಜ್ಞರು ಪರಿಶೀಲಿಸಬೇಕು. ಬಹಳವಾಗಿ ನನ್ನ ಅನುಭವಕ್ಕೆ ಬಂದಿರುವ ಹಾಗೆ ಎಲ್ಲಿ ಸಿಂಗಲ್ ಟೀಚರ್ಸ್ ಶಾಲೆಯನ್ನು ಪ್ರಾರಂಭ ಮಾಡಿದ್ದಾರೆ ಅಲ್ಲಿ ಒಬ್ಬರೇ ಉಪಾಧ್ಯಾಯರು ೩ ತರಗತಿಗಳು ೭ ತರಗತಿಗಳನ್ನು ನಡೆಸುತ್ತಾ ಇರುವುದನ್ನು ನಾವು ನೋಡಿದ್ದೇವೆ. ಅಲ್ಲಿ ಉಪಾಧ್ಯಾಯರು ಬೇರೆ ಕಡೆಗೆ ವರ್ಗಾವಣೆಯಾದರೂ ಸಹ ಮತ್ತೊಬ್ಬ ಉಪಾಧ್ಯಾಯರು ಬರುವವರೆಗೂ ಶಾಲೆಯನ್ನು ಮುಚ್ಚಿರುವುದನ್ನು ನಾವು ನೋಡಿದ್ದೇವೆ. ಒಂದು ವೇಳೆ ಉಪಾಧ್ಯಾಯರು ರಜಾ ವಗೈರೆ ತೆಗೆದುಕೊಂಡರೂ ಕೂಡ ಅವರು ರಜಾದಿಂದ ವಾಪಸ್ಸು ಬರುವವರೆಗೂ ತಿಂಗಳುಗಟ್ಟಲೆ ಶಾಲೆಯನ್ನು ಮುಚ್ಚಿರುವುದನ್ನು ನಾವು ನೋಡಿದ್ದೇವೆ. ಆದರೆ ಪಟ್ಟಣಗಳಲ್ಲಿ ಆ ರೀತಿ ಇಲ್ಲ. ಶಾಲೆಯಲ್ಲಿ ಒಂದು ವೇಳೆ ಉಪಾಧ್ಯಾಯರು ರಜಾ ಹೋದರೂ ಕೂಡ ಅವರ ಜಾಗದಲ್ಲಿ ಬೇರೆ ಸಬ್‌ಸ್ಟ್ಯೂಟ್ ಹಾಕಿ ಮಕ್ಕಳಿಗೆ ಒಂದು ಹೆಚ್ಚಿನ ವಿದ್ಯಾಭ್ಯಾಸ ದೊರೆಯುವಂತೆ ಇದೆ. ಈ ದೃಷ್ಟಿಯಿಂದ ಹಳ್ಳಿಗಳಲ್ಲಿ ಮಕ್ಕಳಿಗೆ ದೊರೆಯುವಂತಹ ವಿದ್ಯಾಭ್ಯಾಸ ಮಟ್ಟಕ್ಕೂ, ಪಟ್ಟಣದ ಮಕ್ಕಳಿಗೆ ದೊರೆಯುವಂತ ವಿದ್ಯಾಭ್ಯಾಸ ಮಟ್ಟಕ್ಕೂ ಬಹಳ ವ್ಯತ್ಯಾಸ ಕಾಣುತ್ತದೆ. ಈ ಬಗ್ಗೆ ಹಿಂದೆ ನಾನು ಸರ್ಕಾರದ ಗಮನವನ್ನು ಸೆಳೆದಿದ್ದೆ. ಈಗ ನಿರುದ್ಯೋಗಿ ಪದವೀಧರರೇನಿದ್ದಾರೆ ಅವರಿಗೆ ೧೫೦ ರೂಪಾಯಿಗಳ ಸ್ಟೈಪೆಂಡ್ ಕೊಟ್ಟು ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಒಂದು ಪೂಲ್ ಮಾಡಿ ಯಾವುದೇ ಶಾಲೆಯಲ್ಲಿ ಉಪಾಧ್ಯಾಯರು ಇಲ್ಲದಿದ್ದರೂ ಕೂಡ ಆ ಶಾಲೆಗೆ ಈ ನಿರುದ್ಯೋಗಿ ಪದವೀಧರರು ಹೋಗಿ ತಮ್ಮ ಸೇವೆಯನ್ನು ಮಾಡತಕ್ಕ ಅವಕಾಶವನ್ನು ಮಾಡಿದ್ದೇ ಆದರೆ ಆಗ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯ ಎಂದು ನಾನು ಹೇಳುತ್ತೇನೆ. ಇವತ್ತಿನ ದಿವಸ ಸರ್ಕಾರದ ಯೋಜನೆಯ ಪ್ರಕಾರ ಹಳ್ಳಿಗಾಡು

ಗಳಲ್ಲಿ ಶಾಲೆಗಳನ್ನು ಮಂಜೂರು ಮಾಡುತ್ತಾರೆ, ಶಾಲೆಗಳನ್ನು ಕಟ್ಟಿಸುತ್ತಾರೆ, ಆದರೆ ಅಲ್ಲಿ ಉಪಾಧ್ಯಾಯರ ವಸತಿಸೌಕರ್ಯದ ಬಗ್ಗೆ ಮಾತ್ರ ಗಮನಹರಿಸುವುದಿಲ್ಲ. ಪಟ್ಟಣಗಳಲ್ಲಾದರೆ ಅವರಿಗೆ ಹೌಸಿಂಗ್ ಬೋರ್ಡ್ ಮನೆಗಳಾಗಲಿ, ಅಥವಾ ಬೇರೆ ಬಾಡಿಗೆ ಮನೆಗಳಾಗಲಿ ಸಿಕ್ಕುತ್ತವೆ. ಆದರೆ ಹಳ್ಳಿಗಳಲ್ಲಿ ಈರೀತಿ ಬಾಡಿಗೆಗೆ ಮನೆಗಳು ಸಿಕ್ಕದೇ ಇರುವುದರಿಂದ ಪಟ್ಟಣಗಳಲ್ಲಿದ್ದ ಉಪಾಧ್ಯಾಯರು ಗಳನ್ನು ಹಳ್ಳಿಗಳಿಗೆ ವರ್ಗಮಾಡಿದರೆ ಅವರು ಅಲ್ಲಿಗೆ ಹೋಗಲು ಇಷ್ಟಪಡುವುದಿಲ್ಲ. ಆದ್ದರಿಂದ ಇನ್ನು ಮುಂದೆ ಹಳ್ಳಿಗಾಡಿನಲ್ಲಿ ಶಾಲೆಗಳನ್ನು ಮಂಜೂರು ಮಾಡುವ ಕಾಲದಲ್ಲೇ ಉಪಾಧ್ಯಾಯರಿಗೂ ವಸತಿಸೌಕರ್ಯವನ್ನು ಒದಗಿಸಲು ವ್ಯವಸ್ಥೆ ಮಾಡಬೇಕೆಂದು ಹೇಳಬಯಸುತ್ತೇನೆ.

ಇನ್ನು ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಹೇಳಬೇಕಾದರೆ, ಇವತ್ತು ಸರ್ಕಾರದವರು ತೆರೆದ ಭಾವಿ, ಬೋರ್‌ವೆಲ್ ನ್ಯಾಚುರಲ್ ವಾಟರ್ ಸ್ಕೀಂ ಮುಂತಾದ ರೀತಿಯಲ್ಲಿ ಕುಡಿಯುವ ನೀರನ್ನು ಒದಗಿಸುತ್ತಿದ್ದಾರೆ. ಆದರೆ ಇದು ಮಲೆನಾಡು ಪ್ರದೇಶದಲ್ಲಿ ಹೆಚ್ಚಿನ ರೀತಿಯಲ್ಲಿ ಪ್ರಯೋಜನ ವಾಗುತ್ತಿಲ್ಲವೆಂದು ನಾನು ಮೊದಲೇ ಹೇಳಿದ್ದೇನೆ. ಜನಸಂಖ್ಯೆ ಆಧಾರದ ಮೇಲೆ, ಹಣವನ್ನು ಖರ್ಚು ಮಾಡುವ ಸರ್ಕಾರದ ಧೋರಣೆ ಏನಿದೆ ಅದನ್ನು ಬದಲಾವಣೆ ಮಾಡಿ ನದಿಗಳಿಂದ ನೀರನ್ನು ಪಂಪ್ ಮಾಡುವ ಮೂಲಕ ಈ ಮಲೆನಾಡಿನ ಜನಗಳಿಗೆ ನೀರನ್ನೊದಗಿಸಬೇಕೆಂದು ಹೇಳಬಯಸುತ್ತೇನೆ.

ಸ್ವಾಮಿ, ವಿದ್ಯಾಭ್ಯಾಸದ ವಿಚಾರದಲ್ಲಿ ಮಾತನಾಡುವಾಗ ಒಂದು ವಿಚಾರವನ್ನು ಹೇಳುವುದು ಮರೆತಿದ್ದೆ. ಅನೇಕ ವಿಚಾರಗಳಲ್ಲಿ ತಾಲ್ಲೂಕುಮಟ್ಟದ ಅಧಿಕಾರಿಗಳಿಗೆ, ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ತಾವು ಯೋಗ್ಯ ಅಧಿಕಾರವನ್ನು ಕೊಟ್ಟಿದ್ದೀರಿ, ಅದರಂತೆ ಅವರೂ ನಡೆಸಿಕೊಂಡು ಬರುತ್ತಿದ್ದಾರೆ. ಆದರೆ ವಿದ್ಯಾಭ್ಯಾಸ ಇಲಾಖೆಯಲ್ಲಿ ಈ ರೀತಿಯ ಹೆಚ್ಚಿನ ಅಧಿಕಾರವನ್ನು ಅಧಿಕಾರಿಗಳಿಗೆ ಕೊಟ್ಟಿಲ್ಲ. ಡಿ.ಡಿ.ಪಿ.ಐ.ಗೂ ಕೂಡ ಒಬ್ಬ ಪದವೀಧರ ಉಪಾಧ್ಯಾಯರನ್ನು ಸಸ್ಪೆಂಡ್ ಮಾಡುವ ಅಧಿಕಾರ ಇಲ್ಲ. ಅದು ಏನಿದ್ದರೂ ಜಾಯಿಂಟ್ ಡೈರೆಕ್ಟರ್‌ರವರಿಗೇ ಹೋಗಬೇಕು. ಆ ಉಪಾಧ್ಯಾಯ ಕೂಡ ನಾನು ಜಾಯಿಂಟ್ ಡೈರೆಕ್ಟರ್‌ರವರನ್ನೇ ಹೋಗಿ ನೋಡುತ್ತೇನೆ ನೀವು ಏನು ಮಾಡುತ್ತೀರೋ ಮಾಡಿಕೊಳ್ಳಿ ಎಂದು ಹೇಳುತ್ತಾರೆ. ಉದಾಹರಣೆಗೆ ಹೇಳುವುದಾದರೆ ಒಬ್ಬ ಪೋಲೀಸ್ ಅಧಿಕಾರಿಗೆ ಇರುವಷ್ಟು ಅಧಿಕಾರವನ್ನಾದರೂ ಡಿ.ಡಿ.ಪಿ.ಐ.ಗೆ ಕೊಟ್ಟರೆ ಅದರಿಂದ ವಿದ್ಯಾಮಟ್ಟ ಸುಧಾರಣೆಯಾಗುತ್ತದೆಂದು ಮಾನ್ಯ ಅಧ್ಯಕ್ಷರ ಮೂಲಕ ಸಲಹೆ ಮಾಡಬಯಸುತ್ತೇನೆ.

ಇನ್ನು ವೈದ್ಯಕೀಯ ಸೌಕರ್ಯದ ಬಗ್ಗೆ ಹೇಳುವುದಾದರೆ, ಹೆಚ್ಚಿನ ರೀತಿಯಲ್ಲಿ ಹಳ್ಳಿಗಳಲ್ಲಿ ಮೂಲೆ ಮೂಲೆಗಳಲ್ಲಿ ಆಸ್ಪತ್ರೆಗಳನ್ನು ತೆರೆದು ಜನರಿಗೆ ವೈದ್ಯ ಸೌಕರ್ಯವನ್ನು ಒದಗಿಸಬೇಕಾಗಿದೆ. ಇವತ್ತು ಏನಾಗಿದೆ ಎಂದರೆ, ಪಟ್ಟಣದಲ್ಲಿರುವ ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಸಿಕ್ಕುವಂತಹ ಹಾಲು, ಬ್ರೆಡ್ಡು, ಔಷಧಿ, ಮುಂತಾದುವು ಹಳ್ಳಿಗಳಲ್ಲಿರತಕ್ಕ ಕಂಬೈನ್ಡ್ ಡಿಸ್ಪೆನ್ಸರಿಗಳಲ್ಲಿ ಸಿಕ್ಕುತ್ತಿಲ್ಲ. ಈ ಕಂಬೈನ್ಡ್ ಡಿಸ್ಪೆನ್ಸರಿಗಳಿಗೆ ಕನಿಷ್ಟ ೧೦ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಆದರೆ ಅಲ್ಲಿ ೬ ಜನ ಔಟ್ ಪೇಷಂಟ್ಸ್, ೮–೧೦ ಜನ ಇನ್ ಪೇಷಂಟ್‌ಗಳಿಗೆ ಉತ್ತಮ ರೀತಿಯ ಔಷಧಿಗಳನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದರಿಂದಾಗಿ ಹಳ್ಳಿಗಳಲ್ಲಿರತಕ್ಕ ರೋಗಿಗಳು ಪಟ್ಟಣಗಳಲ್ಲಿರತಕ್ಕ ಆಸ್ಪತ್ರೆಗಳಿಗೆ ಹೋಗುವುದಕ್ಕೆ ಪ್ರಯತ್ನ ಮಾಡುತ್ತಾರೆ. ಅನೇಕ ಸಂದರ್ಭಗಳಲ್ಲಿ ಆ ರೋಗಿಗಳಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಹಳ್ಳಿಗಾಡಿನಲ್ಲಿರತಕ್ಕ ಕಂಬೈನ್ಡ್ ಡಿಸ್ಪೆನ್ಸರಿಗಳಿಗೆ ಔಷಧಿಗಾಗಿ ಹೆಚ್ಚು ಹೆಚ್ಚು ಹಣವನ್ನು ಒದಗಿಸಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನೊಂದು ವಿಷಯ ಹೇಳುವುದಾದರೆ, ಮೆಡಿಕಲ್ ಸ್ಟೋರ್ಸ್ ಎಂದು ಏನು ಬೆಂಗಳೂರಿನಲ್ಲಿ ಮಾಡಿದ್ದೀರಿ ಇಲ್ಲಿಂದ ಔಷಧಿಗಳನ್ನು ತೆಗೆದುಕೊಂಡು ಹೋಗುವುದೇ ಅಧಿಕಾರಿಗಳಿಗೆ ಕಷ್ಟವಾಗಿದೆ. ಆದ್ದರಿಂದ ಮೈಸೂರು, ಬೆಂಗಳೂರು, ಬೆಳಗಾಂ ಎಂದು ಏನು ರೆವಿನ್ಯೂ ಡಿವಿಷನ್‌ಗಳನ್ನು ಮಾಡಿದ್ದೀರಿ ಅದೇರೀತಿ ಈ ಪ್ರತಿ ಯೊಂದು ಡಿವಿಜನ್‌ನಲ್ಲೂ ಮೆಡಿಕಲ್ ಸ್ಟೋರ್ಸ್‌ನ್ನು ತೆರೆದು ಎಲ್ಲಕಡೆಗೂ ಸುಲಭವಾಗಿ ಔಷಧಿಗಳು ಸಿಕ್ಕುವಂತೆ ವ್ಯವಸ್ಥೆ ಮಾಡಬೇಕೆಂದು ಸಲಹೆ ಮಾಡಬಯಸುತ್ತೇನೆ. ಇನ್ನು ವೈದ್ಯಕೀಯ ಅಧಿಕಾರಿ ಗಳನ್ನು ವರ್ಗ ಮಾಡುವ ಬಗ್ಗೆ ಒಂದು ಮಾತು ಹೇಳುವುದಾದರೆ, ಸಾಮಾನ್ಯವಾಗಿ ಒಬ್ಬ ಉತ್ತಮ ವೈದ್ಯ ಒಂದೇ ಕಡೆ ೪–೫ ವರ್ಷ ಸೇವೆ ಮಾಡಿದರೆ ಅದನ್ನು ಪಾಲಿಸಿ ಮ್ಯಾಟರ್ ಎಂದು ಅವನನ್ನು ಬೇರೆ ಕಡೆಗೆ ವರ್ಗ ಮಾಡುತ್ತೀರಿ. ಅನೇಕ ಸಂದರ್ಭಗಳಲ್ಲಿ ಗಂಡ ಒಂದು ಕಡೆ, ಹೆಂಡತಿ ಒಂದು ಕಡೆ ಆಗಿ ತೊಂದರೆ ಅನುಭವಿಸುವುದನ್ನು ನಾನು ನೋಡಿದ್ದೇನೆ. ಈ ಸಂದರ್ಭದಲ್ಲಿ ನಾನು ಒಂದು ಮಾತು ಹೇಳುವುದಾದರೆ ಯಾರೇ ಒಬ್ಬ ಅಧಿಕಾರಿ ಮೇಲಾಗಲಿ, ವೈದ್ಯನ ಮೇಲಾಗಲಿ, ಕಂಪ್ಲೇಂಟ್ ಬಂದರೆ

ಆಗ ತಾವು ಅವರನ್ನು ಅಲ್ಲಿಂದ ಟ್ರಾನ್ಸ್‌ಫರ್ ಮಾಡುವುದರಲ್ಲಿ ನನ್ನ ಅಭ್ಯಂತರವೇನೂ ಇಲ್ಲ. ಆದರೆ ಅವರನ್ನು ಟ್ರಾನ್ಸ್‌ಫರ್ ಮಾಡುವಾಗಲೂ ಅವರಿಗೆ ತೊಂದರೆ ಆಗದಂತೆ ಮಾಡಬೇಕು. ಏಕೆಂದರೆ ಅವರ ಮಕ್ಕಳುಗಳು ಶಾಲಾ ಕಾಲೇಜುಗಳಲ್ಲಿ ಓದುತ್ತಿರುತ್ತಾರೆ, ಆಗ ಅವರು ಬಿಟ್ಟು ಬರುವುದಕ್ಕಾಗು ವುದಿಲ್ಲ. ಇವತ್ತು ಜೂನ್, ಜುಲೈ ತಿಂಗಳಲ್ಲಿ ಮಲೆನಾಡಿಗೆ ಯಾವ ಒಬ್ಬ ಅಧಿಕಾರಿಯೂ ಬರುವುದ ಕ್ಕಾಗುವುದಿಲ್ಲ. ಆದ್ದರಿಂದ ಯಾರೇ ಒಬ್ಬ ಅಧಿಕಾರಿಯನ್ನಾಗಲಿ, ನೌಕರನನ್ನಾಗಲಿ ಯೋಗ್ಯವಾದ ಕಾಲದಲ್ಲಿ ವರ್ಗ ಮಾಡುವುದು ಒಳ್ಳೆಯದು ಎಂದು ಹೇಳಬಯಸುತ್ತೇನೆ.

ಇನ್ನು ಇಂಡಸ್ಟ್ರೀಸ್ ಬಗ್ಗೆ ಹೇಳುವುದಾದರೆ, ಇದರ ಬಗ್ಗೆ ಬಹಳ ಹೆಚ್ಚಿನ ರೀತಿಯಲ್ಲಿ ಸರ್ಕಾರ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಇದರಲ್ಲಿ ನನ್ನ ಸ್ವಾರ್ಥತೆಯೂ ಕೂಡ ಇದೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಚಿಕ್ಕಮಗಳೂರು ಜಿಲ್ಲೆಯನ್ನು ನಮ್ಮ ಸರ್ಕಾರದವರು ಮುಂದುವರಿದ ಜಿಲ್ಲೆ ಎಂದು ಪರಿಗಣಿಸಿದ್ದಾರೆ. ಏಕೆಂದರೆ ಅಲ್ಲಿ ಹೆಚ್ಚಿಗೆ ಕಾಫಿ ಬೆಳೆ ಬೆಳೆಯುವುದರಿಂದ ಇದನ್ನು ಮೇಜರ್ ಇಂಡಸ್ಟ್ರಿ ಎಂದು ಪರಿಗಣಿಸಿ ಈ ಜಿಲ್ಲೆಯನ್ನು ಕಡೆಗಣಿಸಿದ್ದಾರೆ. ನಾನು ಕೂಡ ಒಬ್ಬ ಕಾಫಿ ಬೆಳೆಗಾರನಾಗಿರುವುದರಿಂದ ಏನೇನು ತೊಂದರೆಗಳು ಇವೆ ಎಂಬುದನ್ನು ಹೇಳುತ್ತಿದ್ದೇನೆ. ಈ ಕಾಫಿ ಬೆಳೆಯನ್ನು ಒಂದು ಬೆಳೆ ಎಂದು ಪರಿಗಣಿಸಬೇಕೇ ಹೊರತು ಇದನ್ನು ಇಂಡಸ್ಟ್ರಿ ಎಂದು ಪರಿಗಣಿಸ ಬಾರದೆಂದು ಕೇಳಿಕೊಳ್ಳುತ್ತೇನೆ. ಇವತ್ತು ತಾಳೆ ಮರದಿಂದ, ಕೇದಿಗೆ ಮರದಿಂದ, ಅಡಿಕೆ ಸಿಪ್ಪೆಯಿಂದ ಒಳ್ಳೆ ಉತ್ತಮ ಕೈಗಾರಿಕೆಯನ್ನು ಮಾಡುವ ಸಾಧ್ಯತೆ ಇರುವುದರಿಂದ ಒಳ್ಳೆಯ ತಜ್ಞರನ್ನು ಕರೆಸಿಕೊಂಡು ಅವರಿಂದ ಸಲಹೆಗಳನ್ನು ಪಡೆಯುವುದು ಒಳ್ಳೆಯದೆಂದು ಸೂಚಿಸಿ ಈ ಚಿಕ್ಕಮಗಳೂರು ಜಿಲ್ಲೆಯನ್ನು ಹಿಂದುಳಿದ ಜಿಲ್ಲೆಯೆಂದು ಪರಿಗಣಿಸಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಪ್ರಾರ್ಥಿಸುತ್ತೇನೆ.

5-30 P.M.

ಚಿಕ್ಕಮಗಳೂರು ಜಿಲ್ಲೆ ಎಂದು ಒಂದು ಜಿಲ್ಲೆ ಇದೆ ಎಂದು ಸರ್ಕಾರದ ಕಣ್ಣು ತೆರೆಸಿದ್ದು ಈವಾಗ ಎಂದು ಕಾಣುತ್ತದೆ. ಹಿಂದೆ ಈ ಜಿಲ್ಲೆಯನ್ನು ಅಷ್ಟು ಕಡೆಗಾಣಿಸಿತ್ತು. ಈ ಜಿಲ್ಲೆಗೆ ರಸ್ತೆಗಳ ಸೌಕರ್ಯ ವಿಲ್ಲ, ದೊಡ್ಡ ನೀರಾವರಿ ಸೌಲಭ್ಯ ಯಾವುದೂ ಇಲ್ಲದೆ ಕಡೆಗಾಣಿಸಿದ ಒಂದು ಜಿಲ್ಲೆಯಾಗಿದೆ. ಇತರ ಜಿಲ್ಲೆಗಳು ಯಾವರೀತಿ ಕೇಂದ್ರದಿಂದ ಸಹಾಯಪಡೆದು ಅಭಿವೃದ್ಧಿಯನ್ನು ಹೊಂದುತ್ತಿದೆ, ಅದೇ ರೀತಿ ಯಲ್ಲಿ ಅಭಿವೃದ್ಧಿಕಾರ್ಯಗಳನ್ನು ಈ ಜಿಲ್ಲೆಯಲ್ಲೂ ಕೈಗೊಂಡು ಎಲ್ಲ ಜನತೆಗೂ ಒಂದೇ ರೀತಿಯಾದ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ.

ಇನ್ನು ರೆವಿನ್ಯೂ ಬಗ್ಗೆ ಹೇಳುವುದಾದರೆ ಇದರಲ್ಲಿ ಬಹಳ ಹೆಚ್ಚಿನ ನ್ಯೂನತೆಗಳು ಆಗಿವೆ. ಆದರೂ ಬಡಜನರ ಬಗ್ಗೆ ಹೆಚ್ಚಿನ ಗಮನಹರಿಸಿ ಸಾಗುವಳಿಗೆ ಯೋಗ್ಯವಾದ ರೆವಿನ್ಯೂ ಭೂಮಿಗಳನ್ನು ಲ್ಯಾಂಡ್ ರಿಫಾರಮ್ ಆಕ್ಟನ್ನು ಜಾರಿಗೆ ತಂದು ಲ್ಯಾಂಡ್ ಟ್ರಿಬ್ಯುನಲ್ ಮೂಲಕ ಭೂಮಿಯನ್ನು ಹಂಚಿರುವುದು ಸ್ತುತ್ಯಾರ್ಹವಾಗಿದೆ. ಪ್ರಜಾಪ್ರಭುತ್ವದಲ್ಲಿ ನಿಜವಾಗಿಯೂ ಪ್ರಜೆಗಳೇ ಪ್ರಭುಗಳೆಂದು ತಿಳಿದುಕೊಂಡಿ ರುವ ಸರ್ಕಾರ ಜಮೀನುಗಳನ್ನು ಹಂಚುವ ಕಾರ್ಯಕ್ರಮವನ್ನು ಕೈಗೊಂಡಿರುವುದು ಶ್ಲಾಘನೀಯವಾದ ವಿಚಾರ. ಈ ರೀತಿ ಹಂಚುವ ರೆವಿನ್ಯೂ ಲ್ಯಾಂಡನ್ನು ಎಬಿಸಿಡಿ ಎಂದು ಕ್ಲಾಸಿಫಿಕೇಷನ್ ಮಾಡಿರುತ್ತಾರೆ. ಎ ಮತ್ತು ಬಿ ಸಾಗುವಳಿಗೆ ಯೋಗ್ಯವಾದ ಭೂಮಿಗಳೆಂದು, ಸಿ ಮತ್ತು ಡಿ ಯನ್ನು ಅರಣ್ಯಕ್ಕೆ ತೆಗೆದು ಕೊಳ್ಳತಕ್ಕಂಥ ಒಂದು ಯೋಜನೆಯನ್ನು ಹಾಕಿಕೊಂಡಿರುತ್ತಾರೆ. ಕ್ಲಾಸಿಫಿಕೇಷನ್ ಮಾಡುವಾಗ ಸರಿ ಯಾದ ಟೆಕ್ನಿಕಲ್ ಪೀಪಲ್ ಮಾಡಿಲ್ಲ. ಯಾವುದೋ ಜನರು ಒಂದೂ ಒಂದೂವರೆ ಅಡಿ ಭೂಮಿಯನ್ನು ಆಳಕ್ಕೆ ಅಗೆದು ಮಣ್ಣನ್ನು ಪರೀಕ್ಷೆ ಮಾಡಿರುತ್ತಾರೆ. ಎಷ್ಟೋ ಸಾಗುವಳಿಗೆ ಆಗತಕ್ಕಂಥ ಭೂಮಿಗಳನ್ನು ಸಾಗುವಳಿಗೆ ಯೋಗ್ಯವಲ್ಲವೆಂದು ಪರಿಗಣಿಸಿ ಅರಣ್ಯಕ್ಕೆ ವಹಿಸಿಕೊಟ್ಟಿರುತ್ತಾರೆ. ಹೀಗೆ ಮಾಡಿರುವುದು ಸರಿಯಲ್ಲ. ಆದ್ದರಿಂದ ರಿಕ್ಲಾಸಿಫಿಕೇಷನ್ ಮಾಡಿದರೆ ಸಾಗುವಳಿಗೆ ಯೋಗ್ಯವಾದ ಭೂಮಿಗಳು ಸಿ.ಡಿ. ಯಲ್ಲಿಯೂ ಹೆಚ್ಚಿನ ಪ್ರಮಾಣದಲ್ಲಿ ದೊರೆಯುತ್ತದೆ. ಅರಣ್ಯ ಇಲಾಖೆಗೆ ಹೋಗಿರತಕ್ಕಂಥ ಈ ಭೂಮಿ ಯನ್ನು ಲ್ಯಾಂಡ್ ರೆವಿನ್ಯೂಗೆ ಟ್ರಾನ್ಸ್‌ಫರ್‌ಮಾಡಿದರೆ ಹರಿಜನಗಿರಿಜನರಿಗೆ ಹೆಚ್ಚಿನ ಪ್ರಮಾಣದಲ್ಲಿ ಭೂಮಿ ಯನ್ನು ಕೊಡಲು ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೆ ಅಕ್ರಮ ಸಾಗುವಳಿಯ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತಾ ಸರ್ಕಾರದವರು ತಳೆದಿರುವ ನಿಲುವು ಬಹಳ ಸ್ವಾಗತಾರ್ಹವಾಗಿರುತ್ತದೆ. ನಮ್ಮ ಹಳ್ಳಿಗಳಲ್ಲಿ ಒಂದು ಎರಡು ಮೂರು ಎಕರೆಗಳಷ್ಟು ಭೂಮಿಯನ್ನು ಅಕ್ರಮವಾಗಿ ಸಾಗುವಳಿ ಮಾಡಿದ್ದರೆ ಅಂತಹವರಿಗೆ ಜಮೀನನ್ನು ಬಿಟ್ಟುಕೊಡಬೇಕೆಂದಿರುವುದು ಯೋಗ್ಯ ವಾಗಿಯೋ ಇರುತ್ತದೆ. ಆದರೆ ಕೆಲವರು ಅರಣ್ಯ ಭೂಮಿಗಳನ್ನು ಅದೇ ರೀತಿಯಾಗಿ ಅಕ್ರಮಸಾಗುವಳಿ

ಮಾಡಿಕೊಂಡಿರುತ್ತಾರೆ. ಹಿಂದೆ ಪ್ರಸ್ತಾಪ ಮಾಡಿದಂತೆ ಅರಣ್ಯ ಇಲಾಖೆಯವರಿಗೆ ಅರಣ್ಯ ಭೂಮಿಯನ್ನು ಕೊಡತಕ್ಕಂಥ ಹಕ್ಕಿಲ್ಲ. ರೆವಿನ್ಯೂ ಇಲಾಖೆಗೆ ಸಾಗುವಳಿಗೆ ಕೊಡತಕ್ಕಂಥ ಹಕ್ಕಿರುವುದರಿಂದ ಬಗರ್‌ಹುಕ್ಕುಂ ಸಾಗುವಳಿ ಮಾಡಿರುವ ಅರಣ್ಯ ಭೂಮಿಯನ್ನು ರೆವಿನ್ಯೂಗೆ ಟ್ರಾನ್ಸ್‌ಫರ್‌ಮಾಡಿ ಸಾಗುವಳಿ ಚೀಟಿಯನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಇಲ್ಲವಾದರೆ ರೈತರಿಗೆ ಬಹಳ ತೊಂದರೆಯಾಗುತ್ತದೆ. ಅಕ್ರಮ ಸಾಗುವಳಿ ಎಂದರೆ ಕಾಫಿ ಇಂಡಸ್ಟ್ರೀಯೂ ಕೂಡ ಸೇರಿಕೊಳ್ಳುತ್ತದೆ. ಇಂದು ಕಾಫಿ ಬೆಳೆಯನ್ನು ಬೆಳೆಯತಕ್ಕಂಥ ಭೂಮಿಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ತೊಡಗಿಸಿರುತ್ತಾರೆ. ಸರ್ಕಾರದ ಧೋರಣೆಯ ಪ್ರಕಾರ ಅಕ್ರಮ ಬೆಳೆಯನ್ನು ಬೆಳೆದಿದ್ದಾರೆಂದು ಪರಿಗಣಿಸಿದರೆ ಈ ಒಂದು ಇಂಡಸ್ಟ್ರಿಗೆ ಬಹಳ ದಕ್ಕೆ ಬರುತ್ತದೆ. ಆದ್ದರಿಂದ ಈ ಇಂಡಸ್ಟ್ರಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕೆಂದು ಹೇಳುತ್ತಾ, ಇಂಥ ಕಡೆ ಇನ್ನೂ ಖಾಯಂ ಸಾಗುವಳಿ ಚೀಟಿಯನ್ನು ಕೊಡದೆ ಇರುವುದರಿಂದ ಹಂಗಾಮಿ ಸಾಗುವಳಿಗೆ ಯಾವ ಸಾಲ ಸೌಲಭ್ಯವೂ ದೊರೆಯುತ್ತಿಲ್ಲ. ಆದ್ದರಿಂದ ಖಾಯಂ ಸಾಗುವಳಿ ಚೀಟಿ ಕೊಡುವುದರ ಬಗ್ಗೆ ಸರ್ಕಾರ ಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಅನೇಕ ವಿಚಾರಗಳನ್ನು ಮಾತನಾಡಬೇಕೆಂದು ಇದ್ದೆ, ಆದರೆ ವೇಳೆಯಿಲ್ಲದ ಕಾರಣ ಕೆಲವು ವಿಷಯಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈವತ್ತು ಪಿಡಬ್ಲ್ಯುಡಿ ಇಲಾಖೆಯವರು ಬಹಳ ಹೆಚ್ಚಿನ ರೀತಿಯಲ್ಲಿ ಕಾರ್ಯಕ್ರಮಗಳನ್ನು ತೆಗೆದುಕೊಂಡು ದೊಡ್ಡ ನೀರಾವರಿ ಯೋಜನೆಗಳನ್ನು, ಸಣ್ಣ ನೀರಾವರಿ ಯೋಜನೆಗಳನ್ನು, ಸೇತುವೆಗಳನ್ನು, ಮೋರಿಗಳನ್ನು ಕಟ್ಟಿಸಿಕೊಡುತ್ತಿದ್ದಾರೆ. ಆದರೆ ಈವತ್ತು ರೂರಲ್ ಕಮ್ಯುನಿಕೇಷನ್ ಪ್ರೋಗ್ರಾಮ್ ಪ್ರಕಾರ ಮಣ್ಣಿನ ಕಾಮಗಾರಿ ಕೆಲಸಗಳನ್ನು ಹಳ್ಳಿಗಾಡಿನಲ್ಲಿ ಪಂಚಾಯತಿಗಳು, ಮತ್ತು ತಾಲ್ಲೂಕು ಬೋರ್ಡ್‌ನವರು ತೆಗೆದುಕೊಂಡು ಮಾಡುತ್ತಿದ್ದರು. ಈಗ ರೂರಲ್ ಕಮ್ಯುನಿಕೇಷನ್‌ನಿಂದ ಪಿ ಡಬ್ಲ್ಯು ಡಿಗೆ ಹೋಗುತ್ತಿರುವುದರಿಂದ, ಹಿಂದೆ ಏನು ರಸ್ತೆ ವಗೈರ್‌ಗಳನ್ನು ಮಾಡಿರುತ್ತಾರೆ ಅವುಗಳನ್ನು ಉತ್ತಮಪಡಿಸುತ್ತಾರೆಂದು ತಿಳಿದುಕೊಂಡಿದ್ದರು. ವರ್ಷದಲ್ಲಿ ಹೆಚ್ಚು ಮಳೆಯಾಗತಕ್ಕಂಥ ಮಲೆನಾಡು ಪ್ರದೇಶದಲ್ಲಿ ಯಾವ ವಿಧವಾದ ರಸ್ತೆ ಕಾಮಗಾರಿ ಕೆಲಸಗಳು ಉತ್ತಮವಾಗಿ ನಡೆದಿಲ್ಲ. ನಾಲ್ಕು ಸಾವಿರ ಖರ್ಚುಮಾಡಿ ೧೦ ಮೈಲಿ ಸಂಪೂರ್ಣವಾಗಿ ರಸ್ತೆ ನಿರ್ಮಾಣ ಮಾಡುತ್ತಿದ್ದುದು ಈವತ್ತಿನ ದಿವಸ ೨ ಮೈಲಿಯಷ್ಟು ಆಗುತ್ತ ಇಲ್ಲ. ಆದ್ದರಿಂದ ಮಲೆನಾಡಿಗೆ ಪ್ರತ್ಯೇಕವಾದ ಬಜೆಟ್‌ನ್ನು ಮಾಡಿ ಸಾರಿಗೆ ಸಂಪರ್ಕ ಹೆಚ್ಚಿನ ರೀತಿಯಲ್ಲಿ ಸರ್ಕಾರದವರು ಮಾಡಬೇಕಂದು ಈ ಸಂದರ್ಭದಲ್ಲಿ ಹೇಳುತ್ತಾ ಮಾನ್ಯ ಅರ್ಥಮಂತ್ರಿಗಳು ಮಂಡಿಸಿದ ಬಜೆಟನ್ನು ಸ್ವಾಗತಿಸುತ್ತಾ ನನಗೆ ಇಷ್ಟು ಮಾಡನಾಡುವ ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಟಿ.ವಿ. ರಾಮಚಂದ್ರ ರೆಡ್ಡಿ (ವರತೂರು).—ಮಾನ್ಯ ಅಧ್ಯಕ್ಷರೆ ಈ ಸಾಲಿನ ಆಯವ್ಯಯದ ಚರ್ಚೆಯಲ್ಲಿ ತಮ್ಮ ಅನುಮತಿಯಿಂದ ಭಾಗವಹಿಸುತ್ತಿದ್ದೇನೆ. ಈ ಆಯವ್ಯಯ ಪತ್ರವನ್ನು ಮಂಡಿಸುವುದರ ಮೂಲ ಉದ್ದೇಶ ನಾಗರೀಕರಿಗೆ ಕನಿಷ್ಠ ಸೌಲಭ್ಯಗಳನ್ನು ಒದಗಿಸುವುದಕ್ಕೆ ಈ ಮೂಲ ಸೌಲಭ್ಯಗಳನ್ನು ಎರಡು ಹಂತಗಳನ್ನಾಗಿ ತೆಗೆದುಕೊಳ್ಳೋಣ. ಮೊದಲನೆಯ ಹಂತದಲ್ಲಿ ನಾಗರೀಕ ಜೀವನ ನಡೆಸಲು ಬೇಕಾದ್ದು ಶುದ್ಧವಾದ ಗಾಳಿ, ನೀರು ವಸತಿ ಹಾಗೂ ಆಹಾರ.

ಗಾಳಿ ಇದು ನೈಸರ್ಗಿಕವಾದ ಕೊಡುಗೆ ಅದ್ದರಿಂದ ಯತೇಚ್ಛವಾಗಿ ದಯಾಮಯನಾದ ಭಗವಂತ ಜಾತಿ ಭೇದಗಳಿಲ್ಲದೆ ಜನರಿಗೆ ನೀಡಿದ್ದಾರೆ. ಬಹುಶಃ ಇದು ಸರ್ಕಾರದ ವಶದಲ್ಲಿ ಏನಾದರೂ ಇದ್ದಿದ್ದರೆ ಕುಟುಂಬ ಯೋಜನೆ ಇಲಾಖೆಯ ಅಗತ್ಯತೆ ಇರಲಿಲ್ಲ. ಎಲ್ಲರೂ ಉಸಿರುಕಟ್ಟಿ ಸಾಯುತ್ತಿದ್ದರು.

ನೀರು ಇದು ನೈಸರ್ಗಿಕ ಕೊಡುಗೆಯಾದರೂ, ಇದನ್ನು ದಕ್ಕಿಸಿಕೊಳ್ಳುವುದು ಗಾಳಿಯಷ್ಟು ಸುಲಭವಲ್ಲ. ಭಗೀರಥ ಪ್ರಯತ್ನ ಮಾಡಬೇಕು. ಅದು ಕಳೆದ ೩೦ ವರ್ಷಗಳಿಂದ ಸಮರ್ಪಕವಾಗಿ ನಡೆದಿಲ್ಲಾ. ನಮ್ಮ ರಾಜ್ಯದ ಇನ್ನು ಅರ್ಧಕ್ಕಿಂತ ಹೆಚ್ಚು ಜನಸಂಖ್ಯೆಗೆ ಅಥವಾ ಹಳ್ಳಿಗಳಿಗೆ ಕುಡಿಯುವ ನೀರಿನ ಸೌಲಭ್ಯಗಳು ದೊರೆತಿಲ್ಲ. ರಾಜ್ಯ ಸರ್ಕಾರ ಇನ್ನು ೯ ತಿಂಗಳಲ್ಲಿ ರಾಜ್ಯದ ಎಲ್ಲಾ ಹಳ್ಳಿಗಳಿಗೂ ಕುಡಿಯುವ ನೀರನ್ನು ದೊರಕಿಸುವ ಆಶ್ವಾಸನೆ ನೀಡಿದೆ. ಇದನ್ನು ಸಾದಿಸುವ ಯಾವ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಂಡಿಲ್ಲ ಎಂಬುದನ್ನು ಬಜೆಟ್‌ನ್ನು ನೋಡಿದರೆ ಖಾತರಿಯಾಗುವುದು. ಸುಮಾರು ೩೦ ಕೋಟಿಗಿಂತ ಹೆಚ್ಚು ವೆಚ್ಚ ಮಾಡಬೇಕಾದ ಪರಿಸ್ಥಿತಿಯಲ್ಲಿ ಕೇವಲ ೧೦ ಕೋಟಿ ರೂಪಾಯಿಗಳನ್ನು ಈ ಸಲದ ಆಯವ್ಯಯದಲ್ಲಿ ಸೂಚಿಸಿ ಎಲ್ಲರಿಗೂ ಕುಡಿಯುವ ನೀರನ್ನು ದಕ್ಕಿಸುತ್ತೇವೆ ಎಂಬುದು ಒಂದು

ಕನಸು. ಈಗ ಉಳಿದ ಹಳ್ಳಿಗಳಿಗೆ ನೀರನ್ನು ಕೊಡುವುದನ್ನು ಬಿಟ್ಟು ಇರುವ ಹಳ್ಳಿಗಳ ಕಡೆಗೆ ಗಮನ ಹರಿಸಿದರೆ ತೋಡಿರುವ ಅರ್ಧದಷ್ಟು ಕೊಳವೆ ಬಾವಿಗಳು ಕೆಲಸ ಮಾಡುತ್ತಿಲ್ಲ. ಕಾರಣ ಒಂದು ಕೀಳು ದರ್ಜೆಯ ಕೈ ಪಂಪನ್ನು ಅಳವಡಿಸಿರುವುದು, ಕೀಳ್ದರ್ಜೆಯ ಪಂಪುಗಳ ಮೇಲೆ ಕೋಟ್ಯಾಂತರ ಹಣವನ್ನು ವೆಚ್ಚಮಾಡಿರುವುದೇ ಅಲ್ಲದೆ, ಇನ್ನು ಅನೇಕ ಕೋಟಿಗಳಷ್ಟು ವೆಚ್ಚಮಾಡಿ ನಿರ್ಮಿಸಿದ ಬಾವಿಗಳು ಇಂದು ನಿಷ್ಪ್ರಯೋಜಕವಾಗಿದೆ. ಸರ್ಕಾರ ತಜ್ಞರಿಂದ ಪರೀಕ್ಷೆ ನಡೆಸಿ ಅಭಿವೃದ್ಧಿ ಪಡಿಸಿದ ಪಂಪುಗಳನ್ನು ಕೊಳವೆ ಬಾವಿಗಳಿಗೆ ಅಳವಡಿಸದೇ ಇದ್ದರೆ ತೋಡಿರುವ ಎಲ್ಲ ಬಾವಿಗಳು ಒಂದಲ್ಲ ಒಂದುದಿನ ನಿಷ್ ಪ್ರಯೋಜಕವಾಗುತ್ತದೆ.

ಇನ್ನು ಆಹಾರದ ಉತ್ಪಾದನೆಯ ಬಗ್ಗೆ ಹೇಳುವುದಾದರೆ ಇದರ ಬಗ್ಗೆ ಕಿಂಚಿತ್ತು ಸುಳಿವಿಲ್ಲ. ನಮ್ಮ ರಾಜ್ಯದಲ್ಲಿ ಬೆಳೆದ ಒಟ್ಟು ಆಹಾರ ಪದಾರ್ಥಗಳು ಮತ್ತು ರಾಜ್ಯಕ್ಕೆ ಬೇಕಾದ ಆಹಾರ ಪದಾರ್ಥಗಳ ಪರಿಮಾಣವನ್ನು ಎಲ್ಲಿಯೂ ಸೂಚಿಸಿಲ್ಲ. ಸ್ಥಿತಿಯೂ ತೃಪ್ತಿಕರ ಎಂದು ಮಾತ್ರ ತಿಳಿಸಿದ್ದಾರೆ.

ರಾಜ್ಯದಲ್ಲಿ ಸುಮಾರು ೨೦೦೦ ಜನ ಸಂಖ್ಯೆಗೆ ಒಂದು ವಿತರಣಾ ಕೇಂದ್ರವಿದೆ ಎಂದು ಹೇಳಿದ್ದಾರೆ. ಆದರೆ ನನ್ನ ಕ್ಷೇತ್ರ ಮಟ್ಟಿಗೆ ಹೇಳುವುದಾದರೆ ೧೦ ಸಹಸ್ರ ಜನಕ್ಕೂ ಸೇರಿ ಒಂದು ವಿತರಣಾ ಕೇಂದ್ರವಿಲ್ಲ. ಈ ರೀತಿಯ ವಿತರಣಾ ಕೇಂದ್ರಗಳು ಯಾವುದಾದರು ಒಂದು ವಲಯದಲ್ಲಿ ಕೇಂದ್ರಿಕೃತವಾಗಿದ್ದರೆ ಅವು ಗಳನ್ನು ಆದಷ್ಟು ಶೀಘ್ರವಾಗಿ ವಿಕೇಂದ್ರೀಕರಣ ಗೊಳಿಸತಕ್ಕದೆಂದು ಹೇಳುತ್ತೇನೆ.

ಆಹಾರ ಪದಾರ್ಥಗಳು ಸಮೃದ್ಧಿಯಾಗಿ ದುರ್ಬಲವರ್ಗಗಳ ಜನರಿಗೆ ದಕ್ಕುತ್ತಿವೆ ಎಂಬ ಸರ್ಕಾರದ ಹೇಳಿಕೆ ಸತ್ಯಕ್ಕೆ ದೂರವಾಗಿದೆ. ಈಗಲೂ ಗ್ರಾಮಾಂತರ ಪ್ರದೇಶಗಳಲ್ಲಿ ಧಾನ್ಯಗಳು ಸೊಸೈಟಿಯಿಂದ ದೊರೆಯದೆ ಅವುಗಳಿಗಾಗಿ ಉಳ್ಳವರ ಹತ್ತಿರ ದುರ್ಬಲವರ್ಗದವರು ಬೇಡುವುದು ದಿನನಿತ್ಯಹಳ್ಳಿಗಳಲ್ಲಿ ದೊಡ್ಡ ರೈತರ ಹತ್ತಿರ ಬಿಕ್ಷೆ ಬೇಡತಕ್ಕಂಥ ಪರಿಸ್ಥಿತಿ ಈ ರಾಜ್ಯದ ಬಹಳಷ್ಟು ಕಡೆ ಇವತ್ತಿಗೂ ಇದೆ.

ಇನ್ನು ಸಕ್ಕರೆಯ ಬಗ್ಗೆ ಹೇಳುವುದಾದರೆ ಇದನ್ನು ಸೊಸೈಟಿಯ ಹತ್ತಿರ ತೆಗೆದುಕೊಂಡು ಹೋಗು ವುದಿಲ್ಲ. ತೆಗೆದುಕೊಂಡು ಹೋಗುವುದಕ್ಕೂ ಬಿಡುವುದಿಲ್ಲ. ಕೊಟ್ಟ ಸಕ್ಕರೆಯ ಅರ್ಧ ಭಾಗ ಕಾಳಸಂತೆ ಯಲ್ಲಿ ನಗರಗಳಲ್ಲಿಯೇ ಮಾರಾಟ ಮಾಡುತ್ತಾರೆ. ಸೊಸೈಟಿಯ ಹತ್ತಿರ ಹಳ್ಳಿಯ ಗ್ರಾಮಸ್ಥರು ನಮಗೆ ಸಕ್ಕರೆ ಬೇಕೆಂದು ಕೇಳಿದಾಗ ಸೊಸೈಟಿ ನಡೆಸುತ್ತಿರುವ ಕೆಲವು ವ್ಯಕ್ತಿಗಳು ಈ ತಿಂಗಳು ಸಕ್ಕರೆ ಬಂದಿಲ್ಲ ಎಂಬುದಾಗಿ ಹೇಳಿಬಿಡುತ್ತಾರೆ. ಆದ್ದರಿಂದ ಸರ್ಕಾರದವರು ಇನ್ನು ಮುಂದೆ ಯಾವ ಪ್ರದೇಶಕ್ಕೆ ಸಕ್ಕರೆಯನ್ನು ಕೊಡುವಾಗಲೂ ಆಯಾ ಹಳ್ಳಿಯ ಪಂಚಾಯಿತಿ ಕೇಂದ್ರಗಳಲ್ಲಿ ಅಥವಾ ಗ್ರಾಮದ ಚಾವಡಿ ಗಳಲ್ಲಿ ಪ್ರಚಾರ ಪಡಿಸಬೇಕು. ಆಗ ಸಕ್ಕರೆಯನ್ನು ಬಳಸುವ ಗ್ರಾಹಕನು ತನಗೆ ಬರತಕ್ಕಂಥ ಸಕ್ಕರೆಯ ಪರಿಮಾಣವನ್ನು ಸುಲಭವಾಗಿ ಗ್ರಹಿಸಿಕೊಂಡು ತನ್ನ ಪಾಲನ್ನು ತೆಗೆದುಕೊಳ್ಳುತ್ತಾನೆ. ಆದರೆ ಸರ್ಕಾರ ದವರು ಇದುವರೆಗೂ ಮಾಡಿದ ಕ್ರಮ ಬರೀ ಗರೀಬಿ ಹಠಾವೋ ಕಾರ್ಯಕ್ರಮವಾಗಿದೆ. ಇದನ್ನು ಕೂಡಲೇ ತಪ್ಪಿಸಬೇಕೆಂದು ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ವಸತಿ ನಿರ್ಮಾಣದ ಬಗ್ಗೆ ಹೇಳುವುದಾದರೆ, ಈ ದಿಸೆಯಲ್ಲಿ ಸರ್ಕಾರ ಹೆಮ್ಮೆಯಿಂದ ಒಂದು ಮಾತನ್ನು ಹೇಳಿಕೊಳ್ಳಬಹುದು. ಅದು ಏನೆಂದರೆ ೨೫ ಸಾವಿರ ರೂಪಾಯಿಗಳಲ್ಲಿ ಒಂದು ಮನೆಯನ್ನು ಆರ್ಥಿಕವಾಗಿ ಹಿಂದುಳಿದವರಿಗೆ ಕಟ್ಟಿಸಿಕೊಡುವುದಾಗಿ ಹೇಳಿ ಅದನ್ನು ಮುಗಿಸಿಕೊಟ್ಟಾಗ ೪೨ ಸಾವಿರ ರೂಪಾಯಿಗಳನ್ನು ಕೇಳುತ್ತಿದ್ದಾರೆ. ಇದು ಸಾಮಾನ್ಯ ಸಾಹಸವೇ ? ೧೭ ಸಾವಿರ ರೂಪಾಯಿಗಳನ್ನು ಹೆಚ್ಚಿಗೆ ಕೇಳುತ್ತಿದ್ದಾರೆ. ವಸತಿ ನಿರ್ಮಾಣದ ಬಗ್ಗೆ ಸರ್ಕಾರ ಯೋಜನಾ ಬದ್ಧವಾಗಿ ಕೆಲಸ ಮಾಡು ತ್ತಿಲ್ಲ. ವಸತಿಗಳ ಅಭಾವ ಎಷ್ಟು ಯಾವ ಯಾವ ವರ್ಗಗಳಿಗೆ ಮನೆಗಳು ಎಷ್ಟೆಷ್ಟು ಬೇಕು, ಅವುಗಳ ನಿರ್ಮಾಣಕ್ಕೆ ಬೇಕಾದ ಹಣವೆಷ್ಟು ? ಇವುಗಳ ಬಗ್ಗೆ ಸರ್ಕಾರ ಅಂಕಿ ಸಂಖ್ಯೆಗಳನ್ನು ಕೂಡ ಕೊಟ್ಟಿಲ್ಲ. ಎಲ್ಲಾ ಜನರ ಅಗತ್ಯಕ್ಕಾಗಿ ಈ ದಿನ ನಮ್ಮ ರಾಜ್ಯದಲ್ಲಿ ಸುಮಾರು ೬೦ ಲಕ್ಷ ಮನೆಗಳು ಬೇಕು. ಇದರಲ್ಲಿ ಆರ್ಥಿಕವಾಗಿ ಮುಂದುವರೆದವರನ್ನು ಬಿಟ್ಟರೆ ಸುಮಾರು ೩೦ ಲಕ್ಷ ಮನೆಗಳ ಅವಶ್ಯಕತೆ ಇಂದು ಕಾಣಿಸು ತ್ತಿದೆ. ಇದರಲ್ಲಿ ಇದುವರೆವಿಗೂ ಸರ್ಕಾರದವರು ಕಟ್ಟಿಸಿದ ಮನೆಗಳನ್ನು ಬಿಟ್ಟು ಇನ್ನೂ ಬೇಕಾದ ಮನೆಗಳಿಗೆ ೧೦೦ ಕೋಟಿ ರೂಪಾಯಿಗಳ ಅಗತ್ಯ ಇದೆ. ಆದರೆ ಈ ಸಾಲಿನ ಆಯವ್ಯಯದಲ್ಲಿ ಕೇವಲ ೧೦ ಕೋಟಿ ರೂಪಾಯಿಗಳನ್ನು ಮಾತ್ರ ಒದಗಿಸಿದ್ದಾರೆ. ಇದರಿಂದ ವಸತಿ ನಿರ್ಮಾಣದ ಯೋಜನೆ ಸಮರ್ಪಕವಾಗಿ ನಡೆಯುವುದಿಲ್ಲ. ನಮ್ಮ ಪ್ರದೇಶಗಳಲ್ಲಿ ಸೆಕೆ ಜಾಸ್ತಿಯಿರುವುದರಿಂದ ಬೇಸಿಗೆಯಲ್ಲಿ ಗುಡಿಸಲುಗಳಿಗೆ ಬೆಂಕಿ ತಗಲುವ ಸಂಭವಗಳು ಬಹಳ ಇದ್ದು ಈಗಾಗಲೇ ನಮ್ಮ ಪ್ರದೇಶದಲ್ಲಿ ಬೇಸಿಗೆ

ಕಾಲದಲ್ಲಿ ಬಹಳಷ್ಟು ಜನರ ಗುಡಿಸಲುಗಳಿಗೆ ಬೆಂಕಿ ಬಿದ್ದು ಸುಟ್ಟು ಹೋಗಿವೆ. ಇದನ್ನು ತಪ್ಪಿಸುವುದಕ್ಕೋಸ್ಕರ ಹರಿಜನ ಗಿರಿಜನರಿಗೆ ಹಾಗೂ ಬಡವರಿಗೆ ಗುಡಿಸಲುಗಳನ್ನು ಕಟ್ಟಿಸಿಕೊಡುವ ಬದಲಾಗಿ ಹೆಂಚಿನ ಮನೆಗಳನ್ನು ಕಟ್ಟಿಸಿಕೊಟ್ಟು ಅವರನ್ನು ಈ ಒಂದು ಗಂಡಾಂತರದಿಂದ ಪಾರು ಮಾಡಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಪೋಲೀಸಿನವರಿಗೆ ಸ್ಟೇಷನ್ನಿನ ಪಕ್ಕದಲ್ಲಿ ಮನೆಗಳನ್ನು ಕಟ್ಟಿಸಿಕೊಡುವ ಯೋಜನೆ ಜಾರಿಯಲ್ಲಿದೆ. ಅದೇ ರೀತಿಯಲ್ಲಿ ಶಾಲಾ ಅಧ್ಯಾಪಕರಿಗೆ ಮತ್ತು ಗ್ರಾಮ ಲೆಕ್ಕಿಗರಿಗೆ ಮತ್ತು ಇತರೇ ಗ್ರಾಮಾಂತರ ಪ್ರದೇಶದ ಸರ್ಕಾರಿ ನೌಕರರುಗಳಿಗೆ ಆಯಾ ಗ್ರಾಮದಲ್ಲಿಯೇ ಅವರಿಗೆ ವಸತಿಗಳನ್ನು ನಿರ್ಮಿಸಿಕೊಡಬೇಕು.

ಇನ್ನು ಎರಡನೆಯ ಹಂತದಲ್ಲಿ ಸರ್ಕಾರ ಒದಗಿಸಬೇಕಾದ ಅವಶ್ಯಕತೆಗಳು, ನೀರಾವರಿ ಯೋಜನೆಗಳು, ವಿದ್ಯುತ್ ಯೋಜನೆಗಳು, ರಸ್ತೆ ಸಾರಿಗೆ ವ್ಯವಸ್ಥೆ, ಆಸ್ಪತ್ರೆಗಳು, ಶಾಲೆಗಳು ಕಾಲೇಜುಗಳು ಇತ್ಯಾದಿ ನಮಗೆ ಅವಶ್ಯಕವಾಗಿ ಬೇಕಾಗಿರುವಂತಹವು. ನಮ್ಮಲ್ಲಿ ಅಪಾರ ಜಲಸಂಪತ್ತು ಇದೆ. ಆದರೆ ಅವುಗಳನ್ನು ಬಳಸಲು ಸಾಕಷ್ಟು ವಿಳಂಬವಾಗಿದೆ. ಯಾವುದೇ ಕೆಲವು ಕಾರಣಗಳಿಂದಾಗಿ ಯೋಜನೆಗಳು ತ್ವರಿತಗತಿಯಲ್ಲಿ ಸಾಗುತ್ತಿಲ್ಲ. ನಮ್ಮಲ್ಲಿ ಇರತಕ್ಕಂಥ ನೀರನ್ನು ಸಂಗ್ರಹಿಸಿಕೊಟ್ಟು ಅದನ್ನು ಉಪಯೋಗಿಸಿಕೊಳ್ಳದೆ ತಮಿಳುನಾಡಿಗೆ ಬಿಡತಕ್ಕಂಥ ಶೋಚನೀಯ ಪರಿಸ್ಥಿತಿ ನಮಗೆ ಬಂದಿದೆ. ಇನ್ನು ಕಲವು ಯೋಜನೆಗಳಲ್ಲಿ ಕಾಲುವೆಯ ಕೆಲಸ ಮುಗಿದಿದ್ದರೆ ಅಣೆಕಟ್ಟಿನ ಕೆಲಸವೇ ಮುಗಿದಿಲ್ಲ. ಇದರಿಂದ ಲಕ್ಷಾಂತರ ಎಕರೆಗಳು ಇಂದಿಗೂ ಬೆಂಗಾಡಾಗಿವೆ. ಈ ಪರಿಸ್ಥಿತಿಯನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ನೀರಿಗಾಗಿ ತಹ ತಹಸುತ್ತಿರುವ ಲಕ್ಷಾಂತರರೈತರಿಗೆ ತೃಷೆಯನ್ನಡಗಿಸಲಿ. ರಾಜ್ಯದ ಸಮೃದ್ಧಿಯನ್ನು ವೃದ್ಧಿ ಮಾಡಲೆಂದು ಸರ್ಕಾರವನ್ನು ತಮ್ಮ ಮೂಲಕ ಕೇಳುತ್ತೇನೆ. ಭಾರಿ ನೀರಾವರಿಗಳ ವಿಷಯ ಈ ರೀತಿಯಾದರೆ, ಸಣ್ಣ ನೀರಾವರಿಯ ಯೋಜನೆಗಳದ್ದು ಇನ್ನೂ ಶೋಚನೀಯ ಪರಿಸ್ಥಿತಿ. ಕೆರೆಗಳಲ್ಲಿ ಹೂಳು ಇರುತ್ತದೆ. ಅದನ್ನೂ ಕೂಡ ತೆಗೆಸುವುದಿಲ್ಲ. ಮತ್ತೆ ಕೆಟ್ಟು ಹೋದ ಸ್ಲೂಯೀಸ್‌ಗಳನ್ನು ರಿಪೇರಿ ಮಾಡುವುದಿಲ್ಲ. ಮತ್ತು ಒಡೆದ ಹೋದ ಕರೆಯನ್ನು ರಿಪೇರಿ ಮಾಡದೆ ಎಷ್ಟೋ ಕೆರೆಗಳು ನಿಷ್ಪ್ರಯೋಜಕವಾಗಿವೆ. ಹೊಸ ಕೆರೆಗಳ ನಿರ್ಮಾಣದ ಬಗ್ಗೆ ಸರ್ಕಾರ ಯಾವ ರೀತಿ ಕ್ರಮ ತೆಗೆದುಕೊಂಡಿದೆ ಎಂಬುದನ್ನು ನಾವು ಪ್ರತಿ ಜಿಲ್ಲೆಯಲ್ಲೂ ನೋಡಬಹುದು. ಕೈಬೆರಳು ಎಣಿಸುವಷ್ಟು ಹೊಸ ಸಣ್ಣ ಕೆರೆಗಳ ನಿರ್ಮಾಣ ಕಾರ್ಯ ನಡೆದಿದೆ. ಸಣ್ಣ ಕೆರೆಗಳು ನಿರ್ಮಾಣ ಆಗುವುದರಲ್ಲಿ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಏತ ನೀರಾವರಿಯ ಬಗ್ಗೆ ಹೇಳುವುದಾದರೆ, ಏತ ನೀರಾವರಿ ಯೋಜನೆ ಅಲ್ಲಿಯೂ ಸಲ್ಲ, ಇಲ್ಲಿಯೂ ಸಲ್ಲ ಎಂಬ ಗಾದೆಯಂತೆ ತ್ರಿಶಂಕು ಸ್ವರ್ಗದಲ್ಲಿದ್ದಂತೆ ಇದೆ. ನನ್ನ ಕ್ಷೇತ್ರದ ಮಟ್ಟಿಗೆ ಹೇಳುವುದಾದರೆ ಕಳೆದ ೬ ವರ್ಷಗಳಿಂದಲೂ ಈ ಏತ ನೀರಾವರಿ ಯೋಜನೆ ಬರೀ ಕಾಗದದ ಮೇಲೆ ಕುಳಿತಿವೆ. ಇನ್ನೂ ಆ ಯೋಜನೆ ಕಾರ್ಯರೂಪಕ್ಕೆ ಬಂದಿಲ್ಲ. ಈ ಪರಿಸ್ಥಿತಿಯನ್ನು ತಪ್ಪಿಸಲು ಸರ್ಕಾರ ಒಂದು ಯೋಜನೆಯ ಸಮೀಕ್ಷೆ ಕಾರ್ಯದಿಂದ ಹಿಡಿದು, ಅಂದಾಜು, ತಾಂತ್ರಿಕ ಮತ್ತು ಆಡಳಿತ ಅನುಮೋದನೆಗಳವರೆವಿಗೂ ಕಾಲಮಿತಿಯನ್ನು ನಿಗದಿಪಡಿಸಬೇಕು. ಈ ರೀತಿ ಮಾಡಿದರೆ ಅಧಿಕಾರಿಗಳು ಫೈಲುಗಳನ್ನು ಕಾಲುಚೆಂಡ್ ಆಡುವ ರೀತಿಯಲ್ಲಿ ಆಡುವುದನ್ನು ತಪ್ಪಿಸಿದಂತಾಗುತ್ತದೆ ಎಂಬುದಾಗಿ ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ನೀರಾವರಿ ಉಪಯೋಗಿಸುವ ರೈತನ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ರೈತನಿಗೆ ಅವಶ್ಯಕವಾಗಿ ಬೇಕಾಗಿರುವುದು, ಗೊಬ್ಬರ; ಉತ್ತಮ ಬೀಜ, ಔಷಧಿ, ಇವೆಲ್ಲಕ್ಕೂ ಸರ್ಕಾರ ಸೊಸೈಟಿ ಮುಖಾಂತರ ಸಾಲದ ರೂಪದಲ್ಲಿ ಸಹಾಯ ಮಾಡದಿದ್ದರೆ ಬಹಳಷ್ಟು ಜನ ರೈತರು ಆರ್ಥಿಕವಾಗಿ ಹಿಂದುಳಿದವರು ಇವನ್ನೆಲ್ಲಾ ಕೊಂಡುಕೊಳ್ಳುವ ಕಾಲದಲ್ಲಿ ಆತನಲ್ಲಿ ಹಣ ಇಲ್ಲದೆ ಆತನು ಕೊಂಡುಕೊಳ್ಳಲಾಗದೆ ಈವತ್ತಿನ ದಿವಸ ನಮ್ಮ ದೇಶದಲ್ಲಿ ಅಪಾರ ಆಹಾರ ವಸ್ತುಗಳ ಉತ್ಪತ್ತಿ ಸಾಮರ್ಥ್ಯ ಕಡಿಮೆಯಾಗಿ ನಾವು ಆಹಾರ ಸಾಮಗ್ರಿಯ ಕೊರತೆಯನ್ನು ಕಾಣುತ್ತಿದ್ದೇವೆ, ಅವರ ದುರಾದೃಷ್ಟಕ್ಕೆ ಹಿಂದಿನ ಕೇಂದ್ರ ಸರ್ಕಾರದ ಹೊಡೆತದಿಂದ ಇನ್ನೂ ಚೇತರಿಸಿಕೊಳ್ಳಲಾಗಲಿಲ್ಲ. ಒಂದು ಮೂಟೆ ಗೊಬ್ಬರಕ್ಕೆ ೫೦ ರೂಪಾಯಿಗಳಿಂದ ೧೧೦ ರೂಪಾಯಿಗಳಿಗೇರಿಸಿದಾಗ ಮೂಕ ಪಶುವಿನಂತೆ ನೋವು ತಿಂದ. ಉತ್ತಮ ಬೀಜಗಳ ಕೊರತೆಯಿಂದ ಬಳಲಿದ. ರೈತ ಪಡೆಯುವ ಯಾವುದಾದರು ಒಂದು ವಸ್ತುವಿಗೆ ಒಂದು ನಿಗದಿಯಾದ ಬೆಲೆ ಇದೆ. ಉದಾಹರಣೆಗೆ ಒಂದು ಮೂಟೆ ಗೊಬ್ಬರಕ್ಕೆ ಇಂತಿಷ್ಟು ಬೆಲೆ. ಒಂದು ಕೇಜಿ ಬಿತ್ತನೆ ಬೀಜಕ್ಕೆ ಇಂತಿಷ್ಟು ಬೆಲೆ. ನೀರಿನ ತೆರಿಗೆ ಇಂತಿಷ್ಟು ಎಂಬು

ದಾಗಿ ಸರ್ಕಾರದವರು ನಿಗದಿ ಮಾಡಿ ರೈತನಿಂದ ಈ ಪ್ರಕಾರವಾಗಿ ವಸೂಲು ಮಾಡುತ್ತಾರೆ. ಆದರೆ ಅದೇ ರೈತ ಬೆಳೆದ ತರಕಾರಿಗೆ ಒಂದು ನಿರ್ಧಿಷ್ಟ ಬೆಲೆ ಇಲ್ಲ. ಅವನ ವರ್ಷದ ಶ್ರಮವೆಲ್ಲಾ ಬಹಳಷ್ಟು ಕಾಲ ಬೆಲೆಗಳ ಅಗಾದ ಕುಸಿತದಿಂದ ಹಾಳಾಗುತ್ತದೆ. ಆದರೆ ಅವನು ಬೆಳೆದ ಬೆಳೆಗೆ ಇದುವರೆಗೂ ಯಾವ ಸರ್ಕಾರ ಒಂದು ನಿರ್ಧಿಷ್ಟ ಬೆಲೆಯನ್ನು ಒದಗಿಸದೆ ಇರತಕ್ಕಂಥದ್ದು ಶೋಚನೀಯ. ಇದನ್ನು ತಪ್ಪಿಸಲು ಸರ್ಕಾರ ಅವನು ಬೆಳೆದ ಪಸಲಿಗೆ ಬೆಲೆ ಕಟ್ಟಬೇಕು. ಮತ್ತು ಅವನಿಂದ ಬೇರೆ ಯಾರಾದರೂ ಕೊಳ್ಳದೇ ಇದ್ದರೆ ಸರ್ಕಾರ ತಾನೇ ಕೊಂಡು ತನ್ನ ಮಳಿಗೆಗಳಲ್ಲಿ ಸಂಗ್ರಹಿಸಿ ಅವನ ಬೆಂಬಲಕ್ಕೆ ನಿಲ್ಲಬೇಕು.

ಇನ್ನು ಬೃಹತ್ ವಿದ್ಯುತ್ ಯೋಜನೆಗಳ ವಿಚಾರ. ಬೃಹತ್ ವಿದ್ಯುತ್ ಯೋಜನೆಗಳ ವಿದಾನದಿಂದ ನಮ್ಮ ಕೈಗಾರಿಕೆ ರಂಗ ಕುಸಿದಿದೆ. ಉದ್ಯೋಗ ಅವಕಾಶಗಳು ಕಡಿಮೆಯಾಗಿವೆ. ಈ ಬಾರಿ ಯೋಜನೆಗಳು ಕಾರ್ಯಗತವಾಗುವಲ್ಲಿ ಸರ್ಕಾರ ನಿರ್ಲಕ್ಷ್ಯದಿಂದ ಇದೆ. ಉದಾಹರಣೆಗೆ ಹೇಳುವುದಾದರೆ ಮೊನ್ನೆ ಮುಖ್ಯ ಮಂತ್ರಿಗಳ ಪ್ರಕಾರ ಕಾಳಿ ಯೋಜನೆಯ ಗುತ್ತಿಗೆದಾರನಿಗೆ, ನಮ್ಮ ತಂತ್ರಜ್ಞರು, ತರಬೇತಿ ನೀಡಿದ ನಂತರ ಈಗ ಕೆಲಸ ಸಾಗುತ್ತಿದೆಯಂತೆ. ಇದು ನಿರ್ಲಕ್ಷ್ಯವವಿಲ್ಲದೇ ಇನ್ನೇನು. ಇನ್ನು ಮುಂದೆ ಸರ್ಕಾರವು ನಿರ್ಲಕ್ಷ್ಯ ಭಾವ ತ್ಯಜಿಸಲಿ ಎಂದು ನಾನು ಕೋರುತ್ತೇನೆ. ವಿದ್ಯುತ್ ಈಗಿನ ಜನ ಜೀವನದಲ್ಲಿ ಗಾಳಿ, ನೀರುಗಳಷ್ಟೇ ಪ್ರಾಧಾನ್ಯ ಪಡೆದಿದೆ. ಆದ್ದರಿಂದ ಹೆಚ್ಚು ಪ್ರಾಧಾನ್ಯತೆಯನು ವಿದ್ಯುತ್ ಉತ್ಪಾದನೆಗೆ ಸರ್ಕಾರ ನೀಡಲಿ. ಇದರಿಂದ ಕಿಂಚಿತ್ ನಿರುದ್ಯೋಗ ನಿವಾರಣೆಯಾದರೂ ಆದೀತು.

ನಮ್ಮ ರಾಜ್ಯದಲ್ಲಿ ಸುಮಾರು ರಸ್ತೆಗಳು ಹೆಸರಿಗೆ ಮಾತ್ರ ರಸ್ತೆಗಳಾಗಿವೆ. ಆದರೆ ಅವು ಸಂಚಾರಕ್ಕೆ ಯೋಗ್ಯವಾಗಿಲ್ಲ. ರಸ್ತೆಗಳ ವಾರ್ಷಿಕ ದುರಸ್ತಿ ಕಾರ್ಯಗಳಿಗೆ ಸರ್ಕಾರ ನೀಡುತ್ತಿರುವ ಹಣವು ಏನೇನೂ ಸಾಲದು. ಒಂದು ವರ್ಷದಲ್ಲಿ ಒಂದು ಕಿಲೋಮೀಟರ್ ರಸ್ತೆಗೆ ೨೦೦ ರೂಪಾಯಿಗಳನು ಸರ್ಕಾರ ಒದಗಿಸುತ್ತದೆ. ಆದರೆ ಅದು ಏನೇನೂ ಸಾಲದು. ಗ್ರಾಮಾಂತರ ರಸ್ತೆಗಳನ್ನು ಸರ್ಕಾರ, ಸ್ಥಳೀಯ ಸಂಸ್ಥೆಗಳಿಂದ ಪಡೆದು ನಿರ್ಲಕ್ಷಿಸಿವೆ. ಗ್ರಾಮಾಂತರ ಪ್ರದೇಶದ ಸಾರಿಗೆ ವ್ಯವಸ್ಥೆ ಸರಿಯಿಲ್ಲದಿರುವುದಕ್ಕೆ ಕೆಟ್ಟ ರಸ್ತೆಗಳು ಕಾರಣ ಎಂದು ಹೇಳಬಯಸುತ್ತೇನೆ. ಗ್ರಾಮಾಂತರ ಪ್ರದೇಶದ ಕೆಲವು ರಸ್ತೆಗಳು ಮಳೆಗಾಲದಲ್ಲಂತೂ ಸಂಚಾರ ಯೋಗ್ಯವಲ್ಲದೆ ಇರುವುದರಿಂದ ಅಲ್ಲಿ ಬೆಳೆದ ಆಹಾರ ವಸ್ತುಗಳನ್ನು ರೈತರು ಸಾಗಾಣಿಕೆ ಮಾಡಲು ಅಂದರೆ ನಗರ ಪ್ರದೇಶಗಳಿಗೆ ಸಾಗಾಣಿಕೆ ಮಾಡಲು ಆಗದೆ ಅಪಾರ ಆಹಾರ ವಸ್ತುಗಳು ನಾಶವಾಗುತ್ತಿವೆ. ಆದ್ದರಿಂದ ಗ್ರಾಮಾಂತ ಪ್ರದೇಶದ ಜನರ ಅಭಿವೃದ್ಧಿಗಾಗಿ ರಸ್ತೆಗಳನ್ನು ಸುಸ್ಥಿತಿಯಲ್ಲಿ ಇಡಬೇಕಾಗಿರುವುದು ಸರ್ಕಾರದ ಕರ್ತವ್ಯವಾಗಿದೆ ಎಂಬುದಾಗಿ ನಾನು ಹೇಳುತ್ತಿದ್ದೇನೆ.

ಇನ್ನು ಸಾರಿಗೆ ವ್ಯವಸ್ಥೆ. ಇಂದು ನಮ್ಮ ರಾಜ್ಯದಲ್ಲಿ ಅವ್ಯವಸ್ಥೆಯಾಗಿದೆ. ಖಾಸಗಿಯವರಿಂದ ಬಲಾತ್ಕಾರವಾಗಿ ಬಸ್ಸುಗಳನ್ನು ಪಡೆದು ಆಟಾಟೋಪ ಮಾಡಿದ ನಂತರ, ರಾಷ್ಟ್ರೀಕರಣವಂತಹ ಘೋಷಣೆಗಳು ಈಗ ಕಡಿಮೆಯಾಗಿವೆ. ಖಾಸಗಿಯವರಿಗೆ ಕೆಲವುಕಡೆ ಬಸ್ ಪರ್ಮಿಟ್‌ಗಳನ್ನು ಕೊಡುವ ಯೋಚನೆಯು ಸರ್ಕಾರಕ್ಕೆ ಇದ್ದಂತೆ ಕಾಣುತ್ತಿದೆ. ಪುನಃ ಖಾಸಗಿಯವರಿಗೆ ಬಸ್ಸು ಪರ್ಮಿಟ್ ಕೊಡುವುದು ಏಕೆ ? ಇದು ಸರ್ಕಾರದ ಅದಕ್ಷತೆಯೋ ? ಅಥವಾ ಭ್ರಷ್ಟಾಚಾರದ ಫಲವೋ ? ಅಥವಾ ಅರಾ-ಷ್ಟ್ರೀಕರಣವೊ ತಿಳಿಯದು. ಜನ ಸಾಮಾನ್ಯರಿಗೆ ಮಾತ್ರ ಬಸ್ಸು ಯಾರೇ ಓಡಿಸಲಿ, ತನಗೆ ಸೌಕರ್ಯ ಬೇಕು. ಗಂಟೆಗಟ್ಟಲೇ ಕಾಯುವುದನ್ನು ತಪ್ಪಿಸಿ ಲಕ್ಷಾಂತರ ಮಂದಿ ಶಾಲಾ ಮಕ್ಕಳಿಗೆ ಸಕಾಲಕೆ ಶಾಲೆಗೆ ತಲುಪಿಸುವ ಕಾರ್ಯ ಈಗ ಸಾರಿಗೆ ಇಲಾಖೆಯ ಮೇಲಿದೆ. ಇದನ್ನು ಸ್ವತಃ ಸರ್ಕಾರವೊ ಅಥವಾ ಖಾಸಗಿಯವರೋ ಯಾರು ಮಾಡಿದರೇನು. ಅನುಕೂಲಗಳು ಆಗಬೇಕು ಎಂಬುದು ಜನತೆಯ ವಾದ. ಸರ್ಕಾರ ಇದರ ಬಗ್ಗೆ ಚಿಂತನೆ ಮಾಡುವುದು ಸೂಕ್ತ

ಇನ್ನು ಆರೋಗ್ಯ . ಮೊದಲೇ ನಮ್ಮ ಸರ್ಕಾರಕ್ಕೆ ಈ ಭಾಗ್ಯ ಇಲ್ಲ. ದಿನನಿತ್ಯ ಇಲ್ಲಿ ಮಂತ್ರಿಗಳ ಗೈರುಹಾಜರಿ, ಕಾರಣ ಅನಾರೋಗ್ಯ. ಮಂತ್ರಿಗಳ ಪಾಡೆ ಈ ರೀತಿ ಆದರೆ ಜನಸಾಮಾನ್ಯರ ಪಾಡೇನು ಎಂದು ಅರ್ಥ ಮಾಡಿಕೊಳ್ಳುವುದರಲ್ಲಿ ಕಷ್ಟವಾಗಲಾರದು. ಇಡೀ ರಾಜ್ಯ ರೋಗಪೀಡಿತವಾಗಿದೆ. ನಮ್ಮ ರಾಜ್ಯದ ಆಸ್ಪತ್ರೆಗಳು ಕೊಳಕಿನಲ್ಲಿ ಮೊದಲು. ಡಾಕ್ಟರುಗಳ ಗೈರುಹಾಜರಿಯಲ್ಲಿ ಮೊದಲು, ಭ್ರಷ್ಟಾಚಾರದಲ್ಲಿ ಮೊದಲು. ಇದ್ದ ಕೆಲವೇ ಸಿಬ್ಬಂದಿ ಪವಾಡ ಪುರುಷರನ್ನೂ ನಾಚಿಸುವ ವೈಖರಿಯಲ್ಲಿದೆ. ನಾನು ನೋಡಿದಹಾಗೆ ಕೆಲವು ಆಸ್ಪತ್ರೆಗಳಿವೆ. ಅಲ್ಲಿ ರೋಗಿ ಹೋದರೆ ಅವನ ಕಾರ್ಡ್ ನಂಬರ್ ಎಷ್ಟು ಎಂದು ಕೇಳುತ್ತಾರೆ, ಅವನು ನಂಬರ್ ಹೇಳುತ್ತಾನೆ. ಡಾಕ್ಟರು ಮುಖ ನೋಡುವುದೇ ಇಲ್ಲ. ಬಾಯಿಲೆ ಏನು ಎಂದು ಕೇಳಿ ರೋಗಿಯ ಮುಖವನ್ನೂ ನೋಡದೇ ನಾಡಿಯನೂ ನೋಡದೇ

ಔಷಧಿಯನ್ನು ಬರೆದುಕೊಡುತ್ತಾರೆ. ಹೀಗೆ ನಾಡಿ ಹಿಡಿಯದೇ, ಮುಖ ನೋಡದೇ ಔಷಧ ಕೊಡುವಷ್ಟು ಮುಂದುವರೆದಿದೆ ನಮ್ಮ ವೈದ್ಯ ವಿಜ್ಞಾನ. ನಮ್ಮ ಆರೋಗ್ಯ ಇಲಾಖೆಗೇ ಅನಾರೋಗ್ಯ ಹಿಡಿದಿದೆ. ರೋಗಿಯನ್ನು ಪರೀಕ್ಷಿಸದೇ ಔಷಧಿ ಕೊಡುವಷ್ಟುಮಟ್ಟಿಗೆ ನಮ್ಮ ರಾಜ್ಯದ ಆಸ್ಪತ್ರೆಗಳು ಮುಂದುವರೆದಿದೆ ಎಂದು ಸರ್ಕಾರ ಹೆಮ್ಮೆಯಿಂದ ಹೇಳಿಕೊಂಡು ಹೊರದೇಶದವರಿಗೆ ಬುದ್ಧಿ ಕಲಿಸಬೇಕಾಗಿದೆ. ಮತ್ತು ಅದರಿಂದ ರಾಯಲ್ಟಿ ಏನಾದರೂ ಬಂದರೆ ಅದರಿಂದ ಇನ್ನೂ ಹೆಚ್ಚಿನ ಆಸ್ಪತ್ರೆಗಳನ್ನು ಕಟ್ಟಿಸಿ ಜನರಿಗೆ ಅನುಕೂಲ ಮಾಡಿಕೊಡಬಹುದಾದ ಪರಿಸ್ಥಿತಿ ನಮ್ಮ ರಾಜ್ಯದಲ್ಲಿದೆ. ನಗರಗಳ ಆಸ್ಪತ್ರೆಗಳ ಮೇಲೆ ವಿಪರೀತ ರೋಗಿಗಳ ಒತ್ತಡ ಬಿದ್ದಿದೆ. ಇದನ್ನು ನಿವಾರಿಸಲು ಪ್ರತಿಯೊಂದು ತಾಲ್ಲೂಕಿನ ಮಟ್ಟದಲ್ಲಿ ಒಂದು ಸುಸಜ್ಜಿತ ಆಸ್ಪತ್ರೆಯ ಅಗತ್ಯವಿದೆ. ಗ್ರಾಮಾಂತರ ಮೂಲೆಗಳ ಜನರನ್ನು ಪರೀಕ್ಷಿಸಲು ಈ ತಾಲ್ಲೂಕು ಘಟಕಕ್ಕೆ ಸಂಬಂಧಿಸಿದಂತೆ ಒಂದು ಸಂಚಾರ ಆಸ್ಪತ್ರೆಯನ್ನು ಇಡತಕ್ಕದ್ದು. ಪರಿಸ್ಥಿತಿ ವಿಷಮಿಸಿದ ರೋಗಿಯನ್ನು ಆಸ್ಪತ್ರೆಗೆ ತರುವುದು ಉಳಿದವರಿಗೆಲ್ಲಾ ಸಂಚಾರಿ ಆಸ್ಪತ್ರೆಯ ಸೌಲಭ್ಯ ದೊರಕಿಸಬೇಕು.

ಇನ್ನು ವಿದ್ಯಾಭ್ಯಾಸ. ನಮ್ಮಲ್ಲಿನ ಈಗಿನ ವಿದ್ಯಾಭ್ಯಾಸ ಪದ್ಧತಿ ನಿರುದ್ಯೋಗಿಗಳನ್ನು ಉತ್ಪಾದಿಸುವ ಯೋಜನೆ ಆಗಿದೆ. ಈ ಪದ್ಧತಿಯನ್ನು ಪರಿಷ್ಕರಿಸಿ job oriented ವಿದ್ಯಾಭ್ಯಾಸವನ್ನು ಅಳವಡಿಸಬೇಕು. ಸಾಕಷ್ಟು ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು, ವ್ಯವಸಾಯ ತರಬೇತಿ ಸಂಸ್ಥೆಗಳನ್ನು, ಕುಶಲಕರ್ಮಿಗಳ ತರಬೇತಿ ಸಂಸ್ಥೆಗಳನ್ನು ತೆರೆದು ಕಾಲೇಜುಗಳ ಮೇಲಿನ ಒತ್ತಡವನ್ನು ತಗ್ಗಿಸಬೇಕು. ಪ್ರಾಥಮಿಕ ವಿದ್ಯಾಭ್ಯಾಸದ ಬಗ್ಗೆ ಕಡಿಮೆ ಹೇಳುವುದು ಒಳ್ಳೆಯದು. ಒಂದು ಕೊಠಡಿ ಇದು ಒಂದು ಶಾಲೆ. ಇಲ್ಲಿ ನಾಲ್ಕು ತರಗತಿಗಳು, ಒಬ್ಬರೇ ಉಪಾಧ್ಯಾಯರು. ಕೆಲವು ಕಡೆ ಶಾಲೆಗಳಿವೆ, ವಿದ್ಯಾರ್ಥಿಗಳಿದ್ದರೆ ಉಪಾಧ್ಯಾಯರಿಲ್ಲ. ಈ ಪರಿಸ್ಥಿತಿಗೆ ಸರ್ಕಾರದ ಬೇಜವಾಬ್ದಾರಿತನ ಕಾರಣ. ಮಾಧ್ಯಮಿಕ ಶಾಲೆಗಳಲ್ಲಿನ ಪರಿಸ್ಥಿತಿಯಲ್ಲಿ ವ್ಯತ್ಯಾಸವಿಲ್ಲ. ನಮ್ಮ ಶಾಲೆಗಳಲ್ಲಿ ಓದುವ ಅರ್ಧ ಮಂದಿ ಬಾಲಕ ಬಾಲಕೀಯರು ಪ್ರೌಢಶಾಲೆಯನ್ನು ತಲುಪುವುದಿಲ್ಲ. ಇದರಲ್ಲಿ ಬಹಳಷ್ಟು ಮಂದಿ ಹರಿಜನರು ಅಥವಾ ದುರ್ಬಲ ವರ್ಗದವರು. ಆದ್ದರಿಂದ ಸರ್ಕಾರ ಸರಿಯಾದ ಶಾಸನವನ್ನು ತಂದು ಮಕ್ಕಳನ್ನು ಶಾಲೆಗೆ ಕಳುಹಿಸದ ತಂದೆ ತಾಯಿಗಳಿಗೆ ಶಿಕ್ಷೆ ವಿಧಿಸುವ ಕಾನೂನನ್ನು ತಂದರೆ ಮಾತ್ರ ಕಡ್ಡಾಯ ಶಿಕ್ಷಣವನ್ನು ನಮ್ಮ ಮಕ್ಕಳಿಗೆ ನೀಡಬಹುದು.

ಇನ್ನು ಅಭಾವ ಪರಿಹಾರ ಕಾಮಗಾರಿಗಳು.—ಇವು ನಮ್ಮಲ್ಲಿನ ಒಂದು ವರ್ಗಕ್ಕೆ ಗರೀಬಿ ಹಠಾವೋ ಕಾರ್ಯಕ್ರಮಗಳಾಗಿವೆ. ಈ ಹೆಸರಿನಲ್ಲಿ ಶ್ರೀಮಂತರಾದವರ ಸಂಖ್ಯೆ ಕಡಿಮೆ ಇಲ್ಲ. ಇಲ್ಲಿ ಮಾಡಿದ ವ್ಯಯದ ಫಲ ಬಹಳಷ್ಟು ಶೂನ್ಯವಾಗಿದೆ. ಯೋಚಿಸಿದ ಕೆಲಸವೂ ಇಲ್ಲ. ಬಡಜನರಿಗೆ ಕೂಲಿ ಸಹ ಇಲ್ಲ. ಎಲ್ಲಾ ಬುಕ್ ಅಡ್ಜಸ್ಟ್‌ಮೆಂಟ್ ಮಾಡಿಕೊಂಡು ಅಧಿಕಾರಿಗಳು ಕಂಟ್ರಾಕ್ಟರುಗಳು ಲಪಟಾಯಿಸುತ್ತಿದ್ದಾರೆ. ಈ ಕಾಮಗಾರಿಗಳಲ್ಲಿ ಸರ್ಕಾರ ಬೇಕಾಬಿಟ್ಟಿಯಾಗಿ ವ್ಯವಹರಿಸದೆ ಕೆಲವು ನಿರ್ದಿಷ್ಟ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಉದಾಹರಣೆಗೆ, ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿನ ಬಾವಿ ತೋಡುವುದು, ಕೆರೆಯಲ್ಲಿ ಹೂಳೆತ್ತುವುದು, ಒಡೆದ ಕೆರೆ ಕಟ್ಟೆಯನ್ನು ರಿಪೇರಿ ಮಾಡುವುದು, ರಸ್ತೆ ನಿರ್ಮಾಣ ಮಾಡುವುದು, ಗ್ರಾಮಗಳಲ್ಲಿನ ಕೊಳಚೆ ನೀರಿನ ಚರಂಡಿಗಳನ್ನು ತೋಡುವುದು, ಅಚ್ಚುಕಟ್ಟಿನಲ್ಲಿ ಬರುವ ಕಾಲುವೆಗಳ ದುರಸ್ತಿ, ಈ ರೀತಿಯ ನಿರ್ದಿಷ್ಟ ಕಾರ್ಯ ನಡೆಸಿದರೆ ಸಾಧನೆಯನ್ನು ಲೆಕ್ಕಕ್ಕಿಡಬಹುದು ಮತ್ತು ಜನರಿಗೆ ಉದ್ಯೋಗ ಕಲ್ಪಿಸಬಹುದು. ಈ ಕೆಲಸಗಳನ್ನು ಅಭಾವ ಕಾಮಗಾರಿಗಳ ಲೆಕ್ಕದಲ್ಲಿ ನಡೆಸಿದರೆ ಬಜೆಟ್ಟಿನಲ್ಲಿ ಈ ಕೆಲಸಗಳ ಎದುರು ತೋರಿಸಿರುವ ಹಣದಲ್ಲಿ ಉಳಿತಾಯವಾಗುತ್ತದೆ. ಸರ್ಕಾರ ಈ ದಿಸೆಯಲ್ಲಿ ಯೋಚಿಸಬೇಕಾದ್ದು ಪ್ರಮುಖವಾದ ಅಂಶ.

ಒಬ್ಬ ಇಂಜಿನಿಯರ್ ಆಗಿ ನಾನು ಅವರ ಬಗ್ಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಒಂದು ರಾಷ್ಟ್ರದ ಕಂಬಗಳು ಇಂಜಿನಿಯರುಗಳು ಎಂದು ದಿವಂಗತ ಪ್ರಧಾನಿ ನೆಹರೂರವರು ತಿಳಿಸಿದ್ದರು. ನಮ್ಮ ರಾಜ್ಯದ ಇಂಜಿನಿಯರುಗಳ ಸೇವೆ ಇಡೀ ರಾಷ್ಟ್ರದಾದ್ಯಂತ ನಡೆಯುತ್ತಿದೆ. ದಿವಂಗತ ವಿಶ್ವೇಶ್ವರಯ್ಯನವರ ನಾಡಾದ ನಮ್ಮ ನಾಡಿನ ಇಂಜಿನಿಯರುಗಳು ಲೋಕೋಪಯೋಗಿ ಇಲಾಖೆಯಲ್ಲಿ ದಕ್ಷತೆಯಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದನ್ನು ನಮ್ಮ ಮುಖ್ಯ ಮಂತ್ರಿಗಳು ಕಾಳಿನದಿಯ ಬಗ್ಗೆ ಮಾತನಾಡಿದಾಗ ಹೆಮ್ಮೆಯಿಂದ ನುಡಿದರು. ಅಂತಹ ಇಂಜಿನಿಯರುಗಳಿಗೆ ಅವರದೇ ನಾಡಿನಲ್ಲಿ ಮನ್ನಣೆ ಇಲ್ಲದೇ ಇರುವುದು ದುರ್ದೈವದ ಸಂಗತಿ. ವೈದ್ಯ ಮತ್ತು ಇಂಜಿನಿಯರ್ ಇವರದು ಸಮಾನ ಸೇವೆ. ಇಬ್ಬರೂ ದೇಶಕ್ಕಾಗಿ ದುಡಿಯುವವರು. ಒಂದು ಹೆಜ್ಜೆ ಮುಂದೆ ಹೋದರೆ ಇಂಜಿನಿಯರುಗಳ ಪರಿಶ್ರಮವೇ

ಹೆಚ್ಚು. ನಿಸರ್ಗದ ವಿರುದ್ಧ ಹೋರಾಡಿ ಪ್ರಗತಿಗೆ ಬೇಕಾದ ನೀರಾವರಿ, ವಿದ್ಯುತ್, ಸೇತುವೆ, ರಸ್ತೆಗಳ ನಿರ್ಮಾಣ ಕಾರ್ಯದಲ್ಲಿ ಹಗಲಿರುಳು ದುಡಿಯುತ್ತಾರೆ. ಆದ್ದರಿಂದ ಇಂಜಿನಿಯರುಗಳ ವೇತನವನ್ನು ಕನಿಷ್ಠ ಪಕ್ಷ ವೈದ್ಯರ ವೇತನವಟ್ಟಕ್ಕಾದರೂ ಮುಟ್ಟಿಸಿದರೆ ಅವರಿಗೆ ಅಲ್ಪಸಮಾಧಾನವಾದರೂ ಆಗುತ್ತದೆ. ಅವನ ಆತ್ಮಗೌರವ, ಆತ್ಮ ಸ್ಥೈರ್ಯವನ್ನು ಬೆಳೆಸಬಹುದು. ಇದರಿಂದ ನಾಡಿಗೆ ಲಾಭ, ಆದ್ದರಿಂದ ಅವರ ಬಹಳ ದಿನದ ಬೇಡಿಕೆಯನ್ನು ಈಡೇರಿಸಬೇಕೆಂದು ಸೂಚಿಸುತ್ತೇನೆ. ಕಡೆಯದಾಗಿ ವರ್ಗ ಸಂಘರ್ಷ, ಸಮಾಜವಾದ. ಈ ಮಾತುಗಳನ್ನು ನಮ್ಮ ನಾಡಿನಲ್ಲಿ ಕೆಲವು ಮಂದಿ ರಾಜಕೀಯ ನಾಯಕರುಗಳು ಮಾತನಾಡುತ್ತಿದ್ದಾರೆ. ದಲಿತರ ಏಳಿಗೆಯ ನಾಟಕ ಸೂತ್ರದಾರಿಗಳ ಜೀವನ ನಡೆಸುವ ವೈಖರಿ ಇದು. ಇರುವುದಕ್ಕೆ ಬೆಂಗಳೂರು ಅರಮನೆಯಂಥ ಮನೆ ಬೇಕು ಏಕೆಂದರೆ ರಾಜರುಗಳನ್ನು ಓಡಿಸಿದ ಚಕ್ರವರ್ತಿಗಳು ಇವರಲ್ಲವೇ ? ಓಡಾಡಲು ವಿದೇಶೀ ಕಾರು. ಏಕೆಂದರೆ ಪರದೇಶಿಗಳನ್ನು ಓಡಿಸಿದ ಧೀರರು ಇವರು, ರಥಗಳು ವಿದೇಶದ್ದಾಗಿರಬೇಡವೇ ? ಬಾಯಲ್ಲಿ ಪರದೇಶೀ ಸಿಗಾರು, ಕೈಯಲ್ಲಿ ರಾಯಲ್ ಸೆಲ್ಯೂಟ್. ಇವರು ಆಡುವುದು ಬಡವರ ಏಳಿಗೆಯ ಮಾತು. ಇವರೇ ಸಮಾಜದ ನವ್ಯ ಉದ್ಧಾರಕರು.

ಇವಿಷ್ಟು ಹೇಳಿ ನಮ್ಮ ಸಮಾಜದ ಏಳಿಗೆಗೆ, ಬಡತನ ನಿವಾರಿಸಲು ಏನೇನೂ ಇಲ್ಲದ ಬಜೆಟ್ ಇದು ಎಂದು ಹೇಳಿ ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

MR. SPEAKER.—The Business Advisory Committee at a meeting held to-day has recommended that after completing the general discussion on budget on 1st July as already decided the House may take up Legislative Business on 3rd July and djscussion and Voting of Demands for Grants from 4th July. The Committee has also suggested that Satuarday the 8th July may be devoted for discussion and Voting of Demands for grants instead of Non-official businesss as now scheduled in order to complete all stages of the Budget before the 29th ofJuly, 1978.

The House now stands adjourned and will meet tomorrow at 9-00 A. M.

The House adjourned at Fiftyfive minutes past Five of the clock to meet again at Nine of the clock on Friday the 30th June 1978.